ಅಂಚೆ ಕಛೇರಿ ಉಳಿತಾಯ ಯೋಜನೆಗಳ ಕುರಿತು ಪುತ್ತೂರು ಪಟ್ಟಣದ ಮಹಿಳಾ ಹೂಡಿಕೆದಾರರ ಅನಿಸಿಕೆಗಳ ಒಂದು ಅಧ್ಯಯನ

ಕನ್ನಡ ವಿಶ್ವವಿದ್ಯಾಲಯ ಹಂಪಿ ಅಭಿವೃದ್ಧಿ ಅಧ್ಯಯನ

ಎಂ.ಫಿಲ್. ಪದವಿಗಾಗಿ

Kannada University Logo

ಸಂಶೋಧಕರು

ಗೀತಾ ಹೆಗಡೆ

ನೋಂದಣಿ ಸಂಖ್ಯೆ: 151111030059

ಮಾರ್ಗದರ್ಶಕರು

ಡಾ॥ ದುಗ್ಗಪ್ಪ ಕಜೆಕಾರ್

ಕರ್ನಾಟಕ ಥಿಯೋಲಾಜಿಕಲ್ ಸಂಶೋಧನಾ ಕೇಂದ್ರ

ಬಲ್ಮಠ, ಮಂಗಳೂರು, ದಕ್ಷಿಣಕನ್ನಡ–೫೭೫ ೦೦೧

ಜುಲೈ, 2016

ಡಾ. ದುಗ್ಗಪ್ಪ ಕಜೆಕಾರ್
ವಿಭಾಗ ಮುಖ್ಯಸ್ಥರು
ಸಮಾಜಕಾರ್ಯ ಸ್ನಾತಕೋತ್ತರ ವಿಭಾಗ
ಸರಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ಸ್ನಾತಕೋತ್ತರ
ಅಧ್ಯಯನ ಕೇಂದ್ರ, ತೆಂಕನಿಡಿಯೂರು, ಉಡುಪಿ.

ಸಂಶೋಧನಾ ಮಾರ್ಗದರ್ಶಕರು
ಕರ್ನಾಟಕ ಥಿಯೋಲಾಜಿಕಲ್ ಸಂಶೋಧನಾ
ಕೇಂದ್ರ, ಬಲ್ಮಠ, ಮಂಗಳೂರು

ದೃಢೀಕರಣಪತ್ರ

ಶ್ರೀಮತಿ ಗೀತಾ ಹೆಗಡೆ ಇವರು ನನ್ನ ಸಲಹೆ ಮತ್ತು ಮಾರ್ಗದರ್ಶನದಲ್ಲಿ "ಅಂಚೆ ಕಛೇರಿ ಉಳಿತಾಯ ಯೋಜನೆಗಳ ಕುರಿತು ಪುತ್ತೂರು ಪಟ್ಟಣದ ಮಹಿಳಾ ಹೂಡಿಕೆದಾರರ ಅನಿಸಿಕೆಗಳ ಒಂದು ಅಧ್ಯಯನ" ಎಂಬ ಶೀರ್ಷಿಕೆಯ ಈ ಸಂಪ್ರಬಂಧವನ್ನು ಎಂ.ಫಿಲ್. ಪದವಿ ಪ್ರಾಪ್ತಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಸಿದ್ಧಪಡಿಸಿದ್ದಾರೆ. ಈ ಸಂಪ್ರಬಂಧವು ಸಂಶೋಧಕರ ಸ್ವಂತ ಪರಿಶ್ರಮ, ವಿಶ್ಲೇಷಣೆ, ಅಭಿಪ್ರಾಯ ಸಂಗ್ರಹ ಮತ್ತು ಸಂಶೋಧನೆಯ ಫಲ ಸ್ವರೂಪವಾಗಿದೆ. ಇವರು ಈ ಸಂಪ್ರಬಂಧದ ವಿಷಯವನ್ನು ಅಥವಾ ಇನ್ನಾವುದೇ ಭಾಗವನ್ನು ಭಾಗಶ:ವಾಗಿಯಾಗಲಿ, ಪೂರ್ಣವಾಗಿಯಾಗಲಿ ಯಾವುದೇ ವಿಶ್ವ ವಿದ್ಯಾನಿಲಯದ ಪದವಿ ಅಥವಾ ಡಿಪ್ಲೊಮಾ ಗಳಿಸಲು ಯಾವ ಭಾಷೆಯಲ್ಲೂ ಸಲ್ಲಿಸಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ: ಉಡುಪಿ
ದಿನಾಂಕ: 11/07/2016

ಡಾ. ದುಗ್ಗಪ್ಪ ಕಜೆಕಾರ್
Co-ordinator
Department of P.G. Studies in Social Work
Govt. First Grade College
Thenkanidiyur, Udupi - 576 106

ಪ್ರಮಾಣ ಪತ್ರ

ಹಂಪಿ ಕನ್ನಡ ವಿಶ್ವ ವಿದ್ಯಾಲಯದ ಎಂ. ಫಿಲ್. ಪದವಿಗಾಗಿ ಸಾದರ ಪಡಿಸಿದ "ಅಂಚೆ ಕಛೇರಿ ಉಳಿತಾಯ ಯೋಜನೆಗಳ ಕುರಿತು ಪುತ್ತೂರು ಪಟ್ಟಣದ ಮಹಿಳಾ ಹೂಡಿಕೆದಾರರ ಅನಿಸಿಕೆಗಳ ಒಂದು ಅಧ್ಯಯನ" ಎಂಬ ಶೀರ್ಷಿಕೆಯ ಈ ಸಂಪ್ರಬಂಧವು ನನ್ನ ಸ್ವತಂತ್ರಕೃತಿಯಾಗಿದ್ದು ವಿಶ್ಲೇಷಣೆ ಮತ್ತು ಅಧ್ಯಯನದ ಫಲವಾಗಿದೆ. ಮಂಗಳೂರಿನ ಕರ್ನಾಟಕ ಥಿಯೋಲಾಜಿಕಲ್ ಸಂಶೋಧನಾ ಕೇಂದ್ರ ಬಲ್ಮಠ, ಮಂಗಳೂರು ಈ ಸಂಸ್ಥೆಯ ಡಾ। ದುಗ್ಗಪ್ಪ ಕಜೆಕಾರ್ ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ ಈ ಸಂಪ್ರಬಂಧವನ್ನು ಬೇರಾವುದೇ ಪದವಿ, ಡಿಪ್ಲೋಮಾ ಅಥವಾ ತತ್ಸಮಾನ ಉಪಾಧಿಗಳ ವ್ಯಾಪ್ತಿಗಾಗಿ ಅಥವಾ ಆರ್ಥಿಕ ಲಾಭಗಳಿಗಾಗಿ ಇಡಿಯಾಗಿ ಅಥವಾ ಬಿಡಿಯಾಗಿ ಬಳಸಿಕೊಂಡಿಲ್ಲವೆಂದು ನಾನು ಈ ಮೂಲಕ ದೃಢಪಡಿಸುತ್ತೇನೆ.

ಶ್ರೀಮತಿ ಗೀತಾ ಹೆಗಡೆ
ಸಂಶೋಧಕರು
ಕರ್ನಾಟಕ ಥಿಯೋಲಾಜಿಕಲ್ ಸಂಶೋಧನಾ ಕೇಂದ್ರ
ಬಲ್ಮಠ, ಮಂಗಳೂರು

ದಿನಾಂಕ:
ಮಂಗಳೂರು

ಅನುಕ್ರಮಣಿಕೆ

ಅನುಕ್ರಮಣಿಕಾ ಪದರ

ದತ್ತಾಂಶ ಹಾಗೂ ಮಾಹಿತಿ ವಿಶ್ಲೇಷಣೆಯಲ್ಲಿ ಉಪಯೋಗಿಸಿದ ಕೋಷ್ಟಕಗಳ ಪಟ್ಟಿ

ದತ್ತಾಂಶ ಹಾಗೂ ಮಾಹಿತಿ ವಿಶ್ಲೇಷಣೆಯಲ್ಲಿ ಉಪಯೋಗಿಸಿದ ನಕ್ಷೆಗಳ ಪಟ್ಟಿ

India Post

ಅಧೀನ	:	ಭಾರತ ಸರಕಾರದ ಅಂಗಸಂಸ್ಥೆ
ಉದ್ದಿಮೆ	:	ಅಂಚೆ ಸೇವೆಗಳು ಅಂಚೆ ರವಾನೆ
ಸ್ಥಾಪನೆ	:	೧ ಏಪ್ರಿಲ್ ೧೨೨೪
ಮುಖ್ಯಕಛೇರಿ	:	ಸಂಸತ್ ಮಾರ್ಗ, ನವದೆಹಲಿ
ಅಧಿಕಾರಿಗಳು	:	ಎಸ್. ಕೆ. ಸಿನ್ಹ ನಿರ್ದೇಶಕರು ಹಾಗೂ ಕಾರ್ಯದರ್ಶಿ
ಸೇವೆಗಳು	:	ಅಂಚೆ ಪತ್ರ ವಿಶೇಷ ಸೇವೆಗಳು, ಇ.ಎಂ.ಎಸ್., ಬಟವಾಡೆ, ಸರಕು ಸಾಗಾಣಿಕೆ, ರವಾನೆ (ತೃತೀಯ ಪಕ್ಷ) ಠೇವಣಿಯ ಖಾತೆ
ಸಿಬ್ಬಂದಿ	:	466903 (31ನೇ ಮಾರ್ಚ್ 2016ರ ಅಂತ್ಯಕ್ಕೆ)
ಘೋಷ ವಾಕ್ಯ	:	'ಡಾಕ್ ಸೇವಾ ಜನಸೇವಾ'
ಅಂತರ್ಜಾಲ	:	www.indiapost.gov.in

ಅಧ್ಯಾಯ ೧

ಪೀಠಿಕೆ

ಅಧ್ಯಾಯ 1

ಪೀಠಿಕೆ

ನಮ್ಮ ದೇಶದ ಆಧುನಿಕ ರೀತಿಯ ಅರ್ಥ ವ್ಯವಸ್ಥೆಗೆ ಭದ್ರವಾದ ಅಡಿಪಾಯ ಹಾಕಿದ ಮಾಜಿ ಪ್ರಧಾನಿ ಶ್ರೀಯುತ ಪಂ. ಆವಾಹರಲಾಲ್ ನೆಹರು ಹೀಗೆ ನುಡಿದಿದ್ದರು – "ಆರ್ಥಿಕ ಸ್ವಾತಂತ್ರ್ಯ ಇಲ್ಲದ ರಾಜಕೀಯ ಸ್ವಾತಂತ್ರ್ಯಕ್ಕೆ ಅರ್ಥವೇ ಇಲ್ಲ". ಆದುದರಿಂದ "ಆರ್ಥಿಕ ಅಭಿವೃದ್ಧಿ ಮೂಲಕ ಆರ್ಥಿಕ ಸ್ವಾತಂತ್ರ್ಯ" ಇದು ಎಲ್ಲಾ ಅಭಿವೃದ್ಧಿಶೀಲ ರಾಷ್ಟ್ರಗಳ ಮುಖ್ಯ ಗುರಿಯಾಗಿರಬೇಕು ಎಂದು ಅವರು ಅಭಿಪ್ರಾಯ ಪಟ್ಟಿದರು. ಆದರೆ ತನ್ನ ಆರ್ಥಿಕ ಅಭಿವೃದ್ಧಿಯನ್ನು ಗುರಿಯಾಗಿಸಿಕೊಂಡಿರುವ ಯಾವುದೇ ಒಂದು ದೇಶವು ತನ್ನಲ್ಲಿ ಬಲವಾದ, ಸ್ಥಿರ ಹಾಗೂ ಭದ್ರವಾದ ಆರ್ಥಿಕ ಮೂಲಭೂತ ಸೌಕರ್ಯವನ್ನು ಹೊಂದಿರಬೇಕಾಗುತ್ತದೆ. ಅಂತಹ ಒಂದು ವ್ಯವಸ್ಥೆಯೇ ವಸ್ತುಗಳ ಹಾಗೂ ಸೇವೆಗಳ ಉತ್ಪಾದನೆಗೆ ಬೇಕಾದ ಅಗತ್ಯತೆಗಳನ್ನು ಒದಗಿಸಿ ತನ್ಮೂಲಕ ಆದೇಶದ ಜನರ ಜೀವನ ಮಟ್ಟ ಹಾಗೂ ಕ್ಷೇಮಾಭಿವೃದ್ಧಿಗಳನ್ನು ಪ್ರವರ್ತಿಸುತ್ತವೆ. ಅವಶ್ಯವಿರುವ ಬಂಡವಾಳದ ಕ್ರೋಢೀಕರಣ ಹಾಗೂ ಅದರ ಪರಿಣಾಮಕಾರೀ ವಿನಿಯೋಗ, ಇವುಗಳು ಇಂತಹ ಒಂದು ಆರ್ಥಿಕ ಅಭಿವೃದ್ಧಿ ವ್ಯವಸ್ಥೆಗೆ ಮಾಧ್ಯಮವಾಗಿ ವರ್ತಿಸುತ್ತವೆ. ಇದರಿಂದ ಆರ್ಥಿಕ ವಲಯದ ಕೆಲಸ ಕಾರ್ಯಗಳಲ್ಲಿ ದಕ್ಷತೆ ಉಂಟಾಗಿ, ಹೆಚ್ಚಿನ ಉತ್ಪಾದನಾ ಚಟುವಟಿಕೆಗಳಿಗೆ ಬೇಕಾದ ಹಣಕಾಸಿನ ಪೂರೈಕೆ ಮುಕ್ತವಾಗಿ ಹರಿಯುವಂತೆ ಮಾಡಿ ಆ ಮೂಲಕ ದೇಶದ ತ್ವರಿತ ಆರ್ಥಿಕ ಅಭಿವೃದ್ಧಿಗೆ ಅನುವು ಮಾಡಿಕೊಡುತ್ತದೆ. ಆದರೆ, ಈ ಎಲ್ಲಾ ಹಣಕಾಸು ಕ್ರೋಢೀಕರಣ ಹಾಗೂ ವಿನಿಯೋಗ ಇತ್ಯಾದಿ ಆರ್ಥಿಕ ಚಟುವಟಿಕೆಗಳ ಬೆನ್ನೆಲುಬು ಸಾರ್ವಜನಿಕ ಹಣಕಾಸು ಹೂಡಿಕೆಗಳಾಗಿವೆ ಹಾಗೂ ತನ್ಮೂಲಕ ಆರ್ಥಿಕ ಅಭಿವೃದ್ಧಿಗೆ ಮೂಲವಾಗಿದೆ.

ಹೂಡಿಕೆಗಳು – ಅರ್ಥ ವ್ಯಾಪ್ತಿ

'ಹೂಡಿಕೆಗಳು' ಅನ್ನುವ ಪದದ ಅರ್ಥ ವ್ಯಾಪ್ತಿಯು ಬಹು ವಿಶಾಲವಾಗಿದೆ. ಯಾಕೆಂದರೆ ಈ ಶಬ್ದಕ್ಕೆ ವಿದ್ವಾಂಸರು ವಿವಿಧ ರೀತಿಯ ವ್ಯಾಖ್ಯೆಗಳನ್ನು ನೀಡುತ್ತಾರೆ.

ಒಂದು ಅರ್ಥದಲ್ಲಿ 'ಆದಾಯ ಗಳಿಕೆ ಅಥವಾ ಬಂಡವಾಳ ವೃದ್ಧಿ ಇವುಗಳನ್ನು ಉದ್ದೇಶವಾಗಿಸಿ ವಿವಿಧ ಆಸ್ತಿಗಳ ಮೇಲೆ ವಿನಿಯೋಗಿಸುವ ಹಣಕಾಸನ್ನು ಹೂಡಿಕೆಗಳು' ಅನ್ನಲಾಗಿದೆ.

'ಸಾಮಾನ್ಯ ವ್ಯಕ್ತಿಯ ದೃಷ್ಟಿಯಲ್ಲಿ ಹೂಡಿಕೆಗಳೆಂದರೆ ಒಂದು ರೀತಿಯ ಹಣಕಾಸಿನ ಬದ್ಧತೆ' ಎಂದು ಇನ್ನೊಬ್ಬ ವಿದ್ವಾಂಸರು ಹೂಡಿಕೆಗಳನ್ನು ಅರ್ಥೈಸುತ್ತಾರೆ.

ಒಬ್ಬ ಆರ್ಥಿಕ ತಜ್ಞನ ದೃಷ್ಟಿಯಲ್ಲಿ ಹೂಡಿಕೆಗಳೆಂದರೆ, 'ಉತ್ಪಾದನಾ ಪ್ರಕ್ರಿಯೆಯಲ್ಲಿ ಉಪಯೋಗಿಸುವ ಸರಕು ಹಾಗೂ ಸೇವೆಗಳನ್ನೊಳಗೊಂಡ ಬಂಡವಾಳ ಸರಕು ದಾಸ್ತಾನಿಗೆ ಸೇರಿಸಲಾಗುವ ನಿವ್ವಳ ಆರ್ಥಿಕ ಸೇರ್ಪಡೆ' ಆಗಿದೆ.

'ಭವಿಷ್ಯದ ಅಥವಾ ಅರ್ಥಿಕ ಸಂಕಷ್ಟದ ದಿನಗಳಲ್ಲಿ ಉಪಯೋಗಿಸುವ ಉದ್ದೇಶವಿಟ್ಟುಕೊಂಡು ವರ್ತಮಾನ ಕಾಲದಲ್ಲಿ ಖರೀದಿಸುವ ಸರಕು ಸಾಮಾನುಗಳನ್ನು ಹೂಡಿಕೆಗಳು ಅನ್ನಬಹುದು' ಎಂದು ಇನ್ನೊಬ್ಬ ತಜ್ಞರು ಅಭಿಪ್ರಾಯ ಪಡುತ್ತಾರೆ.

ಒಟ್ಟಿನಲ್ಲಿ 'ಭವಿಷ್ಯದಲ್ಲಿ ಲಾಭ ಹಾಗೂ ಅಧಾಯವನ್ನು ನಿರೀಕ್ಷಿಸಿ, ಮುಂದಿನ ದಿನಗಳಲ್ಲಿ ಬರಬಹುದಾದ ಆರ್ಥಿಕ ಖರ್ಚು ವೆಚ್ಚಗಳನ್ನು ನಿಭಾಯಿಸಲು ಕಡಿಮೆ ನಷ್ಟ ಭಯದ ಯಾವುದೇ ರೀತಿಯ ಹಣದ ವಿನಿಯೋಗವನ್ನು' ಹೂಡಿಕೆಗಳು ಅನ್ನಬಹುದಾಗಿದೆ.

ಹೂಡಿಕೆಗಳ ಉದ್ದೇಶಗಳು

ಆರ್ಥಿಕ ಆದಾಯದಲ್ಲಿ ವೃದ್ಧಿ ಮತ್ತು ಕಡಿಮೆ ನಷ್ಟ ಭಯ ಇವು ಎರಡು ಹಣಕಾಸು ಹೂಡಿಕೆಗಳ ಮುಖ್ಯ ಉದ್ದೇಶವಾಗಿದೆ. ಇದರೊಡನೆ ಸುರಕ್ಷತೆ, ದ್ರವತ್ವ, ಹಣದುಬ್ಬರದ ವಿರುದ್ದ ರಕ್ಷಣೆ ಇವುಗಳುಪೂರಕ ಉದ್ದೇಶಗಳಾಗಿವೆ.

ಆದಾಯ

ಎಲ್ಲಾ ಹೂಡಿಕೆದಾರರು ಪ್ರಪ್ರಥಮವಾಗಿ ಗಮನಿಸುವ ವಿಷಯ ಅಂದರೆ ಹೂಡಿಕೆಗಳಿಂದ ಬರಬಹುದಾದ ಆದಾಯ. ಇದು ಹೂಡಿಕೆಗಳಿಗೆ ಬರುವ ಪ್ರತಿಫಲ. ಎಲ್ಲರೂ ಹೂಡಿಕೆಗಳಿಂದ ಗರಿಷ್ಟ ಆದಾಯವನ್ನು ಬಯಸುತ್ತಾರೆ. ಆದರೆ 'ಎಲ್ಲಿ ಆದಾಯ ಗರಿಷ್ಟವಾಗಿದೆಯೋ ಅಲ್ಲಿ ನಷ್ಟ ಭಯವೂ ಜಾಸ್ತಿ' ಎನ್ನುವ ಹೇಳಿಕೆ ಇದೆ. ಯಾರಿಗೆ ಹೆಚ್ಚಿನ ನಷ್ಟವನ್ನು ಭರಿಸುವ ಶಕ್ತಿ ಇದೆಯೋ ಅಂಥವರು ಹೆಚ್ಚು ನಷ್ಟ ಭಯವಿರುವ ಆದರೆ ಅತ್ಯಂತ ಹೆಚ್ಚು ಆದಾಯ ತರುವ ಹೂಡಿಕೆ ಆಯಾಮದಲ್ಲಿ ಹಣ ಹೂಡುತ್ತಾರೆ. ಹೆಚ್ಚು ನಷ್ಟ ಭರಿಸುವ ಶಕ್ತಿ ಇಲ್ಲದ ಹೂಡಿಕೆದಾರರು ಕಡಿಮೆ ಆದಾಯವಿರುವ ಹೂಡಿಕೆಗಳಲ್ಲಿ ಹಣ ಹೂಡುತ್ತಾರೆ.

ನಷ್ಟ ಭಯ

ಎಲ್ಲಾ ಹೂಡಿಕೆದಾರರೂ ಅತ್ಯಂತ ಕಡಿಮೆ ನಷ್ಟ ಸಾಧ್ಯತೆಯನ್ನು ಬಯಸುತ್ತಾರೆ. ಸರಕಾರೀ ಸಂಬಂಧಿ ಹೂಡಿಕೆಗಳು. ಉದಾ: ಅಂಚೆ ಕಛೇರಿ ಉಳಿತಾಯ ಅಥವಾ ಸರಕಾರೀ ಖಜಾನೆ ಹಣಕಾಸು ಪತ್ರಗಳು ಶೂನ್ಯ ನಷ್ಟ ಭಯ ಹೊಂದಿವೆ. ಖಾಸಗೀ ಹಣಕಾಸು ಸಂಸ್ಥೆಯಲ್ಲಿನ ಹೂಡಿಕೆಗಳು ಹೆಚ್ಚು ನಷ್ಟ ಭಯದ ಹೂಡಿಕೆಗಳಾಗಿದೆ. ಹೂಡಿಕೆದಾರರ ಆರ್ಥಿಕ ಸಾಮರ್ಥ್ಯಕ್ಕೆ ಅನುಗುಣವಾಗಿ ಹೂಡಿಕೆಗಳನ್ನು ಮಾಡಲಾಗುತ್ತದೆ.

ಸುರಕ್ಷತೆ ಹಾಗೂ ಭದ್ರತೆ

ಎಲ್ಲಾ ಹೂಡಿಕೆದಾರರು ತಮ್ಮ ಹೂಡಿಕೆಗಳ ಸುರಕ್ಷತೆ ಹಾಗೂ ಭದ್ರತೆಗೆ ಪ್ರಾಶಸ್ತ್ಯ ನೀಡುತ್ತಾರೆ. ಆದರೆ ಸಂಪೂರ್ಣ ಸುರಕ್ಷಿತ ಹೂಡಿಕೆಗಳು ಇಲ್ಲವೆಂದೇ ಹೇಳಬಹುದು. ಆದರೆ, ಸರಕಾರೀ ಖಜಾನೆ ನೀಡುವ ವಿತ್ತ ಪತ್ರಗಳು ಹೆಚ್ಚು ಸುರಕ್ಷಿತ. ಆದರೆ ಇವು ಅತ್ಯಂತ ಕಡಿಮೆ ಆದಾಯ ತರುವಂತಹವು.

ಹಣದುಬ್ಬರದ ವಿರುದ್ಧ ರಕ್ಷಣೆ

ಎಲ್ಲಾ ಆರ್ಥಿಕ ವ್ಯವಸ್ಥೆಗಳಲ್ಲಿ ಹಣದುಬ್ಬರ ಸರ್ವೇ ಸಾಮಾನ್ಯ ವಿಷಯವಾಗಿದೆ. ಇದರ ಪರಿಣಾಮವಾಗಿ ಹಣದ ಮೌಲ್ಯ ದಿನೇ ದಿನೇ ಕ್ಷೀಣಿಸುತ್ತಾ ಹೋಗುತ್ತದೆ. ಖರೀದಿಸುವ ವಸ್ತುಗಳ ಬೆಲೆ ಹೆಚ್ಚಾಗುತ್ತಾ ಹೋಗುತ್ತದೆ. ಆದುದರಿಂದ ಹೂಡಿಕೆಗಳಿಂದ ಬರುವ ಆದಾಯವು ಹಣದುಬ್ಬರದಿಂದಲಾಗುವ ಹಣದ ಮೌಲ್ಯದ ನಷ್ಟವನ್ನು ಸರಿದೂಗಿಸುವಂತಿರಬೇಕು.

ದ್ರವತ್ವ

ಯಾವುದೇ ಹೂಡಿಕೆಯನ್ನು ನಷ್ಟವಿಲ್ಲದೆ ನಗದೀಕರಿಸುವ ಸಾಮರ್ಥ್ಯಕ್ಕೆ ದ್ರವತ್ವ ಅನ್ನುತ್ತಾರೆ. ಸರಕಾರೀ ಪತ್ರಗಳು ಈ ಗುಣವನ್ನು ಹೊಂದಿದೆ ಅಂದರೆ ಹೂಡಿಕೆಗಳನ್ನು ಯಾವುದೇ ಕ್ಷಣದಲ್ಲಿ ನಷ್ಟವಿಲ್ಲದೆ ಮಾರಟ ಮಾಡುವಂತಿರಬೇಕು. ಆಗ ಹೂಡಿಕೆದಾರನಿಗೆ ನಿರೀಕ್ಷಿತ ಹಾಗೂ ಅನಿರೀಕ್ಷಿತ ಆರ್ಥಿಕ ಬೇಡಿಕೆಗಳನ್ನು ಪೂರೈಸಬಹುದಾಗುತ್ತದೆ.

ಹೂಡಿಕೆದಾರರು ಈ ವಿಷಯಗಳನ್ನು ಗಮನದಲ್ಲಿರಿಸಿ ಅವರವರ ಆರ್ಥಿಕ ಸಾಮರ್ಥ್ಯಕ್ಕೆ ಅನುಗುಣವಾಗಿ ವಿವಿಧ ಆಯಾಮಗಳಲ್ಲಿ ಹಣಕಾಸು ಹೂಡಿಕೆಯನ್ನು ಮಾಡುತ್ತಾರೆ.

ಹೂಡಿಕಾ ಸೂತ್ರಗಳು

ಹೂಡಿಕೆದಾರರು ತಮ್ಮ ಲಾಭದಾಯಕ ಹೂಡಿಕೆಗಾಗಿ ಮೂರು ಸೂತ್ರಗಳನ್ನು ಅನುಸರಿಸಬೇಕು. ಇದು ಹೂಡಿಕೆದರರಿಗೆ ಆರ್ಥಿಕ ಲಾಭದೊಡನೆ ಭದ್ರತೆಯನ್ನು ನೀಡುತ್ತದೆ. ಈ ಮೂರು ಅಮೂಲ್ಯ ಸೂತ್ರಗಳು ಈ ಕೆಳಗಿನಂತಿವೆ.

1. ಕ್ಷಿಪ್ರ ಹೂಡಿಕೆ
2. ನಿರಂತರ ಹೂಡಿಕೆ
3. ದೀರ್ಘಕಾಲೀನ ಹೂಡಿಕೆ

1. **ಕ್ಷಿಪ್ರ ಹೂಡಿಕೆ**

ಹೂಡಿಕೆದಾರರು ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಹೂಡಿಕೆಯನ್ನು ಪ್ರಾರಂಭಿಸಬೇಕು. ಇಂದಿನಿಂದಲೇ ಈಗಲೇ ಹೂಡಿಕೆ ಮಾಡಿ. ಅಂದರೇ ಹೂಡಿಕಾ ಅವಧಿ ಜಾಸ್ತಿಯಾಗಿ ಹೂಡಿಕೆದಾರರ ಆದಾಯದಲ್ಲಿ ಹೆಚ್ಚಳವಾಗಲು ಅನುಕೂಲವಾಗುತ್ತದೆ.

2. **ನಿರಂತರ ಹೂಡಿಕೆ**

ಹೂಡಿಕೆ ಪ್ರಾರಂಭಿಸಿದ ಮೇಲೆ ನಿರಂತರವಾಗಿ ಹಣ ಹೂಡಿಕೆ ಮಾಡುತ್ತಿರಬೇಕು. ಹೂಡಿಕೆದಾರರ ಅನುಕೂಲಕ್ಕೆ ತಕ್ಕಂತೆ, ದಿನವಹಿ, ಮಾಸಿಕ ಇಲ್ಲವೆ ತಿಂಗಳಿನಂತೆ ಹೂಡಿಕೆ ಮಾಡುತ್ತಿರಬೇಕು. ಇದು ನಿರಂತರ ಆದಾಯಕ್ಕೆ ದಾರಿ.

3. **ದೀರ್ಘಕಾಲಿಕ ಹೂಡಿಕೆ**

ಷೇರು ಹೂಡಿಕೆದಾರ ವಾರೆನ್‌ಬಫೆಟ್ ಹೇಳುವಂತೆ ಭಾರತದಲ್ಲಿ ಮಾಡುವ ಹೂಡಿಕೆಗಳು ಯಾವಾಗಲೂ ದೀರ್ಘಕಾಲದ್ದಿರಬೇಕು. ಅಭಿವೃದ್ಧಿ ಹೊಂದುತ್ತಿರುವ ಆರ್ಥಿಕತೆಯನ್ನು ಹೊಂದಿದ ಭಾರತದಲ್ಲಿ ದೀರ್ಘಕಾಲದ ಹೂಡಿಕೆಗಳು ಮಾತ್ರ ನಿರೀಕ್ಷಿತ ಆದಾಯ ತರಬಹುದು ಎಂದು ಅವರ ಅಭಿಪ್ರಾಯವಾಗಿದೆ. ಯಾಕೆಂದರೆ ಆರ್ಥಿಕ ಅಭಿವೃದ್ಧಿಯು ಒಂದು ದೀರ್ಘಕಾಲದ ಪ್ರಕ್ರಿಯೆಯಾಗಿದೆ.

ಹೂಡಿಕಾ ಆಯಾಮಗಳು – ಒಂದು ಪ್ರಚಲಿತ ಚಿತ್ರ

ಈ ದಿನಗಳಲ್ಲಿ ಹೂಡಿಕೆದಾರರಿಗೆ ಹಲವಾರು ಹೂಡಿಕಾ ಅವಕಾಶಗಳು ಲಭ್ಯವಿವೆ. ತನ್ನ ಆರ್ಥಿಕ ಸಾಮರ್ಥ್ಯಕ್ಕೆ ತಕ್ಕಂತೆ ಹೂಡಿಕಾ ಆಯಾಮವನ್ನು ಆಯ್ಕೆ ಮಾಡಬಹುದಾಗಿದೆ. ಇದಕ್ಕೆ ಬೇಕಾದ ಮಾರ್ಗದರ್ಶನ, ಸಲಹೆಗಳಿಗಾಗಿ ಜಾಹೀರಾತುಗಳು ಆರ್ಥಿಕ ಪತ್ರಿಕೆಗಳು, ಮಾಸ ಪತ್ರಗಳು, ಪ್ರಕಟಣೆಗಳು, ಇತ್ಯಾದಿಗಳು ದೊರೆಯುತ್ತದೆ. ಇವುಗಳಲ್ಲದೆ, ಆರ್ಥಿಕ ಸಲಹಾಗರರು ಬೇಕಾದ ಸೇವೆ ನೀಡಲು ಸಿದ್ಧರಿರುತ್ತಾರೆ. ನಿಶ್ಚಿತ ಉದ್ದೇಶಗಳೇನಾದರೂ ಇದ್ದರೆ ಉವುಗಳ ಪೂರೈಕೆಗೆ ತಕ್ಕಂತೆ. ಉದಾ: ತೆರಿಗೆ ಸಂಬಂಧಿಸಿ ಸಲಹೆಗಾರರು ಸಲಹೆ ಮಾಡುತ್ತಾರೆ. ಲಭ್ಯವಿರುವ ಹೂಡಿಕಾ ಆಯಾಮಗಳನ್ನು ಈ ಕೆಳಗಿನಂತೆ ಪ್ರಸ್ತುತ ಪಡಿಸಬಹುದು.

- ಬಂಡವಾಳದ ಪಾಲುಗಳು, ಸಾಲ ಪತ್ರಗಳು ಮತ್ತು ಬಾಂಡುಗಳು ವಿವಿಧ ಕೂಡು ಬಂಡವಾಳ ಸಂಸ್ಥೆಗಳು, ಸರಕಾರೀ ಸಂಸ್ಥೆಗಳು ಈ ಹೂಡಿಕೆಗಳನ್ನು ನೀಡುತ್ತವೆ.
- ಅಂಚೆ ಉಳಿತಾಯ ಯೋಜನೆಗಳು.
- ಮಧ್ಯವರ್ತಿ ಹೂಡಿಕಾ ಸಂಸ್ಥೆಗಳು (ಪರಸ್ಪರ ನಿಧಿ).

- ಕಂಪೆನಿಗಳಲ್ಲಿನ ಠೇವಣಿ ಯೋಜನೆಗಳು.
- ಭಾರತೀಯ ಜೀವ ವಿಮಾ ನಿಗಮ ಯೋಜನೆಗಳು.
- ಚಿನ್ನ, ಬೆಳ್ಳಿ ಮತ್ತು ಬೆಲೆಬಾಳುವ ಲೋಹಗಳು ಮತ್ತು ಪ್ರಾಚೀನ ವಸ್ತುಗಳು.
- ಭೂಸೊತ್ತುಗಳು
- ಗಿಲ್ಟ್‌ಎಜ್‌ಡ್ ಹಣಕಾಸು ಪತ್ರಗಳು ಸರಕಾರೀ ಹಾಗೂ ಅರೆ ಸರಕಾರೀ ಸಂಸ್ಥೆಗಳ ನೀಡಿಕೆ.
- ಭವಿಷ್ಯ ನಿಧಿ ಮತ್ತು ಕ್ಷೇಮನಿಧಿ.

ಈ ಮೇಲೆ ನಮೂದಿಸಿದ ಹೂಡಿಕಾ ಅವಕಾಶಗಳಲ್ಲಿ ಕೆಲವು ತೆರಿಗೆ ಕಡಿತ ಸೌಲಭ್ಯವನ್ನು ಹೊಂದಿದೆ. ಇದರಲ್ಲಿ ಹೂಡಿಕೆ ಮಾಡಿ ತೆರಿಗೆ ಕಡಿತ ಮಾಡಿಕೊಳ್ಳಲು ಅವಕಾಶವಿದೆ. ಇದಲ್ಲದೆ ಹಲವು ಖಾಸಗಿ ಹಣಕಾಸು ಸಂಸ್ಥೆಗಳಲ್ಲಿ ಠೇವಣಾತಿ ಸೌಲಭ್ಯಗಳಿವೆ.

ಪ್ರಸ್ತುತ ಭಾರತದಲ್ಲಿ ಹಲವಾರು ಹಣಕಾಸು ಸಂಸ್ಥೆಗಳಾದ, ವಾಣಿಜ್ಯ ಹಾಗೂ ಸಹಕಾರೀ ಬ್ಯಾಂಕುಗಳು ಜೀವ ವಿಮಾ ಸಂಸ್ಥೆಗಳು, ಅಂಚೆ ಇಲಾಖೆ, ಸಾರ್ವಜನಿಕ ಕಂಪೆನಿಗಳು, ವಿವಿಧ ರೀತಿಯ ಹಣಕಾಸು ಹೂಡಿಕೆಗಳಿಗೆ ಅವಕಾಶ ಒದಗಿಸಿದೆ. ಈ ಯೋಜನೆಗಳು ಹೂಡಿಕೆದಾರರಿಗೆ ಅನೇಕ ಸೌಲಭ್ಯಗಳನ್ನು ನೀಡುತ್ತಿವೆ. ಈ ದೃಷ್ಟಿಯಿಂದ ನೋಡಿದರೆ ಅಂಚೆ ಕಛೇರಿಗಳು ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಒಂದು ನಿರ್ಣಾಯಕಪಾತ್ರವನ್ನು ವಹಿಸುತ್ತವೆ.

ಅಂಚೆ ಕಛೇರಿಗಳು ವಿವಿಧ ಹೂಡಿಕೆದಾರರ ವೈಯಕ್ತಿಕ ಬೇಡಿಕೆಗಳಿಗೆ ಹೊಂದಿಕೆಯಾಗುವ ಹಲವಾರು ಆಕರ್ಷಕ ಯೋಜನೆಗಳನ್ನು ಹಮ್ಮಿಕೊಂಡಿವೆ. ತೆರಿಗೆ ಉಳಿತಾಯದ ಲಕ್ಷಣಗಳನ್ನು ಹೊಂದಿದ ಕೆಲವು ಯೋಜನೆಗಳು ಉನ್ನತ ಆದಾಯದ ವ್ಯಕ್ತಿಗಳನ್ನು ಕೂಡಾ ಆಕರ್ಷಿಸುವುದರಲ್ಲಿ ಸಫಲವಾಗಿವೆ.

ಅಂಚೆ ಕಛೇರಿ ಉಳಿತಾಯ ಯೋಜನೆಗಳು

ಭಾರತವು ಜಗತ್ತಿನಲ್ಲೇ ಅತೀ ದೊಡ್ಡ ಅಂಚೆ ಜಾಲವನ್ನು ಹೊಂದಿದ ದೇಶವಾಗಿದೆ. ದೇಶದ ಪಟ್ಟಣ ಹಾಗೂ ಮೂಲೆ ಮೂಲೆಯಲ್ಲಿರುವ ಹಳ್ಳಿಗಳ ಬಡ ಹಾಗೂ ಮಧ್ಯಮ ವರ್ಗದ ಜನರಿಗೆ ಬ್ಯಾಂಕಿಂಗ್ ಸೌಲಭ್ಯಗಳನ್ನು ನೀಡುವ ಉದ್ದೇಶದಿಂದ ಪ್ರಾರಂಭವಾದ ಅಂಚೆ ಕಛೇರಿಗಳು ತಮ್ಮ ಮೂಲಭೂತ ಚಟುವಟಿಕೆಯಾದ ಅಂಚೆ ಸೇವೆಗಳಲ್ಲದೆ ಹತ್ತು ಹಲವು ಆರ್ಥಿಕ ಹಾಗೂ ಬ್ಯಾಂಕಿಂಗ್ ಸೇವೆಗಳ ಮಹಾಪೂರವನ್ನೇ ಇಂದು ನೀಡುತ್ತಿವೆ. ಒಂದು ಸಂಸ್ಥೆಯಂತೆ ಅಂಚೆ ಉಳಿತಾಯ ಯೋಜನೆಗಳು ತಮ್ಮ ಬಹುವಿಧ ಉಳಿತಾಯ ಖಾತೆಗಳ ಮೂಲಕ ದೇಶದ ಉಳಿತಾಯ ಹಣವನ್ನು ಗಣನೀಯ ಪ್ರಮಾಣದಲ್ಲಿ ಕ್ರೋಢೀಕರಿಸುವುದರಲ್ಲಿ ಪ್ರಮುಖ ಪಾತ್ರವಹಿಸುತ್ತಿವೆ, ಜನರಲ್ಲಿ ಉಳಿತಾಯ ಮನೋಭಾವವನ್ನು ಪ್ರೋತ್ಸಾಹಿಸುತ್ತಿವೆ. ದೇಶದಲ್ಲಿರುವ 1.55 ಲಕ್ಷ ಅಂಚೆ ಕಛೇರಿಗಳು.ಇದರ ಪೈಕಿ 1.39

ಲಕ್ಷ ಗ್ರಾಮೀಣ ಅಂಚೆ ಕಛೇರಿಗಳು ದೇಶದ ಅಭಿವೃದ್ಧಿಗೆ ತಮ್ಮದೇ ಆದ ವಿಶಿಷ್ಟ ರೀತಿಯಲ್ಲಿ ಬದ್ಧತೆಯನ್ನು ಪ್ರದರ್ಶಿಸಿದೆ.

ಅಂಚೆ ಕಛೇರಿಗಳು ನೀಡುವ ಬ್ಯಾಂಕಿಂಗ್ ಸೇವೆಗಳು ಈ ಇಲಾಖೆಗೆ ಒಂದು ಉತ್ತಮ ಪರಿಕಲ್ಪನೆ ನೀಡಿದ್ದಲ್ಲದೆ ಹೂಡಿಕೆದಾರರಲ್ಲಿ ಹೆಚ್ಚಿನ ವಿಶ್ವಾಸ ಹುಟ್ಟುವಂತೆ ಮಾಡಿವೆ. ಗ್ರಾಹಕರಿಗೆ ಅನುಕೂಲವಾದ ಸ್ಥಳಗಳಲ್ಲಿ ಸ್ಥಾಪನೆ, ಸುಲಭ ನಿಲುಕುವಿಕೆ, ಹೂಡಿಕೆ ಮೇಲೆ ನಿರಂತರ ಪ್ರತಿಫಲ, ಹೂಡಿದ ಹಣಕಾಸಿನ ಮೇಲಿನ ಭದ್ರತೆ, ಇತ್ಯಾದಿಗಳು ಅಂಚೆ ಕಛೇರಿಗಳನ್ನು ಹೂಡಿಕದಾರರ ಕೊನೆಯ ನಿಲ್ದಾಣವನ್ನಾಗಿ ಮಾಡಿವೆ.

ಅಂಚೆ ಕಛೇರಿಗಳು – ಇಂದು

ಇಂದಿನ ಅಂಚೆ ಕಛೇರಿಗಳ ಕಾರ್ಯಗಳು ಬರೇ ಪತ್ರಗಳ ರವಾನೆ ಹಾಗೂ ಬಟವಾಡೆ ಇವುಗಳಿಗೆ ಸೀಮಿತವಾಗಿಲ್ಲ, ವೈವಿಧ್ಯಮಯ ಬ್ಯಾಂಕಿಂಗ್ ಸೇವೆಗಳು ಅಂಚೆ ಕಛೇರಿಯ ಸೇವಾ ವ್ಯಾಪ್ತಿಯಲ್ಲಿ ಸೇರಿಕೊಂಡಿವೆ. ಇಂದು ಅಂಚೆ ಕಛೇರಿಗಳು ತಮ್ಮ ಸಣ್ಣ ಉಳಿತಾಯ ಯೋಜನೆಗಳ ಮೂಲಕ ಬಡ ಹಾಗೂ ಮಧ್ಯಮ ವರ್ಗದ ಜನರನ್ನೂ ತೆರಿಗೆ ಉಳಿತಾಯ ಯೋಜನೆಗಳ ಮೂಲಕ ಮೇಲ್ವರ್ಗದ ಜನರನ್ನೂ ಆಕರ್ಶಿಸಿವೆ. ಪೂರಕ ಸೇವೆಯಾಗಿ ಪ್ರಾರಂಭವಾದ ಉಳಿತಾಯ ಯೋಜನೆಗಳು ಅಂಚೆ ಕಛೇರಿಗಳಿಗೆ ಇಂದು ಲಾಭ ತರುವ ವ್ಯವಹಾರವಾಗಿ ಪರಿವರ್ತನೆಯಾಗಿವೆ.

ಮಹಿಳಾ ಹೂಡಿಕೆದಾರರು

ವರ್ತಮಾನ ಕಾಲದಲ್ಲಿ ಮಹಿಳೆಯರು ಜಗತ್ತಿನ ಒಟ್ಟು ಜನಸಂಖ್ಯೆಯಲ್ಲಿ 50 ಪ್ರತಿಶತ ಉದ್ಯೋಗ ಪಡೆಯುವಲ್ಲಿ 33 ಪ್ರತಿಶತ. ಒಟ್ಟು ಕಾರ್ಮಿಕ ಗಂಟೆಗಳಲ್ಲಿ 70 ಪ್ರತಿಶತ ಹಾಗೂ ಜಗತ್ತಿನ ಒಟ್ಟು ಆದಾಯದಲ್ಲಿ 10 ಪ್ರತಿಶತ ಪಾಲನ್ನು ಹೊಂದಿದ್ದಾರೆ. ಈ ದಿನಗಳಲ್ಲಿ ಮಹಿಳೆಯರು ಹಿಂದಿನಕ್ಕಿಂತ ಹೆಚ್ಚಿನ ಗಳಿಕಾ ಸಾಮರ್ಥ್ಯವನ್ನು ಪಡೆದಿರುವುದಲ್ಲದೆ, ಆರ್ಥಿಕ ವ್ಯವಹಾರಗಳಿಗೆ ಸಂಬಂಧಪಟ್ಟ ನಿರ್ಧಾರಗಳಲ್ಲಿ ಹೆಚ್ಚಿನ ಪ್ರಾಬಲ್ಯ ಪಡೆದಿದ್ದಾರೆ. ಉದ್ಯೋಗ ಮಾರುಕಟ್ಟೆಗೆ ಮಹಿಳೆಯರ ಪ್ರವೇಶವು ಅವರ ಆದಾಯವನ್ನು ಹೆಚ್ಚಿಸಿದಲ್ಲದೆ ಹಣಕಾಸು ಹೂಡಿಕಾ ನಿರ್ಧಾರಗಳಲ್ಲಿ ಅವರ ಮಾತುಗಳಿಗೆ ಬೆಲೆ ಬರುವಂತೆ ಮಾಡಿದೆ.

ಈ ಬೆಳವಣಿಗೆಗಳು ಇದ್ದಾಗ್ಯೂ ಮಹಿಳೆಯರು ತಮ್ಮ ಉಳಿತಾಯ ಹಾಗೂ ಹೂಡಿಕೆಗಳ ನಿರ್ವಹಣೆಯಲ್ಲಿ ಸಂಪೂರ್ಣ ಸ್ವಾತಂತ್ರ್ಯವನ್ನು ಪಡೆದಿಲ್ಲ. ಈ ವಿಷಯಗಳಿಗೆ ಸಂಬಂಧಿಸಿದಂತೆ ಅವರು ಇನ್ನೂ ತಮ್ಮ ಪತಿ ಹಾಗೂ ಕುಟುಂಬದ ಇತರ ಸದಸ್ಯರೊಡನೆ ಸಮಾಲೋಚನೆ ಮಾಡಬೇಕಾಗಿದೆ, ಮಾಡುತ್ತಾರೆ. ತಮ್ಮ ಪತಿಯಂದಿರ ನಿರ್ಬಂಧ, ತಪ್ಪಿಸಲಾಗದ ದೈನಂದಿನ ಗೃಹ ಕೆಲಸ ಕಾರ್ಯಗಳ ಒತ್ತಡ, ಇತ್ಯಾದಿಗಳ ಮಧ್ಯೆ ಮಹಿಳೆಯರು ತಮ್ಮ ಹೂಡಿಕಾ ಚಟುವಟಿಕೆಗಳನ್ನು ಹೇಗೆ ನಿರ್ವಹಿಸುತ್ತಾರೆ ಎನ್ನುವುದು ಕುತೂಹಲಕಾರೀ ವಿಷಯವಾಗಿ, ಸಂಶೋಧನೆಗೆ ಅವಕಾಶ ಒದಗಿಸಿವೆ. ಈ ಹಿನ್ನೆಲೆಯಲ್ಲಿ

ಅಂಚೆ ಕಛೇರಿಯ ಉಳಿತಾಯ ಯೋಜನೆಗಳ ಬಗ್ಗೆ ಪುತ್ತೂರು ಪಟ್ಟಣದ ಮಹಿಳಾ ಹೂಡಿಕೆದಾರರ ಅನಿಸಿಕೆಗಳನ್ನು ತಿಳಿಯುವ ಒಂದು ಕಿರು ಪ್ರಯತ್ನವನ್ನು ಈ ಅಧ್ಯಯನದ ಮೂಲಕ ಮಾಡಲಾಗಿದೆ.

ಸಂಶೋಧನಾ ಶೀರ್ಷಿಕೆಯ ಹಿನ್ನೆಲೆ

ಉಳಿತಾಯದ ಮಿಗತೆಯು ಆದಾಗ ಅದನ್ನು ಎಲ್ಲಿ ಹೂಡಿಕೆ ಮಾಡುವುದು ಎಂಬ ಪ್ರಶ್ನೆ ಉದ್ಭವಿಸುತ್ತದೆ. ಹಿಂದಿನ ಕಾಲದಲ್ಲಿನ ಹೂಡಿಕೆಯ ಆಯಾಮಗಳು, ಭೂಮಿ, ಆಸ್ತಿಗಳು, ಚಿನ್ನ, ಬ್ಯಾಂಕುಗಳ ಹಣಕಾಸು ಸಂಸ್ಥೆಗಳು, ಅಂಚೆ ಕಛೇರಿಗಳ ಉಳಿತಾಯ ಯೋಜನೆಗಳು ಇವುಗಳಿಗೆ ಸೀಮಿತವಾಗಿದ್ದವು. ಆದರೆ ಈಗಿನ ಕಾಲದಲ್ಲಿ ಹೂಡಿಕೆದಾರರಿಗೆ ಅವರ ಅಗತ್ಯಗಳಿಗೆ ಹಾಗೂ ಸ್ವಭಾವಕ್ಕೆ ಹೊಂದುವ ವಿವಿಧ ಹೂಡಿಕಾ ಅವಕಾಶಗಳು ಲಭ್ಯವಿದೆ. ಇವುಗಳ ಕುರಿತಾದ ತಿಳುವಳಿಕೆಯು ಉತ್ತಮ ಹಾಗೂ ಸೂಕ್ತವಾದ ಹೂಡಿಕೆಯ ಅವಕಾಶವನ್ನು ಆಯ್ಕೆ ಮಾಡಲು ಉಪಯೋಗವಾಗುತ್ತದೆ. ಹೂಡಿಕೆಗಳ ಮೇಲಿನ ಪ್ರತಿಫಲ ಹಾಗೂ ನಷ್ಟ ಭರಿಸುವ ಸಾಮರ್ಥ್ಯ ಇವುಗಳು ಹೂಡಿಕೆಯ ಯೋಜನೆಯ ಆಯ್ಕೆಯನ್ನು ನಿರ್ಧರಿಸುತ್ತವೆ.

ಸಣ್ಣ ಉಳಿತಾಯ ಯೋಜನೆಗಳನ್ನು ಭದ್ರತೆ ಹಾಗೂ ಸಾರ್ವಜನಿಕರಿಗೆ ಆಕರ್ಷಣೀಯವಾಗುವಂತೆಯೂ, ಜತೆಗೆ ಆರ್ಥಿಕ ಅಭಿವೃದ್ಧಿಗೆ ಬೇಕಾದ ಸಂಪತ್ತಿನ ಕ್ರೋಢೀಕರಣಕ್ಕೆ ಅನುಕೂಲವಾಗುವಂತೆಯೂ ರೂಪಿಸಲಾಗುತ್ತದೆ. ಈ ಯೋಜನೆಯನ್ನು ದೇಶದ 1.55 ಲಕ್ಷಕ್ಕೂ ಮೀರಿದ ಅಂಚೆ ಕಛೇರಿಗಳು ನಿರ್ವಹಿಸುತ್ತಿವೆ.

ಅಂಚೆ ಕಛೇರಿಯು ಉಳಿತಾಯ ಯೋಜನೆಗಳು ಅತ್ಯಂತ ಕಡಿಮೆ ನಷ್ಟ ಭಯ ಹೊಂದಿದ ಒಂದು ಉತ್ತಮ ಹೂಡಿಕಾ ಐಚ್ಛಿಕವಾಗಿದೆ. ಅಂಚೆ ಕಛೇರಿಗಳ ವಿಷಯದಲ್ಲಿ ದೇಶದಾದ್ಯಂತ ಒಂದೇ ರೀತಿಯ ಯೋಜನೆಗಳು ಲಭ್ಯವಿರುತ್ತದೆ. ಇದರ ಪರಿಣಾಮವಾಗಿ ಗ್ರಾಹಕರಿಗೆ ಯಾವುದೇ ಊರಿಗೆ ವರ್ಗಾವಣೆ ಆದರೂ ಅಲ್ಲಿ ಅಂಚೆ ಕಛೇರಿ ಯೋಜನೆಗಳಿಗೆ ಸುಲಭವಾಗಿ ಹೊಂದಿಕೊಳ್ಳಲು ಸಾಧ್ಯವಾಗುತ್ತದೆ. ಈ ಯೋಜನೆಗಳು ಸಮಾಜದ ವಿವಿಧ ವಿಭಾಗಗಳ, ವಯಸ್ಸುಗಳ, ಗ್ರಾಹಕರ ಒಪ್ಪಿಗೆಗೆ ಪಾತ್ರವಾಗಿದೆ.

ಆದರೆ ಅಂಚೆ ಕಛೇರಿ ಉಳಿತಾಯ ಯೋಜನೆಗಳು ಇಂದು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿವೆ. ಈ ಸಮಸ್ಯೆಗಳಲ್ಲಿ ಬ್ಯಾಂಕುಗಳು ಮತ್ತು ವಿಮಾ ಕಂಪೆನಿಗಳಿಂದ ಬರುವ ಪೈಪೋಟಿ ಒಂದು ರೀತಿಯದ್ದಾದರೆ ದಿನೇ ದಿನೇ ವೃದ್ಧಿಸುತ್ತಿರುವ ಆಧುನಿಕ ತಂತ್ರಜ್ಞಾನಗಳಾದ 2ಜಿ, 3ಜಿ ಮತ್ತು 4ಜಿ ಅಲ್ಲದೆ ಅಂತರ್ಜಾಲ ಇವುಗಳಿಂದ ಉಂಟಾದ ಸಮಸ್ಯೆಗಳು ಇನ್ನೊಂದು ರೀತಿಯವು. ಸಾರ್ವಜನಿಕ ಕ್ಷೇತ್ರದ ಬ್ಯಾಂಕಿನಂತೆ ಅಂಚೆ ಕಛೇರಿಗಳೂ ಕೋರ್ ಬ್ಯಾಂಕಿಂಗ್ ಸರ್ವಿಸಸ್ ಪ್ರಾರಂಭಿಸಿದರೂ ಪರಿಣಿತ ಸಿಬ್ಬಂದಿ ಕೊರತೆಯಿಂದ ತೀವ್ರ ತೊಂದರೆ ಅನುಭವಿಸುತ್ತಿವೆ. ಒಟ್ಟು 1,54,856 ಅಂಚೆ ಕಛೇರಿಗಳ ಪೈಕಿ 1,39,164 ಅಂಚೆ ಕಛೇರಿಗಳು ಗ್ರಾಮೀಣ ಪ್ರದೇಶಗಳಲ್ಲಿ ಇವೆ. ಈ ಕಛೇರಿಗಳನ್ನು ಗ್ರಾಮೀಣ ಡಾಕ್ ಸೇವಕರು ಅನ್ನುವ ಸಿಬ್ಬಂದಿ ನೋಡಿಕೊಳ್ಳುತ್ತಿದ್ದಾರೆ. ಆದರೆ ಇವರ್‍ಯಾರೂ ಯಾವುದೇ ತಂತ್ರಜ್ಞಾನದ

ಅನುಭವವನ್ನು ಹೊಂದಿಲ್ಲ ಹಾಗೂ ಮೆಟ್ರಿಕ್ಯುಲೇಷನ್ ಅಥವಾ ಅದಕ್ಕಿಂತಲೂ ಕೆಳಗಿನ ವಿದ್ಯಾರ್ಹತೆ ಹೊಂದಿದವರು ಸೇವಾ ಪಿರಿತನ ಇರುವ ಸಿಬ್ಬಂದಿಗಳು ಗಣಕ ಯಂತ್ರ ನಿಭಾವಣೆಯನ್ನು ಸರಿಯಾಗಿ ತಿಳಿದಿಲ್ಲ. ಸಾರ್ವಜನಿಕ ಕ್ಷೇತ್ರದ ಬ್ಯಾಂಕುಗಳು ನೀಡುವ ಇ-ಬ್ಯಾಂಕಿಂಗ್, ಮೊಬ್ಯಾಲ್ ಬ್ಯಾಂಕಿಂಗ್, ಎಟಿಎಮ್ ಇತ್ಯಾದಿಗಳು ಅಂಚೆ ಕಛೇರಿಯ ಸೇವಾ ಸೌಲಭ್ಯಗಳಿಂದ ಹೊರತಾಗಿವೆ. ಅಂಚೆ ಕಛೇರಿಯ ಜಾಹೀರಾತುಗಳು ಬಹು ವಿರಳ ಇರುವ ಜಾಹೀರಾತುಗಳು ಹೂಡಿಕೆದಾರರನ್ನು ಆಕರ್ಷಿಸಲು ವಿಫಲವಾಗಿದೆ. ಇವೆಲ್ಲವುಗಳ ಫಲವಾಗಿ ಹೂಡಿಕೆದಾರರು ಅಂಚೆ ಕಛೇರಿಯು ಉಳಿತಾಯ ಯೋಜನೆಗಳತ್ತ ಬೆನ್ನು ಹಾಕಿ ಬ್ಯಾಂಕುಗಳ ಉಳಿತಾಯ ಯೋಜನೆಗಳತ್ತ ಮುಖ ಮಾಡುತ್ತಿದ್ದಾರೆ. ಅಂಚೆ ಕಛೇರಿಯ ಉಳಿತಾಯ ಯೊಜನೆಗಳು ತೀವ್ರ ಹಿನ್ನಡೆಯನ್ನು ಅನುಭವಿಸುತ್ತಿವೆ.

ಇವು ಅಂಚೆ ಕಛೇರಿಗಳ ಬಾಹ್ಯ ಸಮಸ್ಯೆಗಳಾದರೆ ಹೂಡಿಕೆದಾರರು ಅನುಭವಿಸುವ ಅಂಚೆ ಕಛೇರಿಗಳ ಆಂತರಿಕ ಸಮಸ್ಯೆಗಳು ಯೋಜನೆಗಳಿಗೆ ತೀವ್ರ ಹೊಡೆತ ನೀಡಿವೆ.

ಉದಾಹರಣೆಗೆ –

- ಅಂಚೆ ಕಛೇರಿಯ ಎಲ್ಲಾ ವ್ಯವಹಾರಗಳನ್ನು ಕಾಗದ ಪತ್ರಗಳಲ್ಲಿ ನಮೂದಿಸಲಾಗುತ್ತದೆ. ಆಕಸ್ಮಿಕವಾಗಿ ಹೂಡಿಕೆದಾರರ ಇವು ಕಳೆದು ಹೋದರೆ ಹೂಡಿಕೆದಾರರು ಕಷ್ಟ ಅನುಭವಿಸಬೇಕಾಗುತ್ತದೆ.
- ಈಗಿನ ಬದಲಾವಣೆ ಯುಗದಲ್ಲಿ ಅರ್ಥಿಕ ವ್ಯವಸ್ಥೆಯ ಯೋಜನೆಗಳು ಹಾಗೂ ಷರತ್ತುಗಳು ಆಗಾಗ ಬದಲಾಗುತ್ತಲೇ ಇರುತ್ತದೆ. ಇಂತಹ ಕ್ಷಿಪ್ರ ಬದಲಾವಣೆಗಳಿಂದ ಹೂಡಿಕೆದಾರರು ಅಂಚೆ ಕಾರ್ಯಕರ್ತರಿಂದ ಮೋಸಹೋಗುವ ಅವಕಾಶವಿದೆ.
- ಇತರ ಹೂಡಿಕೆ ಯೋಜನೆಗಳಲ್ಲಿ ಹೆಚ್ಚಳವಾಗುತ್ತಿರುವ ಬಡ್ಡಿ ದರಗಳು ಅಂಚೆ ಕಛೇರಿಯ ಯೋಜನೆಗಳ ಬಡ್ಡಿದರಗಳಿಗೆ ತೀವ್ರ ಆತಂಕ ಉಂಟುಮಾಡಿದೆ.

ಹೆಚ್ಚಿನ ಗ್ರಾಮೀಣ ಅಂಚೆ ಕಛೇರಿಯಲ್ಲಿ ಸಿಬ್ಬಂದಿ ಕೊರತೆ ಇದೆ. ಅಂಚೆ ವಿಲೇವಾರಿ, ತ್ವರಿತ ಅಂಚೆ, ನೋಂದಾಯಿತ ಅಂಚೆ, ಠೇವಣಿ ಸ್ವೀಕಾರ, ಬಟವಾಡೆ ಇತ್ಯಾದಿ ಕೆಲಸಗಳನ್ನು ಕೇವಲ ಒಂದು ಅಥವಾ ಎರಡು ಸಿಬ್ಬಂದಿ ನಿರ್ವಹಿಸಬೇಕಾಗುತ್ತದೆ. ಇದರಿಂದಾಗಿ ಸಿಬ್ಬಂದಿ ಮೇಲೆ ಒತ್ತಡ ಇರುವುದಲ್ಲದೆ ಹೂಡಿಕೆ ಗ್ರಾಹಕರು ಗಂಟೆಗಳ ಕಾಲ ಕಾಯಬೇಕಾಗುತ್ತದೆ.

ಈ ಹಿನ್ನೆಲೆಯಲ್ಲಿ ಅಂಚೆ ಕಛೇರಿಯ ಉಳಿತಾಯ ಯೋಜನೆಗಳ ವಿವಿಧ ಆಯಾಮಗಳನ್ನು ಮಹಿಳಾ ಹೂಡಿಕೆದಾರರ ದೃಷ್ಟಿಯಿಂದ ಅಧ್ಯಯನ ಮಾಡಲು ಉದ್ದೇಶಿಸಿ ಈ ಸಂಶೋಧನೆಯನ್ನು ಆಯ್ಕೆ ಮಾಡಲಾಗಿದೆ.

ಸಂಶೋಧನಾ ಸಮಸ್ಯೀಕರಣ

ಮಹಿಳಾ ಸ್ವಾತಂತ್ರ್ಯ, ಮಹಿಳಾ ಸಬಲೀಕರಣ ಇತ್ಯಾದಿ ಈಗ ಬಹು ಚರ್ಚಿತ ವಿಷಯಗಳಾಗಿವೆ. ಇತ್ತೀಚೆಗೆ ಹೆಚ್ಚು ಹೆಚ್ಚು ಮಹಿಳೆಯರು, ಉದ್ಯೋಗಗಳ ಮೂಲಕ, ಹೂಡಿಕೆಗಳ ಮೂಲಕ, ಆರ್ಥಿಕ ವಲಯವನ್ನು ಪ್ರವೇಶಿಸುತ್ತಿದ್ದಾರೆ. ಆದರೆ ಅವರಿಗೆ ಕುಟುಂಬದ ಜವಾಬ್ದಾರಿ ತಪ್ಪಿಲ್ಲ. ಇವೆಲ್ಲವುಗಳ ಮಧ್ಯೆ ಮಹಿಳಾ ಹೂಡಿಕೆದಾರರು ಹೆಚ್ಚಾಗುತ್ತಿದ್ದಾರೆ ಎನ್ನುವುದು ನಿಚ್ಚಳ. ಈ ಪರಿಸರದಲ್ಲಿ ಮಹಿಳಾ ಹೂಡಿಕೆದಾರರ ಮನೋಭಿಪ್ರಾಯ ತಿಳಿಯುವ ಪ್ರಯತ್ನ ಇಲ್ಲಿ ಮಾಡಲಾಗಿದೆ. ಆದುದರಿಂದ ಈ ಸಂಶೋಧನೆಯನ್ನು "ಅಂಚೆ ಕಛೇರಿಯ ಉಳಿತಾಯ ಯೋಜನೆಗಳ ಕುರಿತು ಪುತ್ತೂರು ಪಟ್ಟಣದ ಮಹಿಳಾ ಹೂಡಿಕೆದಾರರ ಅನಿಸಿಕೆಗಳು" – ಎಂಬ ವಿಷಯದ ಬಗ್ಗೆ ಯೋಜಿಸಲಾಗಿದೆ.

ಅಧ್ಯಯನ ಪ್ರಾಮುಖ್ಯತೆ

ಸಣ್ಣ ಉಳಿತಾಯವು ಹಣಕಾಸಿನ ಹೂಡಿಕೆಗಳ ಒಂದು ಪ್ರಮುಖ ಮೂಲವಾಗಿರುವುದರಿಂದ, ಹೂಡಿಕೆದಾರರ ಮನೋಭಾವ, ಅನಿಸಿಕೆಗಳು, ನಿರೀಕ್ಷೆಗಳು, ಅನುಭವಗಳು ಇತ್ಯಾದಿಗಳ ಅಧ್ಯಯನವು, ಹೂಡಿಕೆಗಳ ಕುರಿತಾದ ಸಂಶೋಧನೆಗಳ ಒಂದು ಪ್ರಾಮುಖ್ಯ ಅಂಗವಾಗಿದೆ. ಪ್ರಸಕ್ತ, ಹಲವು ಹಣಕಾಸು ಸಂಸ್ಥೆಗಳ ವಿವಿಧ ಉಳಿತಾಯ ಯೋಜನೆಗಳು ಇದ್ದಾಗ್ಯೂ ಅಂಚೆ ಕಛೇರಿಗಳ ಉಳಿತಾಯ ಯೋಜನೆಗಳು ಆಕರ್ಷಣೆಯನ್ನು ಕಳೆದುಕೊಂಡಿಲ್ಲ.

೧. ಈ ಅಧ್ಯಯನದ ಫಲಿತಾಂಶವು ಹೂಡಿಕೆದಾರರಿಗೆ ಯಾವ ಉಳಿತಾಯ ಯೋಜನೆಯು ಗರಿಷ್ಠ ಪ್ರತಿಫಲ ನೀಡುತ್ತದೆ ಎಂದು ತಿಳಿಯಲು ಅನುಕೂಲ ಮಾಡಿಕೊಡುತ್ತವೆ.

೨. ಅಂಚೆ ಅಧಿಕಾರಿಗಳಿಗೆ ಹೊಸ ಯೋಜನೆಗಳನ್ನು ಪ್ರಾರಂಭಿಸಲು ಅಥವಾ ಪ್ರಸಕ್ತ ಯೋಜನೆಗಳನ್ನು ಆಕರ್ಷಿಸಲು ಅಥವಾ ಪ್ರಸಕ್ತ ಯೋಜನೆಗಳನ್ನು ಆಕರ್ಷಕವನ್ನಾಗಿ ಮಾಡಲು ಸಹಾಯ ಮಾಡುತ್ತದೆ.

೩. ಇತರ ಹಣಕಾಸು ಸಂಸ್ಥೆಗಳಿಗೆ ಅಂಚೆ ಕಛೇರಿಯ ಯೋಜನೆಗಳು ಯಾಕಾಗಿ ಹೂಡಿಕೆದಾರರನ್ನು ಆಕರ್ಷಿಸುತ್ತದೆ ಎಂದು ತಿಳಿಯುವುದರ ಮೂಲಕ ತಮ್ಮ ಯೋಜನೆಗಳ ಪುನಃ ವಿಮರ್ಶೆ ಮಾಡಲು ಸಹರಿಸುತ್ತವೆ. ಈ ಎಲ್ಲಾ ಕಾರಣಗಳಿಂದ ಈ ಅಧ್ಯಯನವು ಹಾಗೂ ಇದರ ಫಲಿತಾಂಶಗಳು ಪ್ರಾಮುಖ್ಯತೆ ಪಡೆದಿದೆ.

ಅಧ್ಯಯನದ ಉದ್ದೇಶಗಳು

ಅಂಚೆ ಕಛೇರಿಯ ಉಳಿತಾಯ ಯೋಜನೆಗಳ ಕುರಿತು ಮಹಿಳಾ ಹೂಡಿಕೆದಾರರ ಅನಿಸಿಕೆಗಳ ಅಧ್ಯಯನವು ಪ್ರಸಕ್ತ ಸಂಶೋಧನೆಯ ಮುಖ್ಯ ಉದ್ದೇಶವಾಗಿದೆ. ಇದಕ್ಕೆ ಸಂಬಂಧಿಸಿದಂತೆ ಇತರ ಪೂರಕ ಉದ್ದೇಶಗಳು ಈ ಕೆಳಗಿನಂತಿವೆ.

೧. ಅಂಚೆ ಕಛೇರಿಯ ವಿವಿಧ ಉಳಿತಾಯ ಯೋಜನೆಗಳ ಕುರಿತು ಮಹಿಳಾ ಹೂಡಿಕೆದಾರರಿಗೆ ಇರುವ ಅರಿವಿನ ಮಟ್ಟವನ್ನು ತಿಳಿಯುವುದು.

೨. ಅಂಚೆ ಕಛೇರಿಯ ಉಳಿತಾಯ ಯೋಜನೆಗಳ ಕುರಿತು ಮಹಿಳಾ ಹೂಡಿಕೆದಾರರ ನಿರೀಕ್ಷೆಗಳ ಬಗ್ಗೆ ತಿಳಿಯುವುದು.

೩. ಅಂಚೆ ಕಛೇರಿಯ ಉಳಿತಾಯ ಯೋಜನೆಗಳಲ್ಲಿ ವ್ಯವಹರಿಸುವಾಗ ಮಹಿಳಾ ಹೂಡಿಕೆದಾರರು ಎದುರಿಸುತ್ತಿರುವ ಸಮಸ್ಯೆ, ತೊಂದರೆ, ಹಾಗೂ ತೊಡಕುಗಳ ಬಗ್ಗೆ ತಿಳಿಯುವುದು.

೪. ಅಂಚೆ ಕಛೇರಿಯ ಉಳಿತಾಯ ಯೋಜನೆಗಳಿಗೆ ಸಂಬಂಧಿಸಿದ ಸೇವೆಗಳ ಕುರಿತು ಮಹಿಳಾ ಹೂಡಿಕೆದಾರರ ತೃಪ್ತಿಯ ಮಟ್ಟವನ್ನು ತಿಳಿಯುವುದು.

೫. ಅಂಚೆ ಕಛೇರಿಗಳು ನೀಡುವ ಸೇವೆಗಳ ಮಟ್ಟವನ್ನು ಉತ್ತಮಗೊಳಿಸಲು ಅನುಕೂಲವಾಗುವಂತೆ ಅಧ್ಯಯನದ ಆಧಾರದಲ್ಲಿ ಕೆಲವು ಸಲಹೆ ಸೂಚನೆಗಳನ್ನು ನೀಡುವುದು.

ಅಧ್ಯಯನದ ವ್ಯಾಪ್ತಿ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಪುತ್ತೂರು ಎರಡನೇ ದೊಡ್ಡ ಪಟ್ಟಣವಾಗಿದೆ. ಇದು ಅಡಿಕೆ ಬೆಳೆಯುವ ಹಾಗೂ ಮಾರಾಟದ ಒಂದು ಪ್ರಮುಖ ಕೇಂದ್ರವಾಗಿದೆ. ಅಡಿಕೆ ಒಂದು ಪ್ರಾಮುಖ್ಯ ವಾಣಿಜ್ಯ ಬೆಳೆ. ಆದುದರಿಂದ ಇದು ಜಿಲ್ಲೆಯ ಎರಡನೇ ಮುಖ್ಯ ಹಣಕಾಸು ವ್ಯವಹಾರಗಳಿಗ ಕೇಂದ್ರವಾಗಿದೆ. ಆದುದರಿಂದ ಉಪಯೋಗಿಸಿದ ಈ ಅಧ್ಯಯನವನ್ನು ದಕ್ಷಿಣ ಕನ್ನಡ ಜಿಲ್ಲೆಯ (ಕರ್ನಾಟಕ) ಪುತ್ತೂರು ಪಟ್ಟಣದ ವ್ಯಾಪ್ತಿಯಲ್ಲಿ ಕೈಗೊಳ್ಳಲಾಗಿದೆ. 2015–16 ಶೈಕ್ಷಣಿಕ ವರ್ಷವನ್ನು ಸಂಶೋಧನಾ ಅವಧಿಯಾಗಿ ತೆಗೆದುಕೊಳ್ಳಲಾಗಿದೆ. ಅಧ್ಯಯನವನ್ನು 120 ಮಹಿಳಾ ಹೂಡಿಕೆದಾರರಿಗೆ ಸೀಮಿತಗೊಳಿಸಲಾಗಿದೆ.

ಅಧ್ಯಯನದ ವಿಧಾನ

ಹೂಡಿಕೆದಾರರ ಮಾದರಿಯನ್ನು ನಿರ್ಧರಿಸಲು 'ರ್‍ಯಾಂಡಂ' ಮಾದರಿ ವಿಧಾನವನ್ನು ಅನುಸರಿಸಲಾಗಿದೆ. ಮಾದರಿಯ ಆಯ್ಕೆಯಲ್ಲಿ ವಿವಿಧ ವಿಷಗಳಾದ ವಯಸ್ಸು, ಆದಾಯ ಮಟ್ಟ, ವಿದ್ಯಾರ್ಹತೆ, ಉದ್ಯೋಗ, ಇತ್ಯಾದಿ ವಿಷಯಗಳ ಒಳಗೊಳ್ಳುವಂತೆ ರೂಪಿಸಲಾಗಿದೆ. ಮಾಹಿತಿದಾರರನ್ನು ಆಯ್ಕೆ ಮಾಡುವಾಗ ಎಲ್ಲಾ ವರ್ಗದ ಜನರನ್ನು ಪ್ರತಿನಿಧಿಸುವಂತೆ ಗಮನ ನೀಡಲಾಗಿದೆ. ಮಾಹಿತಿ ಸಂಗ್ರಹಕ್ಕೆ ಪ್ರಶ್ನಾವಳಿಯನ್ನು ಉಪಯೋಗಿಸಲಾಗಿದೆ. ಇವುಗಳನ್ನು ಪುತ್ತೂರು ಪಟ್ಟಣದ ಮಹಿಳಾ ಹೂಡಿಕೆದಾರರಲ್ಲಿ ವಿತರಿಸಿ ಅಭಿಪ್ರಾಯ ಸಂಗ್ರಹಿಸಲಾಗಿದೆ. ಈ ಮಾದರಿ ಗುಂಪಿನ ಗಾತ್ರ 120 ಮಹಿಳಾ ಹೂಡಿಕೆದಾರರಿಂದ ಕೂಡಿದೆ. ಇದಕ್ಕೆ ಪೂರಕವಾಗಿ ಅಸಾಂಪ್ರದಾಯಿಕ ಚರ್ಚಾ ವಿಧಾಯವನ್ನು ಅನುಸರಿಸಲಾಗಿದೆ. ಸಂಗ್ರಹಿಸಿದ ದತ್ತಾಂಶ ಹಾಗೂ ಮಾಹಿತಿಗಳನ್ನು ವಿವಿಧ ಸಂಖ್ಯಾ ಶಾಸ್ತ್ರ ತಂತ್ರಗಳ ಮೂಲಕ ವಿಶ್ಲೇಷಿಸಿ ಅರ್ಥೈಸಲಾಗಿದೆ.

ಮಾಹಿತಿ ಮೂಲಗಳು

ಈ ಅಧ್ಯಯನವನ್ನು ಪ್ರಾಥಮಿಕ ಹಾಗೂ ಅನುಷಂಗಿಕ ಮೂಲಗಳಿಂದ ಸಂಗ್ರಹಿಸಿದ ಮಾಹಿತಿಗಳ ಆಧಾರದಲ್ಲಿ ಮಾಡಲಾಗಿದೆ. ಪ್ರಾಥಮಿಕ ಮಾಹಿತಿಯನ್ನು 120 ಮಹಿಳಾ ಹೂಡಿಕೆದಾರರಿಂದ ಸೂಕ್ತವಾಗಿ ತಯಾರಿಸಿದ ಪ್ರಶ್ನಾವಳಿಗಳ ಮೂಲಕ ಸಂಗ್ರಹಿಸಲಾಗಿದೆ. ಅನುಷಂಗಿಕ ಮಾಹಿತಿಯನ್ನು ವಿವಿಧ ಸರಕಾರೀ ದಾಖಲೆಗಳು, ಪುಸ್ತಕಗಳು, ಪತ್ರಿಕೆಗಳು, ನಿಯತಕಾಲಿಕೆಗಳು, ದಿನಪತ್ರಿಕೆಗಳು, ಸಂಶೋಧನಾ ಪ್ರಬಂಧ ಮತ್ತು ಲೇಖನಗಳು ಹಾಗೂ ಅಂತರ್ಜಾಲಗಳಿಂದ ಸಂಗ್ರಹಿಸಲಾಗಿದೆ.

ಸಂಖ್ಯಾ ಶಾಸ್ತ್ರ ಉಪಕರಣಗಳು

ಪ್ರಾಥಮಿಕ ಹಾಗೂ ಅನುಷಂಗಿಕ ಮಾಹಿತಿಗಳನ್ನು ಸಂಗ್ರಹಿಸಿದ ಮೇಲೆ ಅವುಗಳನ್ನು ಸೂಕ್ತ ಕೋಷ್ಟಕಗಳಾಗಿ ವಿಂಗಡಿಸಲಾಗಿದೆ. ಈ ಕೋಷ್ಟಕಗಳ ಅಂಕಿ ಅಂಶಗಳನ್ನು ಸಂಖ್ಯಾ ಶಾಸ್ತ್ರ ಉಪಕರಣಗಳಾದ ಅನುಪಾತ, ಸರಾಸರಿ ಪ್ರಮಾಣ, ಶೇಕಡಾವಾರು ಇತ್ಯಾದಿಗಳ ಮೂಲಕ ವಿಶ್ಲೇಷಿಸಲಾಗಿದೆ. ಸಂಖ್ಯಾ ಶಾಸ್ತ್ರ ತಂತ್ರಗಳಾದ 'ಕೈ ಸ್ಕ್ವೇರ್', 'ಅನೋವಾ' ಇವುಗಳಿಗೆ ಪೂರಕವಾಗಿ ರೇಖಾ ನಕ್ಷೆ ಹಾಗೂ ರೇಖಾ ಪಟಗಳನ್ನು ಬಳಸಲಾಗಿದೆ.

ಅಧ್ಯಯನದ ಇತಿಮಿತಿಗಳು

ಪ್ರಸಕ್ತ ಅಧ್ಯಯನವು ಇತಿಮಿತಿಗಳಿಂದ ಹೊರತಾಗಿಲ್ಲ. ಅಂತಹ ಕೆಲವು ಇತಿ ಮಿತಿಗಳುಈ ಕೆಳಗಿನಂತಿವೆ.

೧. ಈ ಅಧ್ಯಯನ ಕ್ಷೇತ್ರವು ದಕ್ಷಿಣ ಕನ್ನಡದ ಪುತ್ತೂರು ಪಟ್ಟಣಕ್ಕಷ್ಟೇ ಸೀಮಿತವಾಗಿದೆ. ಆದುದರಿಂದ ಸಂಶೋಧನಾ ಫಲಿತಾಂಶವನ್ನು ಎಲ್ಲಾ ಪ್ರದೇಶಗಳಿಗೆ ಅನ್ವಯಿಸಲಾಗುವುದಿಲ್ಲ.

೨. ಒಂದು ವರ್ಷದ ಸೀಮಿತ ಅಧ್ಯಯನ ಅವಧಿಯ ಕಾರಣದಿಂದ ಹೂಡಿಕೆದಾರರ ಮಾದರಿ ಗಾತ್ರವನ್ನು 120 ಹೂಡಿಕೆದಾರರಿಗೆ ಸೀಮಿತಗೊಳಿಸಲಾಗಿದೆ. ಇದು ಎಲ್ಲಾ ಹೂಡಿಕೆದಾರರನ್ನು ಪೂರ್ತಿಯಾಗಿ ಪ್ರತಿನಿಧಿಸುತ್ತದೆ ಎಂದು ಹೇಳಲಾಗುವುದಿಲ್ಲ.

೩. ಅಧ್ಯಯನವು ಮಹಿಳಾ ಹೂಡಿಕೆದಾರರಿಗೆ ಸೀಮಿತಗೊಳಿಸಿದುದರಿಂದ ಫಲಿತಾಂಶವು ಪುರುಷ ಹೂಡಿಕೆದಾರರಿಗೆ ಅನ್ವಯ ಮಾಡಲಾಗುವುದಿಲ್ಲ.

೪. ಈ ಅಧ್ಯಯನವು ಹಣಕಾಸಿನ ವಿಷಯಗಳಿಗೆ ಸಂಬಂಧಿಸಿರುವುದರಿಂದ ಪ್ರಶ್ನಾವಳಿಯಲ್ಲಿರುವ ಕೆಲವು ಪ್ರಶ್ನೆಗಳಿಗೆ ಹೂಡಿಕೆದಾರರು ಮುಕ್ತವಾಗಿ ಮಾಹಿತಿ ನೀಡಿದ್ದಾರೆ ಎಂದು ಹೇಳಲಾಗುವುದಿಲ್ಲ. ಆದುದರಿಂದ ಇಂತಹ ಸಂಶಯ ಪ್ರವೃತ್ತಿ ಅಧ್ಯಯನದ ಫಲಿತಾಂಶದ ಮೇಲೆ ಸ್ವಲ್ಪ ಮಟ್ಟಿಗೆ ಪರಿಣಾಮ ಬೀರಿರುವ ಸಾಧ್ಯತೆ ಇದೆ. ಆದಾಗ್ಯೂ ಅಂತಹ ಮಾಹಿತಿಗಳನ್ನು ಪರೋಕ್ಷ ವಿಧಾನದಿಂದ ಸಂಗ್ರಹಿಸಿ ಪರಿಣಾಮ ಅತ್ಯಂತ ಕನಿಷ್ಟ ಆಗುವಂತೆ ಜಾಗ್ರತೆ ವಹಿಸಲಾಗಿದೆ.

ಅಧ್ಯಾಯಗಳ ವಿವರ

ಈ ಸಂಶೋಧನಾ ಅಧ್ಯಯನದ ವರದಿಯನ್ನು ಐದು ಅಧ್ಯಾಯಗಳಲ್ಲಿ ಪ್ರಸ್ತುತಪಡಿಸಲಾಗಿದೆ.

ಒಂದನೇ ಅಧ್ಯಾಯವು ಪೀಠಿಕೆಯಾಗಿದ್ದು ಇದರಲ್ಲಿ ಅಧ್ಯಯನ ಉದ್ದೇಶ, ವ್ಯಾಪ್ತಿ, ಸಮಸ್ಯೀಕರಣ, ಅಧ್ಯಯನದ ವಿಧಾನಗಳು ಹಾಗೂ ಇತಿಮಿತಿಗಳನ್ನು ವಿವರಿಸಲಾಗಿದೆ.

ಎರಡನೇ ಅಧ್ಯಾಯವು 'ಪರಿಕಲ್ಪನಾ ಚೌಕಟ್ಟು' ಎರಡು ವಿಭಾಗಗಳನ್ನು ಒಳಗೊಂಡಿದೆ. ವಿಭಾಗ ಅ. ಸಾಹಿತ್ಯ ಹಾಗೂ ಗ್ರಂಥಗಳ ಪರಾಮರ್ಶನ ಒಳಗೊಂಡಿದೆ. ವಿಭಾಗ ಬ. ಅಧ್ಯಯನ ಕ್ಷೇತ್ರದ ಕಿರುಪರಿಚಯ ನೀಡುತ್ತದೆ.

ಮೂರನೇ ಅಧ್ಯಾಯವು ಅಂಚೆ ಉದ್ಯಮದ ಪರಿಚಯ ಮಾಡಿಕೊಡುತ್ತದೆ. ಇದರಲ್ಲಿ ಅಂಚೆ ಕಛೇರಿಯ ಹುಟ್ಟು ಬೆಳವಣಿಗೆ ಹಾಗೂ ಅಂಚೆ ಕಛೇರಿಯ ವಿವಿಧ ಉಳಿತಾಯ ಯೋಜನೆಗಳ ವಿವರ ನೀಡಲಾಗಿದೆ.

ನಾಲ್ಕನೇ ಅಧ್ಯಾಯ 'ದತ್ತಾಂಶ ಹಾಗೂ ಮಾಹಿತಿಗಳ ವಿಶ್ಲೇಷಣೆ' ಇದರಲ್ಲಿ ಸಂಗ್ರಹಿಸಿದ ಮಾಹಿತಿಗಳನ್ನು ವಿಶ್ಲೇಶಿಸಿ ಅರ್ಥೈಸಲಾಗಿದೆ.

ಐದನೇ ಅಧ್ಯಾಯ 'ಸಂಶೋಧನಾ ಫಲಿತಾಂಶದ ಸಾರಾಂಶ ಸಲಹೆ ಸೂಚನೆಗಳು ಮತ್ತು ಮುಕ್ತಾಯ' ಇದರಲ್ಲಿ ಸಂಶೋಧನಾ ಫಲಿತಾಂಶದ ಆಧಾರದಲ್ಲಿ ವ್ಯವಸ್ಥೆಯ ಉನ್ನತೀಕರಣಕ್ಕೆ ಸಲಹೆ ಸೂಚನೆಗಳನ್ನು ನೀಡಲಾಗಿದೆ.

ಅಧ್ಯಾಯ ೨

ಪರಿಕಲ್ಪನಾ ಚೌಕಟ್ಟು

ಅಧ್ಯಾಯ 2

ಪರಿಕಲ್ಪನಾ ಚೌಕಟ್ಟು

ಪರಿಕಲ್ಪನಾ ಚೌಕಟ್ಟು ಅಧ್ಯಾಯದಲ್ಲಿ ಸಂಶೋಧನೆಗೆ ಸಂಬಂಧಪಟ್ಟ ಎರಡು ವಿಷಯಗಳನ್ನು ವಿವರಿಸಲಾಗಿದೆ. ಈ ಅಧ್ಯಾಯವನ್ನು ಎರಡು ವಿಭಾಗಗಳಾಗಿ ವಿಂಗಡಿಸಲಾಗಿದೆ. ವಿಭಾಗ ಅ ಹಾಗೂ ವಿಭಾಗ ಬ.

ವಿಭಾಗ – ಅ. ಸಾಹಿತ್ಯ ಹಾಗೂ ಗ್ರಂಥಗಳ ಪರಾಮರ್ಶೆಗೆ ಮೀಸಲಿಡಲಾಗಿದೆ. ವಿಭಾಗ ಬ ದಲ್ಲಿ ಅಧ್ಯಯನ ಕ್ಷೇತ್ರ, ಪುತ್ತೂರು ಇದರ ಬಗ್ಗೆ ವಿವರ ಕೊಡಲಾಗಿದೆ.

ವಿಭಾಗ – ಅ

ಸಾಹಿತ್ಯ ಹಾಗೂ ಗ್ರಂಥಗಳ ಪರಾಮರ್ಶೆ

ಅಂಚೆ ಕಛೇರಿಯ ಉಳಿತಾಯ ಯೋಜನೆಗಳ ಕುರಿತು ಪುತ್ತೂರು ಪಟ್ಟಣದ ಮಹಿಳೆಯರ ಅನಿಸಿಕೆಗಳು – ಒಂದು ಅಧ್ಯಯನ ಎಂಬ ವಿಷಯದಲ್ಲಿ ಸಂಶೋಧನಾ ಪ್ರಬಂಧವನ್ನು ಮಂಡಿಸುವ ಸಲುವಾಗಿ ಮತ್ತು ಸಮಗ್ರ ಅಧ್ಯಯನದ ಉದ್ದೇಶಕ್ಕಾಗಿ ಈ ವಿಷಯಕ್ಕೆ ಸಂಬಂಧಿಸಿದ ಸಾಹಿತ್ಯ ಹಾಗೂ ಗ್ರಂಥಗಳ ಪರಾಮರ್ಶೆ ಮಾಡಲಾಗಿದೆ. ಇಂತಹ ಪರಾಮರ್ಶೆ ಸಂಬಂಧಿತ ಕ್ಷೇತ್ರಗಳಲ್ಲಿನ ಸಂಶೋಧನಾ ಅವಕಾಶವನ್ನು ತಿಳಿಯಲು ಅನುಕೂಲ ಮಾಡುತ್ತದೆ. ಈ ಕಾರಣಕ್ಕಾಗಿ ಈ ಕ್ಷೇತ್ರದಲ್ಲಿ ಲಭ್ಯವಿರುವ ಸಂಶೋಧನಾ ಅಧ್ಯಯನಗಳನ್ನು ಈ ಕೆಳಗೆ ವಿಮರ್ಶಿಸಲಾಗಿದೆ.

- ತಮಿಳ್‌ಕೊಡಿ (1983)[1] ಇವರು ತಮ್ಮ ಸಂಶೋಧನಾ ಪ್ರಬಂಧದಲ್ಲಿ ಸಣ್ಣ ಉಳಿತಾಯ ಯೋಜನೆಗಳ ಕುರಿತು ತಿಳಿಸುತ್ತಾರೆ. ಅವರ ಅಭಿಪ್ರಾಯದಂತೆ ಅಂಚೆ ಕಛೇರಿಯ ಉಳಿತಾಯ ಯೋಜನೆಗಳು, ಹೆಂಗಸರು, ಗಂಡಸರು ಮತ್ತು ಮಕ್ಕಳಿಗೆ ಕೂಡಾ ತಮ್ಮ ಉಳಿತಾಯವನ್ನು ಪರಿಚಯಿಸಲು ಅವಕಾಶ ನೀಡುತ್ತದೆ. ಆದರೆ ಯೋಜನೆಗಳ ನಿಯಮಗಳನ್ನು ಇನ್ನೂ ಸರಳವಾಗಿ ಮಾಡುವ ಅಗತ್ಯವಿದೆ. ಇದರಿಂದ ಅನಕ್ಷರಸ್ಥರಿಗೆ ಹಾಗೂ ಹಿಂದುಳಿದ ವರ್ಗಗಳ ಗ್ರಾಹಕರಿಗೆ ತುಂಬಾ ಅನುಕೂಲವಾಗುತ್ತದೆ ಎಂದು ಸಲಹೆ ನೀಡುತ್ತಾರೆ.

- ಮುಖಿ (1989)[2] ಎಂಬ ಸಂಶೋಧಕರು ತಿಳಿಸುವಂತೆ, ಅಂಚೆ ಕಛೇರಿಯ ಯೋಜನೆಗಳ ಪೈಕಿ ರಾಷ್ಟ್ರೀಯ ಉಳಿತಾಯ ಪತ್ರಗಳು ತಮ್ಮ ತೆರಿಗೆ ಉಳಿತಾಯ ಸೌಲಭ್ಯದಿಂದಾಗಿ ತುಂಬಾ

---

[1] ತಮಿಳ್‌ಕೊಡಿ ಬಿಪಿಪಿ (1983), ಸ್ಮಾಲ್ ಸೇವಿಂಗ್ಸ್ ಸ್ಕೀಮ್ಸ್ ಇನ್ ತಮಿಳ್‌ನಾಡು – ಎ ಟ್ರೆಂಡ್ ಸ್ಟಡಿ (1970–80) ಅನ್ ಪಬ್ಲಿಶ್ಡ್ ಥೀಸಿಸ್, ಯುನಿವರ್ಸಿಟಿ ಆಫ್ ಮದ್ರಾಸ್, ತಮಿಳ್‌ನಾಡು

[2] ಮುಖಿ ಎಂ.ಡಿ. (1989), ಎನ್.ಯು.ಎಸ್.ಸಿ.ಎಸ್. ಸೇವಿಂಗ್ ಗ್ರೇಸ್ ಬಿಸಿನೆಸ್ ವರ್ಲ್ಡ್, 3–6–1944, ಡಿಸೆಂಬರ್ 1989 ಪಿಪಿ 103–120

ಜನಪ್ರಿಯವಾಗಿದೆ. ಈ ಪತ್ರಗಳ ಜನಪ್ರಿಯತೆಗೆ ಕಾರಣವನ್ನು ಈ ರೀತಿ ನೀಡುತ್ತಾರೆ. ಒಂದನೆಯದಾಗಿ ಗುತ್ತಿಗೆದಾರರು ಹಾಗೂ ಇತರರು ಹಣಕಾಸು ಸಂಸ್ಥೆಗಳಿಂದ ಸಾಲ ಪಡೆಯುವಾಗ ಈ ಪತ್ರಗಳನ್ನು ಅಡವು ಇಟ್ಟು ಸುಲಭದಲ್ಲಿ ಪಡೆಯಬಹುದು. ಈ ರೀತಿ ಅಡವು ಇಟ್ಟ ಪತ್ರಗಳ ಆದಾಯ ಬಡ್ಡಿ ರೂಪದಲ್ಲಿ ಬರುತ್ತಲೇ ಇರುತ್ತದೆ. ಇದು ಸಾಲದ ಮೇಲೆ ಸಾಲಗಾರರು ನೀಡುವ ಬಡ್ಡಿಯ ಹೊರೆಯನ್ನು ಕಡಿಮೆ ಮಾಡುತ್ತಿದೆ. ಎರಡನೆಯದಾಗಿ ಈ ಪತ್ರಗಳ ಕಾರ್ಯ ವಿಧಾನ ಅತೀ ಸರಳವಾಗಿದೆ. ಆದುದರಿಂದ ಸಾಮಾನ್ಯ ಜನರು ಕೂಡಾ ಇದರ ವಿವರಗಳನ್ನು ಸುಲಭವಾಗಿ ಅರ್ಥ ಮಾಡಿಕೊಳ್ಳಲು ಸಾಧ್ಯವಿದೆ.

- ಗಾವಿನಿ ಮತ್ತು ಆತ್ಮ (1999)[3] ಇವರು ತಮ್ಮ ಅಧ್ಯಯನದಲ್ಲಿ ಸಾಮಾಜಿಕ ಕಾರಣಗಳು, ತೆರಿಗೆ ಉಳಿತಾಯ ಸೌಲಭ್ಯಗಳು, ಹಾಗೂ ವೃದ್ಧಾಪ್ಯ ಕಾಲದಲ್ಲಿ ಭದ್ರತೆ ಈ ಕಾರಣಗಳಿಗಾಗಿ ಪಟ್ಟಣದ ಜನರು ಉಳಿತಾಯ ಮಾಡುತ್ತಾರೆ. ಆದರೆ ವೃದ್ಧಾಪ್ಯ ಕಾಲದಲ್ಲಿನ ಭದ್ರತೆಗಾಗಿ ಅನ್ನುವ ಒಂದೇ ಕಾರಣಕ್ಕಾಗಿ ಹಳ್ಳಿಯ ಗ್ರಾಹಕರು ಉಳಿತಾಯ ಯೋಜನೆಗಳಲ್ಲಿ ಹಣ ತೊಡಗಿಸುತ್ತಾರೆ ಎಂದು ತಿಳಿಸುತ್ತದೆ. ಅವರ ಅಭಿಪ್ರಾಯದಂತೆ ಅಂಚೆ ಕಛೇರಿಯ ಉಳಿತಾಯ ಯೋಜನೆಗಳಲ್ಲಿ, ಇಂದಿರಾ ವಿಕಾಸ ಪತ್ರ, ಕಿಸಾನ್ ವಿಕಾಸ್ ಪತ್ರ ಹಾಗೂ ಅಂಚೆ ಕಛೇರಿಯ ಆವರ್ತ ಠೇವಣಿ ಖಾತೆ ನಗರ ಹಾಗೂ ಹಳ್ಳಿ ಪ್ರದೇಶಗಳಲ್ಲಿ ಅತ್ಯಂತ ಜನಪ್ರಿಯವಾಗಿದೆ.

- ಕಾರ್ತಿಕೇಯನ್ (2001)[4] ಇವರು ಅಂಚೆ ಕಛೇರಿಯ ಯೋಜನೆಗಳ ಕುರಿತು ಸಣ್ಣ ಹೂಡಿಕೆದಾರರ ಅಭಿಪ್ರಾಯಗಳ ಕುರಿತು ಸಂಶೋಧನೆ ಮಾಡಿ ವಿವಿಧ ಯೋಜನೆಗಳ ತಿಳುವಳಿಕೆಗೆ ಸಂಬಂಧಿಸಿದಂತೆ ವಿವಿಧ ವಯಸ್ಸಿನ ಹೂಡಿಕೆದಾರರ ತಿಳುವಳಿಕೆ ಮಟ್ಟದಲ್ಲಿ ತಾರತಮ್ಯವಿದೆ ಎಂದು ತಿಳಿಸುತ್ತದೆ. ಕಿಸಾನ್ ವಿಕಾಸ ಪತ್ರ, ರಾಷ್ಟ್ರೀಯ ಉಳಿತಾಯ ಯೋಜನೆ ಹಾಗೂ ನಿವೃತ್ತ ಉದ್ಯೋಗಿಗಳ ಠೇವಣಿ ಯೋಜನೆಗಳ ಬಗ್ಗೆ ಇಳಿ ವಯಸ್ಸಿನವರ ತಿಳುವಳಿಕೆ ಮಟ್ಟ ಯುವಕರ ತಿಳುವಳಿಕೆ ಮಟ್ಟಕ್ಕಿಂತ ಹೆಚ್ಚು ಇದೆ ಎಂದು ಕಂಡು ಹಿಡಿದಿರುತ್ತದೆ.

- ಸೋಮ ಸುಂದರಂ (1998)[5] ಇವರು ತಮ್ಮ ಬ್ಯಾಂಕ್ ಠೇವಣಿಗಳು ಮತ್ತು ಚೀಟಿ ನಿಧಿಗಳ ಕುರಿತು ಸಂಶೋಧನೆಯಲ್ಲಿ 'ಬ್ಯಾಂಕ್ ಠೇವಣಿಗಳು ಹಾಗೂ ಚೀಟಿ ನಿಧಿಗಳ ಕುರಿತು ಹೆಚ್ಚಿನವರಿಗೆ ತಿಳುವಳಿಕೆ ಇದೆ. ಆದರೆ ಯುನಿಟ್ ಟ್ರಸ್ಟ್ ಬಗ್ಗೆ ಜನರಿಗೆ ಅತ್ಯಂತ ಕನಿಷ್ಟ ತಿಳುವಳಿಕೆ ಇದು ಎಂದು ತಿಳಿಸಿರುತ್ತಾರೆ.

---

3 ಆಗಸ್ಟಿಸ್ ಗಾವಿನಿ ಮತ್ತು ಆತ್ಮ ಪ್ರಶಾಂಕ್ (1999), 'ಸ್ಮಾಲ್ ಸೇವಿಂಗ್ ಸ್ಕೀಮ್ ಆಫ್ ಪೋಸ್ಟ್ ಆಫೀಸ್ ನೀಡ್ ಟು ಬಿ ನೌನ್ ಮೋರ್ ಸದರ್ನ್ ಇಕನಾಮಿಸ್ಟ್ 37 (20), ಫೆಬ್ರವರಿ, ಪಿಪಿ 13–14

4 ಕಾರ್ತಿಕೇಯನ್ ಬಿ. (2001), ಸ್ಮಾಲ್ ಇನ್‌ವೆಸ್ಟರ್ಸ್ ಪರ್‌ಸೆಪ್ಶನ್‌ಆನ್ ಸ್ಮಾಲ್ ಸೇವಿಂಗ್ಸ್ ಸ್ಕೀಮ್, ಅನ್‌ಪಬ್ಲಿಶ್ಡ್ ಥೀಸಿಸ್. ಮದರಾಸು ಯುನಿವರ್ಸಿಟಿ, ತಮಿಳುನಾಡು, ಇಂಡಿಯಾ

5 ಸೋಮಸುಂದರಮ್ ಸಿ.ಕೆ. (1948), ಅನ್ ಸೇವಿಂಗ್ಸ್ ಅ್ಯಂಡ್ ಇನ್ವೆಸ್ಟ್‌ಮೆಂಟ್ ಪ್ಯಾಟರ್ನ್ ಆಫ್ ಸ್ಯಾಲರೀಡ್ ಕ್ಲಾಸ್ ಇನ್ ಕೊಯಂಬತೂರ್ ಡಿಸ್ಟ್ರಿಕ್ಟ್

- ನಾಗಪಾಲ್ ಸುಶಾಂತಿ ಮತ್ತು ಬೋದ್ಲಾ ಬಿ.ಯಸ್. (2009) ಹೂಡಿಕೆದಾರರ ಜನಸಂಖ್ಯಾ ಲಕ್ಷಣಗಳನ್ನು ವಿವರಿಸುತ್ತಾ ಹೂಡಿಕೆದಾರರ ಜೀವನ ರೀತಿ ಮತ್ತು ಅವರ ಹೂಡಿಕಾಕ್ರಮಗಳು ಹಾಗೂ ಮಾಹಿತಿ ತಿಳುವಳಿಕೆ ಇವುಗಳ ನಡುವಿನ ಸಂಬಂಧಗಳನ್ನು ಕಂಡು ಹಿಡಿರುತ್ತಾರೆ. ಅಧ್ಯಯನ ಮುಕ್ತಾಯದಲ್ಲಿ ಹೂಡಿಕೆದಾರರು ವಿಮಾ ಪಾಲಿಸಿ ಬ್ಯಾಂಕ್‌ಗಳ ನಿರಖು ಠೇವಣಿ ಇತ್ಯಾದಿ ಕಡಿಮೆ ನಷ್ಟ ಭಯ ಇರುವ ಯೋಜನೆಗಳನ್ನು ಉಳಿದೆಲ್ಲಾ ಯೋಜನೆಗಳಿಗಿಂತ ಹೆಚ್ಚು ಇಷ್ಟಪಡುತ್ತಾರೆ ಎಂದು ಹೇಳಿರುತ್ತದೆ.

- ಡಾ. ಆರ್. ಗಣಪತಿ (2010)[6] ಇವರು ಅಂಚೆ ಕಛೇರಿಯ ಸಣ್ಣ ಉಳಿತಾಯ ಯೋಜನೆಗಳ ಕುರಿತು ಅಧ್ಯಯನ ನಡೆಸಿರುತ್ತಾರೆ. ಈ ಯೊಜನೆಗಳು ಸಣ್ಣ ಹೂಡಿಕೆದಾರರಿಗೆ ಹಾಗೂ ಹೆಚ್ಚು ತೆರಿಗೆ ನೀಡುವ ಹೂಡಿಕೆದಾರರಿಗೆ ಸಹಾಯ ಮಾಡುತ್ತದೆ ಎಂದು ಹೇಳಿರುತ್ತಾರೆ. ಅವರು ತಮ್ಮ ಅಧ್ಯಯನದಲ್ಲಿ ಅಂಚೆ ಕಛೇರಿಗಳ ಯೋಜನೆಗಳ ಜಾಹೀರಾತು ಸಾಲದು ಇದರ ಬಗ್ಗೆ ಗಮನ ನೀಡಲೇ ಬೇಕು ಎಂದು ತಿಳಿಸುತ್ತಾ ಇದರಿಂದ ಸಾಮಾನ್ಯ ಜನರು ಕೂಡಾ ಅಂಚೆ ಕಛೇರಿಯ ಯೋಜನೆಗಳ ಬಗ್ಗೆ ತಿಳಿದುಕೊಂಡು ಉಳಿತಾಯ ಯೋಜನೆಗಳಲ್ಲಿ ಹಣ ತೊಡಗಿಸಲು ಅನುಕೂಲವಾಗುತ್ತದೆ ಎಂದು ತಿಳಿಸುತ್ತಾರೆ.

- ಇನ್ನೊಂದು ಜಂಟಿ ಅಧ್ಯಯನದಲ್ಲಿ ಡಾ! ಗಣಪತಿ ಆರ್.ಮತ್ತು ಅನ್ಬುಮಲಾರ್ ಎನ್. ರವರು ಅಂಚೆ ಕಛೇರಿಯ ಉಳಿತಾಯ ಯೋಜನೆಗಳನ್ನು ಹೆಚ್ಚಾಗಿ ಕೃಷಿ ಕಾರ್ಮಿಕರು ಉಪಯೋಗಿಸುತ್ತಾರೆ. ಆದರೆ ಇತ್ತೀಚೆಗೆ ಶ್ರೀಮಂತ ಹೂಡಿಕೆದಾರರೂ ಅಂಚೆ ಕಛೇರಿಯ ಯೋಜನೆಗಳಲ್ಲಿ ಹಣ ತೊಡಗಿಸುತ್ತಿದ್ದಾರೆ ಎಂದು ತಿಳಿಯಪಡಿಸುತ್ತಾರೆ. 'ಆ್ಯನ್‌ಅನಾಲಿಸಿಸ್ ಆಫ್ ಪೋಸ್ಟಲ್ ಇನ್ವೆಸ್ಟ್‌ಮೆಂಟ್ ಆ್ಯಂಡ್ ಸ್ಮಾಲ್ ಸೇವಿಂಗ್ಸ್'[7] ಅನ್ನುವ ಅಧ್ಯಯನದಲ್ಲಿ ವಿನಾಯಕ ಮೂರ್ತಿ ಮತ್ತು ಕೆ. ಸೆಂತಿಲ್ ಕುಮಾರ್ (2012) ಇವರು ಅಂಚೆ ಇಲಾಖೆಯ ಉಳಿತಾಯದ ಹಣವು ಹಲವಾರು ದೇಶಗಳ ಸಾರ್ವಜನಿಕ ಸಾಲಗಳಿಗೆ ಆರ್ಥಿಕ ನೆರವು ನೀಡುವುದರಲ್ಲಿ ಪ್ರಮುಖ ಪಾತ್ರವಹಿಸುತ್ತವೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

- ವಿ.ಕೆ. ಶೋಭನಾ ಮತ್ತು ಜಿ. ಜಯಲಕ್ಷ್ಮಿ (2006)[8] ತಮ್ಮ ಇನ್ವೆಸ್ಟರ್ ಅವೇರ್‌ನೆಸ್ ಆ್ಯಂಡ್ ಪ್ರಿಫರೆನ್ಸಸ್' – ಎ ಸ್ಟಡಿ' ಸಂಶೋಧನಾ ಅಧ್ಯಯನದಲ್ಲಿ ಹೂಡಿಕೆಯಲ್ಲಿನ ನಷ್ಟ ಭಯ ಮತ್ತು ಹೂಡಿಕಾ ಐಚ್ಛಿಕಗಳ ಕುರಿತು ಹುಡಿಕೆದಾರರಲ್ಲಿರುವ ತಿಳುವಳಿಕೆಯ ಮಟ್ಟ ಇವುಗಳ ಬಗ್ಗೆ ಪರೀಕ್ಷಿಸಿದ್ದಾರೆ. ಈ ಅಧ್ಯಯನದ ಪ್ರಕಾರ ಹೆಚ್ಚಿನ ಮಾಹಿತಿದಾರರು ಭೂ ಆಸ್ತಿಗಳ ಮೇಲೆ

---

6 ಗಣಪತಿ ಮತ್ತು ಮಲಾರ್ ಎಸ್. ಅನ್ಬು (2010), 'ಇನ್ವೆಸ್ಟರ್ಸ್ ಆಟಿಟ್ಯೂಡ್ ಟುವರ್ಡ್ಸ್ ಪೋಸ್ಟ್ ಆಫೀಸ್ ಡಿಪಾಸಿಟ್ ಸ್ಕೀಮ್', ಬಿ.ಸಿ.ಐ. ಎಂ. ಆರ್ ಮ್ಯಾನೇಜ್‌ಮೆಂಟ್ ಎಡ್ಜ್. ಸಿ. ವೋಲ್ಯೂಮ್ 3 ನಂ. 2, ಪಿಪಿ. 26–45

7 ಮೂರ್ತಿ ಎ. ವಿನಾಯಕ ಮತ್ತು ಕುಮಾರ್ ಕೆ. ಸೆಂತಿಲ್ (2012), 'ಆ್ಯನ್ ಅನಾಲಿಸಿಸ್ ಆಫ್ ಪೋಸ್ಟಲ್ ಇನ್ವೆಸ್ಟ್‌ಮೆಂಟ್ ಆ್ಯಂಡ್ ಸ್ಮಾಲ್ ಸೇವಿಂಗ್ಸ್', ಬ್ಯಾಂಕಿಂಗ್ ಫೈನಾನ್ಸ್ ಓಲ್ಯೂಮ್ ಫೆಬ್ರವರಿ, ಪಿಪಿ. 18–22

8 ಶೋಭನಾ ವಿ.ಕೆ. ಮತ್ತು ಜಯಲಕ್ಷ್ಮಿ ಜಿ. (2006), ಇನ್ವೆಸ್ಟರ್ಸ್ ಅವೇರ್‌ನೆಸ್ ಆ್ಯಂಡ್ ಪ್ರಿಫರೆನ್ಸಸ್‌ಎ ಸ್ಟಡಿ ಜರ್ನಲ್ ಆಫ್ ಆರ್ಗನೈಸೇಷನಲ್ ಮ್ಯಾನೇಜ್‌ಮೆಂಟ್, ವೋಲ್ಯೂಮ್ XXII, ನಂ. 3, ಪಿಪಿ. 16–18

ಹೂಡಿಕೆಗೆ ಆದ್ಯತೆ ನೀಡುತ್ತಾರೆ. ಎರಡನೇ ಆದ್ಯತೆಯನ್ನು ಬ್ಯಾಂಕ್ ಠೇವಣಿಗಳಿಗೆ ನೀಡುತ್ತಾರೆ. ಹೂಡಿಕಾ ಐಚ್ಛಿಕಗಳ ಹಾಗೂ ನಷ್ಟ ಭಯ ಇವುಗಳ ಕುರಿತು ಹೆಚ್ಚು ವಯಸ್ಸು ಆದವರಿಗೆ ಉತ್ತಮ ಶಿಕ್ಷಣ ಇದ್ದವರಿಗೆ ಮತ್ತು ಉದ್ಯೋಗದಾರರಿಗೆ ಹೆಚ್ಚಿನ ತಿಳುವಳಿಕೆ ಇದೆ ಎಂದು ಹೇಳಿದ್ದಾರೆ.

- ಮಿಶ್ರಾ ರಿಚಾ ಮತ್ತು ದಾಮೋದರನ್ ಹರೀಶ್ (2004)[9] ಇವರು ತಮ್ಮ ಅಧ್ಯಯನದಲ್ಲಿ ಅಂಚೆ ಕಛೇರಿಗಳು ಸಂಚಯಿಸಿದ ಜನರ ಉಳಿತಾಯದ ಅಂಕ ಸಂಖ್ಯೆಗಳ ಆಧಾರದಲ್ಲಿ ಹೇಳುವುದಾದರೆ ಅಂಚೆ ಕಛೇರಿಗಳು ಇನ್ನೂ ತಮ್ಮ ಆಕರ್ಷಣೆಯನ್ನು ಹಣಕಾಸು ಕೋಥೀಕರಣ ಕಾರ್ಯದಲ್ಲಿ ಉಳಿಸಿಕೊಂಡಿವೆ ಅನ್ನುತ್ತಾರೆ. ಬ್ಯಾಂಕುಗಳಿಗೆ ಹೋಲಿಸಿದರೆ ಠೇವಣಿ ಯೋಜನೆಗಳಿಗೆ ಅಂಚೆ ಕಛೇರಿಗಳು ನೀಡುವ ಅಧಿಕ ದರದಬಡ್ಡಿಯೇ ಇದಕ್ಕೆ ಕಾರಣ ಎಂದು ಅವರ ಅಧ್ಯಯನವು ತಿಳಿಯಪಡಿಸುತ್ತದೆ.

- ಗ್ನಾನ ದೇಸಿಗನ್ ಸಿ. (2006)[10] ಇವರು 'ಎನ್ವೆಸ್ಟರ್ಸ್ ಪರ್ಸೆಪ್ಷನ್ ಟುವರ್ಡ್ಸ್ ಇಕ್ವಿಟಿ ಶೇರ್ ಇನ್ವೆಸ್ಟ್‌ಮೆಂಟ್' ಅನ್ನುವ ಅಧ್ಯಯನದಲ್ಲಿ ಸಾಮಾನ್ಯ ಶೇರುಗಳಲ್ಲಿ ಹೂಡಿಕಾ ಕ್ರಮ ಹಾಗೂ ಸಾಮಾನ್ಯ ಪಾಲು ಬಂಡವಾಳ ಹೂಡಿಕೆದಾರರು ಎದುರಿಸುತ್ತಿರುವ ತೊಡಕು ತೊಂದರೆಗಳ ಬಗ್ಗೆ ವಿವರಿಸುತ್ತಾರೆ. ಈ ಅಧ್ಯಯನವು ಸಾಮಾನ್ಯ ಶೇರು ಹೂಡಿಕೆಗಳ ಕುರಿತು ಈ ಶೇರುದಾರರ ಮನೋಧರ್ಮ ಹಾಗೂ ಅನಿಸಿಕೆಗಳ ಬಗ್ಗೆ ಕೂಡಾ ವಿಮರ್ಶಿಸುತ್ತಾರೆ.

- 'ಇನ್ವೆಸ್ಟರ್ಸ್ ವಾಯ್ಸ್' ಅನ್ನುವ ಸಂಸ್ಥೆಯ ಅಧ್ಯಯನದ ಅಭಿಪ್ರಾಯದಂತೆ ಅಂಚೆ ಕಛೇರಿಯಲ್ಲಿ ಯೋಜನೆಗಳಲ್ಲಿ ಹಣ ಹೂಡುವ ಹೂಡಿಕೆದಾರರು ಬೇರೆಯೇ ಒಂದು ವರ್ಗಕ್ಕೆ ಸೇರಿದವರಾಗಿರುತ್ತಾರೆ. ಅಂಚೆ ಕಛೇರಿಯ ಉಳಿತಾಯ ಯೋಜನೆಗಳು ಎಲ್ಲರಿಗೂ ತಿಳಿದಂತೆ ಈ ದೇಶದ ಅತ್ಯಂತ ಹಳೆಯ ಒಂದು ಯೋಜನೆಯಾಗಿದೆ. ಇದು ಅತ್ಯಂತ ಸುರಕ್ಷಿತ ಹೂಡಿಕಾ ಯೋಜನೆ ಆಗಿರುವುದರಿಂದ ಹಿರಿಯ ನಾಗರಿಕರು, ಗೃಹಣಿಯರು, ಸಂಸ್ಥೆಗಳು ಇತ್ಯಾದಿ ಹೂಡಿಕೆದಾರರನ್ನು ಹೆಚ್ಚಾಗಿ ಆಕರ್ಷಿಸುತ್ತದೆ.

- ನ್ಯಾಷನಲ್ ಕೌನ್ಸಿಲ್ ಆಫ್ ಇಕನಾಮಿಕ್ ರೀಸರ್ಚ್ (1961)[11] ಸಂಸ್ಥೆಯು ನಡೆಸಿದ ನಗರ ಪ್ರದೇಶದ ಉಳಿತಾಯದ ಕುರಿತಾದ ಸಮೀಕ್ಷೆಯು ಜನರು ಉಳಿತಾಯ ಮಾಡುವ ಮುಖ್ಯ ಉದ್ದೇಶವು ಭವಿಷ್ಯದ ಆರ್ಥಿಕ ತುರ್ತು ಅಗತ್ಯಗಳ ನಿರ್ವಹಣೆಗಾಗಿ ಎಂದು ತಿಳಿಸುತ್ತದೆ.

---

9 ರಿಚಾ ಮಿಶ್ರ ಮತ್ತು ದಾಮೋದರನ್ (2004), ಪೋಸ್ಟ್ ಆಫೀಸ್ ಈಸ್ ಸೇವರ್ಸ್ ಬೆಸ್ಟ್ ಬೆಟ್, ಬಿಸಿನೆಸ್‌ಲೈನ್, ಆಗಸ್ಟ್ 25. 2004,

10 ದೇಸಿಗನ್ ಗ್ನಾನ (2006), 'ಇನ್ವೆಸ್ಟರ್ಸ್ ಟವರ್ಡ್ಸ್ ಇಕ್ವಿಟಿ ಶೇರ್ ಇನ್ವೆಸ್ಟ್‌ಮೆಂಟ್ – ಆ್ಯನ್ ಎಂಪಿರಿಕಲ್ ಸ್ಟಡಿ' ಜನರಲ್ ಅರ್ಗನೈಸೇಷನಲ್ ಮ್ಯಾನೇಜ್‌ಮೆಂಟ್, ವೋಲ್ಯೂಮ್ XXII ನಂ. 24–30

11 ಎನ್.ಸಿ.ಎ.ಇ.ಆರ್ (1961), ಸೇವಿಂಗ್ ಇನ್ ಇಂಡಿಯಾ, ನ್ಯೂಡೆಲ್ಲಿ

- ಇನ್ ತಮಿಳ್‌ನಾಡು ಸಬ್ ಸ್ಪೆಷಲ್ ರೆಫರೆನ್ಸ್ ಟು ಕೊಯಂಬತೂರ್ ಡಿಸ್ಟ್ರಿಕ್ಟ್ ಅಧ್ಯಯನದಲ್ಲಿ ಉತ್ತಮ ಆರ್ಥಿಕ ವ್ಯವಸ್ಥೆ ಉಳಿತಾಯಗಾರರು ಮತ್ತು ಹೂಡಿಕೆದಾರರ ಮಧ್ಯೆ ಮಧ್ಯವರ್ತಿಗಳಾಗಿ ಆರ್ಥಿಕ ಅಭಿವೃದ್ಧಿಯನ್ನು ತೀವ್ರಗೊಳಿಸುತ್ತದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ.

- ಡಾ. ಸೆಂತಿಲ್ ಕುಮಾರ್ ಮತ್ತು ಡಾ. ದೇಸ್ತಿ ಕನ್ನಯ್ಯ (2014)[12] ಇವರು ನಡೆಸಿದ ಅಧ್ಯಯನದಲ್ಲಿ ತಮಿಳ್ನಾಡಿನ ಧರ್ಮಪುರಿ ಜಿಲ್ಲೆಯ ಜನರಲ್ಲಿ ಅಂಚೆ ಕಛೇರಿಯ ಬಗ್ಗೆ ಅರಿವು ತಿಳುವಳಿಕೆಯ ಮಟ್ಟ ಮತ್ತು ಗ್ರಾಮೀಣ ಹೂಡಿಕೆದಾರರಿಗೆ ಹೂಡಿಕೆ ಮಾಡುವಾಗ ಯಾವ ಕಾರಣಗಳು ಪರಿಣಾಮ ಬೀರುತ್ತ್ತದೆ ಎನ್ನುವ ವಿಷಯವನ್ನು ವಿಮರ್ಶಿಸಿದ್ದಾರೆ.

- ಇನ್‌ವೆಸ್ಟ್‌ಮೆಂಟ್ ಬಿಹೇವಿಯರ್ ಆಫ್ ಪೋಸ್ಟಲ್ ಕಸ್ಟಮರ್ಸ್ ಟವರ್ಡ್ಸ್ ಮಾಸ್ ಆಫೀಸ್ ಸೇವಿಂಗ್ಸ್, ಬ್ಯಾಂಕ್ ಸ್ಕೀಮ್ಸ್ – ಎ ಕೇಸ್ ಸ್ಟಡಿ ಆಫ್ ಕೊಲ್ಲಾಪುರ ಡಿಸ್ಟ್ರೀಕ್ಟ್' ಎಂಬ ಸಂಶೋಧನಾ ಲೇಖನದಲ್ಲಿ ಕೋರೆ ಶಶಿಕಾಂತ ಮತ್ತು ಡಾ. ಆರ್.ಟಿ. ತೆಲಿ[13] ಇವರು ಮಾಹಾರಾಷ್ಟ್ರ ರಾಜ್ಯದ ಕೊಲ್ಲಾಪುರ ಜಿಲ್ಲೆಯ ಅಂಚೆ ಗ್ರಾಹಕರ ಅಧ್ಯಯನ ಮಾಡಿ ಅಂಚೆ ಕಛೇರಿಯ ಉಳಿತಾಯ ಬ್ಯಾಂಕ್‌ಗಳ ಕುರಿತು ಈ ಗ್ರಾಹಕರ ಅಭಿಪ್ರಾಯವನ್ನು ತಿಳಿದರು. ಸಣ್ಣ ಹಾಗೂ ಮಧ್ಯಮ ವರ್ಗದ ಹೂಡಿಕೆದಾರರಿಗೆ ಅಂಚೆ ಕಛೇರಿಯ ಉಳಿತಾಯ ಯೋಜನೆ ಬಗ್ಗೆ ಹೆಚ್ಚಿನ ನಂಬುಗೆ, ಹಾಗೂ ಸ್ಪಷ್ಟ ಅರಿವು ಇದೆ ಎಂದು ಕಂಡುಹಿಡಿದಿದ್ದಾರೆ. ಆದರೂ ಅಂಚೆ ಕಛೇರಿಗಳ ಯೋಜನೆಗಳ ಬಗ್ಗೆ ಇನ್ನೂ ಹೆಚ್ಚಿನ ಅರಿವು ಮೂಡಿಸುವ ಅಗತ್ಯ ಇದೆ ಎಂದು ಅಭಿಪ್ರಾಯಪಡುತ್ತಾರೆ.

- ಎಸ್ ಮಧುಮಿತಾ (2015)[14] ಇವರು ತಮ್ಮ ಸಂಶೋಧನಾ ಲೇಖನ 'ಇನ್ವೆಸ್ಟರ್ಸ್ ಆ್ಯಟಿಟ್ಯೂಡ್‌ಟವರ್ಡ್ಸ್ ಪೋಸ್ಟ್ ಆಫೀಸ್ ಸೇವಿಂಗ್ಸ್ ಸ್ಕೀಮ್ ಇನ್ ಕಂಬನ್ ಟೌನ್' ನಲ್ಲಿ ಕೂಡಾ ಅಂಚೆ ಕಛೇರಿಯ ಉಳಿತಾಯ ಯೋಜನೆಗಳ ಕುರಿತು ಇನ್ನು ಹೆಚ್ಚಿನ ಅರಿವು ಮಾಡಿಸಬೇಕಾಗಿದೆ ಎಂದು ಅಭಿಪ್ರಾಯ ಪಡುತ್ತಾರೆ.

---

12 ಸೆಂತಿಲ್ ಕುಮಾರ್ ಡಾ. ಕೆ. ಮತ್ತು ಕನ್ನಯ್ಯ ಡಾ. ದೇಸ್ತಿ, 'ಇನ್ವೆಸ್ಟರ್ಸ್ ಆ್ಯಟಿಟ್ಯೂಡ್ ಟವರ್ಡ್ಸ್ ಸೇವಿಂಗ್ಸ್ ಇನ್ ಪೋಸ್ಟ್ ಆಫೀಸ್', ರೀಸರ್ಚ್ ಜರ್ನಲ್ ಆಫ್ ಫೈನಾನ್ಸ್ ಆ್ಯಂಡ್ ಅಕೌಂಟಿಂಗ್, ವೋಲ್ಯೂಮ್ 5, ನಂ. 15, 2014, ಪಿಪಿ. 158–175.

13 ಶಶಿಕಾಂತ್ ಡಿ. ಕೋರೆ ಮತ್ತು ತೆಲಿ ಡಾ. ಆರ್.ಟಿ. (2015), ಬಿ.ಐ.ಟಿ.ಎಂ. – ಡಿ.ಎಂ.ಎನ್. ಕಾನ್ಫರೆನ್ಸ್ ಪೇಪರ್ 'ದ ಫ್ಯೂಚರ್ ಮ್ಯಾನೇಜ್‌ಮೆಂಟ್', 29 ಏಪ್ರಿಲ್ 2015.

14 ಮಧುಮಿತ ಎಸ್. 'ಇನ್ವೆಸ್ಟರ್ಸ್ ಆ್ಯಟಿಟ್ಯೂಡ್ ಟವರ್ಡ್ಸ್ ಪೋಸ್ಟ್ ಆಫೀಸ್ ಸೇವಿಂಗ್ಸ್ ಸ್ಕೀಮ್ಸ್ ಇನ್ ಕಂಬಂ ಟೌನ್' – ಐಆರ್‌ಎಸಿಯಸ್‌ಟಿ ಇಂಟರ್ ನ್ಯಾಷನಲ್ ಜರ್ನಲ್ ಆಫ್ ಕಾಮರ್ಸ್ ಆ್ಯಂಡ್ ಮ್ಯಾನೇಜ್‌ಮೆಂಟ್', ವೋಲ್ಯೂಮ್ 1, ನಂ. 6, ಡಿಸೆಂಬರ್ 2015.

ಈ ಮೇಲಿನ ಸಾಹಿತ್ಯ ಮತ್ತು ಗ್ರಂಥಗಳ ಪರಾಮರ್ಶೆ ಪ್ರಸಕ್ತ ಅಧ್ಯಯನಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಅಭಿಪ್ರಾಯ ನೀಡುತ್ತದೆ.[15]

1. ಕೆಲವು ಅಧ್ಯಯನಗಳು ಅಂಚೆ ಕಛೇರಿ ಉಳಿತಾಯ ಯೋಜನೆಗಳಿಗೆ ಸಂಬಂಧಪಟ್ಟಿವೆ ಆದರೆ ಅವು ಯಾವುದೂ ಮಹಿಳಾ ಹೂಡಿಕೆದಾರರ ಅನಿಸಿಕೆಗಳ ಬಗ್ಗೆ ಆಗಿಲ್ಲ.
2. ಕೆಲವು ಅಧ್ಯಯನಗಳು ಹೂಡಿಕೆಗಳ ಬಗ್ಗೆ ಮಾಡಲಾಗಿದೆ. ಆದರೆ ಅವು ಅಂಚೆ ಕಛೇರಿ ಉಳಿತಾಯ ಯೋಜನೆಗಳ ಕುರಿತು ಅಲ್ಲ.
3. ಅಂಚೆ ಕಛೇರಿಯ ಉಳಿತಾಯ ಯೋಜನೆಗಳ ಕುರಿತು ಮಹಿಳಾ ಹೂಡಿಕೆದಾರರ ಅನಿಸಿಕೆಗಳ ಬಗ್ಗೆ ಸಮಗ್ರ ಅಧ್ಯಯನ ನಡೆದಿಲ್ಲ.

ಆದುದರಿಂದ ಅಂಚೆ ಕಛೇರಿಯ ಉಳಿತಾಯ ಯೋಜನೆಗಳ ಕುರಿತು ಪುತ್ತೂರು ಪಟ್ಟಣದ ಮಹಿಳಾ ಹೂಡಿಕೆದಾರರ ಅನಿಸಿಕೆಗಳು ಎಂಬ ವಿಷಯದ ಬಗ್ಗೆ ಸಂಶೋಧನಾ ಅಧ್ಯಯನವನ್ನು ಆಯ್ಕೆ ಮಾಡಲಾಗಿದೆ.

ವಿಭಾಗ ಬ

ಅಧ್ಯಯನ ಕ್ಷೇತ್ರದ ಒಂದು ಪರಿಚಯ

ಪೀಠಿಕೆ

ಪುತ್ತುರು ಪಟ್ಟಣವು ದಕ್ಷಿಣ ಕನ್ನಡ ಜಿಲ್ಲೆಯ ಒಂದು ಪ್ರಾಮುಖ ನಗರವಾಗಿದೆ. ತಾಲೂಕು ಕೇಂದ್ರವಾಗಿರುವ ಮತ್ತೊಂದು ಜಿಲ್ಲೆಯ ಎರಡನೇ ಅತೀ ದೊಡ್ಡ ಪಟ್ಟಣವಾಗಿದೆ. ಮೂಲತಃ ಇದು ಒಂದು ಗ್ರಾಮೀಣ ಮಲೆನಾಡು ಪ್ರದೇಶವಾಗಿದೆ. ಇಲಿ ಹಚ್ಚ ಹಸಿರಾದ ಅರಣ್ಯ ಸಂಪತ್ತು, ಭತ್ತದ ಗದ್ದೆಗಳು, ಅಡಿಕೆ ತೋಟಗಳು, ಗಿಡ ಮರಗಳು, ನೇತ್ರಾವತಿ, ಕುಮಾರಧಾರ ಇತ್ಯಾದಿ ನದಿ ತೊರೆಗಳು, ಎಲ್ಲ ಪುತ್ತೂರನ್ನು ಇನ್ನಿಲ್ಲದಷ್ಟು ಸುಂದರವಾಗಿಸಿವೆ. ಜ್ಞಾನವೃದ್ಧ, ಕಡಲತೀರದ ಭಾರ್ಗವ, ನಡೆದಾಡುವ ವಿಶ್ವಕೋಶ ಎಂದು ಪ್ರಸಿದ್ಧವಾಗಿರುವ ಜ್ಞಾನಪೀಠ ಪ್ರಶಸ್ತಿ ವಿಜೇತ ಡಾ! ಕೋಟ ಶಿವರಾಮ ಕಾರಂತ ಹಾಗೂ ಸರಕಾರೀ ಕ್ಷೇತ್ರದ ಧುರೀಣ ಬಡವರ ಬಂಧು, ಮಳಹಳ್ಳಿ ಶಿವರಾವ್ ಇವರ ಕಾರ್ಯಕ್ಷೇತ್ರ ಎನ್ನುವುದು ಪುತ್ತೂರಿನ ಹೆಮ್ಮೆ. 'ಹತ್ತೂರು ಕೊಟ್ಟರೂ ಪುತ್ತೂರು ಬಿಡೆ' ಎನ್ನುವ ಹಿಂದಿನ ಇಲ್ಲಿನ ಆಳರಸರ ನುಡಿ ಪುತ್ತೂರನ್ನು ಅನನ್ಯವಾಗಿಸಿದೆ.

[15] ಎನ್. ಕಾರ್ತಿವೇಲ್, ಎ. ಮೇಕಲಾ (2011), 'ವುಮನ್ ಇನ್ವೆಸ್ಟರ್ಸ್ ಪರ್‌ಸೆಪ್ಷನ್ ಟುವರ್ಡ್ಸ್ ಆನ್‌ಲೈನ್ ಟ್ರೇಡಿಂಗ್ ಇನ್ ತಮಿಳ್‌ನಾಡು ವಿದ್ ಸ್ಪೆಶಲ್ ರೆಫರೆನ್ಸ್ ಟು ಕೊಯಂಬತ್ತೂರ್ ಡಿಸ್ಟ್ರಿಕ್ಟ್., ವೋಲ್ಯೂಮ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್, ವೋಲ್ಯೂಮ್ 5, ಪಿಪಿ 1

ಭೌಗೋಳಿಕ ಲಕ್ಷಣಗಳು

ದಕ್ಷಿಣ ಕನ್ನಡ ಜಿಲ್ಲೆಯನ್ನು ಪ್ರಾಕೃತಿಕವಾಗಿ, ಕರಾವಳಿ ಪ್ರದೇಶ, ಒಳನಾಡು ಪ್ರದೇಶ ಹಾಗೂ ಪಶ್ಚಿಮ ಘಟ್ಟಗಳ ಪ್ರದೇಶ ಎಂದು ಮೂರು ವಿಭಾಗಗಳಾಗಿ ವಿಂಗಡಿಸಲಾಗಿದ್ದು ಪುತ್ತೂರು ಒಳನಾಡು ಪ್ರದೇಶವೆಂದು ಗುರುತಿಸಿಕೊಂಡಿವೆ. ಇದು ಮಂಗಳೂರು – ಮೈಸೂರು ರಸ್ತೆಯಲ್ಲಿ ಮಂಗಳೂರಿನಿಂದ ಪೂರ್ವಕ್ಕೆ 57 ಕಿ.ಮೀ ದೂರದಲ್ಲಿದೆ. ಪುತ್ತೂರು ತಾಲೂಕು ಒಟ್ಟು ಸುಮಾರು 99,697 ಹೆಕ್ಟೇರ್ ವಿಸ್ತೀರ್ಣವಿದೆ. ಇದು ಸಮುದ್ರ ಮಟ್ಟದಿಂದ 87 ಮೀಟರ್ ಅಥವಾ 285 ಅಡಿ ಎತ್ತರದಲ್ಲಿದೆ. ಪುತ್ತೂರು ಪಟ್ಟಣವು ಸುತ್ತಲಿನ ಹಳ್ಳಿಗಳಾದ ಬಲ್ನಾಡು, ಕುಡಿಪಾಡಿ, ಕಬಕ, ಬನ್ನೂರು, ಪಡ್ನೂರು, ಕೆಮ್ಮಿಂಜೆ, ಅರ್ಯಾಪು ಹಳ್ಳಿಗಳಿಂದ ಆವೃತ್ತವಾಗಿದೆ. ಇದು ಜಿಲ್ಲೆಯ ಒಂದು ಪ್ರಮುಖ ವಾಣಿಜ್ಯ ಬೆಳೆಗಳಾದ ಅಡಿಕೆ, ತೆಂಗು, ಕೊಕೋ ಇತ್ಯಾದಿ ಉತ್ಪಾದನಾ ಹಾಗೂ ವ್ಯಾಪಾರ ಕೇಂದ್ರವಾಗಿದೆ.

ಬೆಳೆಗಳು, ಭೂಹಿಡುವಳಿ ನೀರಾವರಿ

ಪುತ್ತೂರಿನ ಪ್ರಮುಖ ವಾಣಿಜ್ಯ ಬೆಳೆ ಅಡಿಕೆ ಇದನ್ನು ತಾಲೂಕಿನ 8928 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗುತ್ತದೆ. ಭತ್ತವು ಇನ್ನೊಂದು ಪ್ರಮುಖ ಬೆಳೆಯಾಗಿದ್ದು ಸುಮಾರು 4946 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗುತ್ತದೆ. ಒಂದು ಬಿತ್ತಲಾಗುವ ಪ್ರದೇಶ 31945 ಹೆಕ್ಟೇರ್ ಆಗಿದ್ದು ಇದರಲ್ಲಿ ಕರಿಮೆಣಸು (406 ಹೆ.), ಗೋಡಂಬಿ (8247 ಹೆ.), ತೆಂಗು (3397 ಹೆ.), ರಬ್ಬರ್ (2210 ಹೆ), ಕೊಕ್ಕೋ (1424 ಹೆ.), ಮಾವು (440 ಹೆ.), ಬಾಳೆ (945 ಹೆ.) ಪ್ರದೇಶದಲ್ಲಿ ಬೆಳೆಯಲಾಗುತ್ತಿದೆ. ಆಹಾರ ಧಾನ್ಯಗಳನ್ನು 5202 ಹೆಕ್ಟೇರ್. ಹಣ್ಣುಗಳನ್ನು 9828 ಹೆಕ್ಟೇರ್ ಹಾಗೂ ತರಕಾರಿ ಬೆಳೆ 857 ಹೆಕ್ಟೇರ್ ಉಳಿದ ಬೆಳೆಗಳನ್ನು ಬೆಳೆಯುವ ಪ್ರದೇಶಗಳಾಗಿವೆ. ತಾಲೂಕಿನಲ್ಲಿ ಒಟ್ಟು 16337 ವಿಸ್ತೀರ್ಣ ನೀರಾವರಿಯಾದ ಪ್ರದೇಶವಾಗಿದೆ.

ನಗರ ಆಡಳಿತ

ಹಿಂದೆ ನಗರ ಪಂಚಾಯತ್ ಆಗಿದ್ದ ಪುತ್ತೂರು 1993ರಲ್ಲಿ ಪಟ್ಟಣ ಮುನ್ಸಿಪಲ್ ಕೌನ್ಸಿಲ್ ಆಗಿ ಬಡತಿ ಪಡೆಯಿತು. ಆಗ ಪಟ್ಟಣದ ವಿಸ್ತೀರ್ಣ 11 ಚದರ ಕಿ.ಮೀ. ರಷ್ಟಿತ್ತು. ತದನಂತರ 1996ರಲ್ಲಿ ಸುತ್ತಲಿನ ಹಳ್ಳಿಗಳ ಸ್ವಲ್ಪ ಭಾಗಗಳನ್ನು ಸುತ್ತಲೂ ಸೇರಿಸಿಕೊಂಡು 34.25 ಚ.ಕಿ.ಮೀ. ವಿಸ್ತೀರ್ಣ ಹೊಂದಿ ನಗರ ಮುನ್ಸಿಪಲ್ ಕೌನ್ಸಿಲ್ ಆಗಿ ಪರಿವರ್ತನೆ ಹೊಂದಿದೆ.

ಈ ತಾಲೂಕಿನಲ್ಲಿ ಒಂದು ನಾಡ ಕಛೇರಿ, 59 ಗ್ರಾಮ ಲೆಕ್ಕಿಗರ ಪತ್ರಗಳು, 3 ಹೋಬಳಿಗಳು ಹಾಗೂ 41 ಗ್ರಾಮ ಪಂಚಾಯತ್‌ಗಳಿವೆ. ತಾಲೂಕಿನಲ್ಲಿ ಒಟ್ಟು 66 ಗ್ರಾಮಗಳಿದ್ದು ಎರಡು ಪ್ರಮುಖ ಪಟ್ಟಣಗಳಿವೆ. ನಿರ್ಜನಿತ ಪ್ರದೇಶವು ಇಡೀ ತಾಲೂಕಿನಲ್ಲೇ ಇಲ್ಲ ಒಂದು ಚಿತ್ರ ಮಂದಿರ, 5 ಪೋಲೀಸ್ ಠಾಣೆಗಳು, ಒಂದು ಅಗ್ನಿ ಶಾಮಕ ದಳಗಳಿವೆ.

ಹವಾಗುಣ

ಪುತ್ತೂರಿನಲ್ಲಿ ಅತಿ ಉಷ್ಣವೂ, ಅತಿ ಶೀತವೂ ಅಲ್ಲದ ಅನುಕೂಲಕರ ಹವೆಯ ವಾತಾವರಣವಿದೆ. ಪಶ್ಚಿಮ ಘಟ್ಟಕ್ಕೆ ಸಮೀಪವಿರುವುದರಿಂದ ಮಂಗಳೂರಿಗಿಂತ ಹೆಚ್ಚು ತಂಪು ಹವಾಗುಣ ಹೊಂದಿದೆ.

ಪ್ರಾಕೃತಿಕ ಲಕ್ಷಣ

ಜನ ಸಂಖ್ಯೆ

ಪುತ್ತೂರು ತಾಲೂಕಿನ ಒಟ್ಟು ಜನ ಸಂಖ್ಯೆ 2014–15 ರಲ್ಲಿ 2,87,851 ಆಗಿದ್ದು ಇದರಲ್ಲಿ ಗ್ರಾಮೀಣ ಜನ ಸಂಖ್ಯೆಯು 60,874 ಆಗಿಡೆ. ಇದರಲ್ಲಿ 1,44,735 ಸ್ತ್ರೀಯರ ಹಾಗೂ 143116 ಪುರುಷರ ಸಂಖ್ಯೆ ಆಗಿದೆ. ಒಟ್ಟು ಜನ ಸಂಖ್ಯೆಯಲ್ಲಿ 2001–11 ರ ಅವಧಿಯಲ್ಲಿ 26.54 ಪ್ರತಿಶತ ಹಾಗೂ 4.12 ಪ್ರತಿಶತ ಗ್ರಾಮೀಣ ಪ್ರದೇಶದಲ್ಲಿಯೂ ಏರಿಕೆ ಆಗಿರುತ್ತದೆ. ಜನಸಂಖ್ಯಾವಾರು ಪುತ್ತೂರು ತೃತೀಯ ಸ್ಥಾನದಲ್ಲಿ ಇದೆ. ಪ್ರಥಮ ಹಾಗೂ ದ್ವಿತೀಯ ಸ್ಥಾನಗಳನ್ನು ಅನುಕ್ರಮವಾಗಿ ಮಂಗಳೂರು (994602) ಮತ್ತು ಬಂಟ್ವಾಳ (395380) ಪಡೆದಿದೆ.

ಪುತ್ತೂರು ತಾಲೂಕಿನಲ್ಲಿ 34040 ರಷ್ಟು ಪರಿಶಿಷ್ಟ ಜಾತಿಯವರಿದ್ದಾರೆ. ಮಂಗಳೂರು ತಾಲೂಕಿನಲ್ಲಿ ಅತೀ ಹೆಚ್ಚು (40275) ಹಾಗೂ ಬಂಟ್ವಾಳ ತಾಲೂಕಿನಲ್ಲಿ ಅತೀ ಕಡಿಮೆ (19260) ಸಂಖ್ಯೆಯಲ್ಲಿ ಇದ್ದಾರೆ.

ಲಿಂಗಾನುಪಾತ

ದಕ್ಷಿಣ ಕನ್ನಡ ಜಿಲ್ಲೆಯ ಸ್ತ್ರೀಯರು ಅನುಪಾತವು 1022:1000 ಆಗಿದ್ದು ಪುತ್ತೂರಿನಲ್ಲಿ 1011:1000 ಇದೆ. ಇದು ರಾಜ್ಯ ಪ್ರಮಾಣಕ್ಕಿಂತಲೂ (965) ಅಧಿಕವಿರುವುದು ಉಲ್ಲೇಖನೀಯವಾಗಿದೆ. ಮೊದಲ ಸ್ಥಾನವನ್ನು ಬೆಳ್ತಂಗಡಿ (1032) ಮಂಗಳೂರು (1031), ಎರಡನೇ ಸ್ಥಾನವನ್ನು ಹಾಗೂ ಬಂಟ್ವಾಳ (1024) ಪಡೆದಿದೆ.

ಸಾಕ್ಷರತೆ

ಪುತ್ತೂರು ತಾಲೂಕಿನಲ್ಲಿ ಒಟ್ಟು 221949 ಅಕ್ಷರಸ್ಥರಿದ್ದಾರೆ. ಇದರಲ್ಲಿ 1,16,726 ಗಂಡಸರೂ, 1,05,223 ಹೆಂಗಸರೂ ಇದ್ದಾರೆ. ಪುತ್ತೂರಿನ ಗ್ರಾಮೀಣ ಪ್ರದೇಶದಲ್ಲಿ 90749 ಗಂಡಸರು, 80826 ಹೆಂಗಸರೂ (ಒಟ್ಟು ಗ್ರಾಮೀಣ ಪ್ರದೇಶದಲ್ಲಿ 1,71,575) ನಗರ ಪ್ರದೇಶದಲ್ಲಿ 25977 ಗಂಡಸರೂ, 24397 ಹೆಂಗಸರೂ (ಒಟ್ಟು ನಗರ ಪ್ರದೇಶದಲ್ಲಿ 50374) ಕಂಡು ಬಂದಿದೆ.

ಪುತ್ತೂರಿನ ಸಾಕ್ಷರತಾ ಪ್ರಮಾಣ 85.92 ಶೇ. ಇದ್ದು ಅದರಲ್ಲಿ ಪುರುಷರ ಮತ್ತು ಸ್ತ್ರೀಯರ ಸಾಕ್ಷರತಾ ಪ್ರಮಾಣವನ್ನು ಕ್ರಮವಾಗಿ 90.71 ಶೇ. ಮತ್ತು 80.51 ಶೇ. ಆಗಿರುತ್ತದೆ. ಇದು ರಾಜ್ಯದ ಸಾಕ್ಷರತಾ

ಪ್ರಮಾಣಕ್ಕಿಂತ (ಶೇ. 76.29 ಮತ್ತು ಶೇ. 57.45) ಹೆಚ್ಚಾಗಿದೆ. ಸಾಕ್ಷರತಾ ಪ್ರಮಾಣ 84.41 ಶೇ. ಗ್ರಾಮೀಣ ಪ್ರದೇಶದಲ್ಲಿ 92.24 ಶೇ., ನಗರ ಪ್ರದೇಶದಲ್ಲಿಯೂ ಕಾಣುತ್ತದೆ. ಗ್ರಾಮೀಣ ಪ್ರದೇಶದಲ್ಲಿ ಗಂಡಸರ ಸಾಕ್ಷರತಾ ಪ್ರಮಾಣ 90.31 ಶೇ. ಮತ್ತು ಸ್ತ್ರೀಯರ ಸಾಕ್ಷರತಾ ಪ್ರಮಾಣ 78.62 ಶೇ. ಇದೆ. ನಗರ ಪ್ರದೇಶದಲ್ಲಿ ಇವರ ಪ್ರಮಾಣ 96.23 ಶೇ. ಮತ್ತು 88.76 ಶೇ. ಇರುವುದನ್ನು ದಾಖಲಿಸ ಲಾಗಿದೆ.

ಪ್ರಾಕೃತಿಕ ಲಕ್ಷಣ

ಪುತ್ತೂರು ಪ್ರದೇಶವು ಮಲೆನಾಡಿನ ಹೆಚ್ಚಿನ ಪ್ರಾಕೃತಿಕ ಲಕ್ಷಣವನ್ನು ಪಡೆದಿದೆ. ಈ ಪ್ರದೇಶದಲ್ಲಿ ತೇವಾಂಶವು ಜಾಸ್ತಿಯಾಗಿದ್ದು ಮಳೆಗಾಲ, ಚಳಿಗಾಲ ಮತ್ತು ಬೇಸಿಗೆ ಕಾಲಗಳನ್ನು ಸ್ಪಷ್ಟವಾಗಿ ಗುರುತಿಸಬಹುದಾಗಿದೆ. ಜೂನ್–ಅಕ್ಟೋಬರ್ ಅವಧಿಯು ಮಳೆಗಾಲ, ನವಂಬರ್–ಫೆಬ್ರವರಿ ಚಳಿಗಾಲವಾಗಿದ್ದು ಮಾರ್ಚ್–ಮೇ ಬೇಸಿಗೆಕಾಲವೆಂದು ಗುರುತಿಸಲಾಗಿದೆ. ನವೆಂಬರ್ ಫೆಬ್ರವರಿ ಅವಧಿಯಲ್ಲಿ ಚಳಿಯಿದ್ದು ತಂಪಾದ, ಹಿತವಾದ ವಾತಾವರಣವಿರುತ್ತದೆ.

ಪುತ್ತೂರು ಪ್ರದೇಶದಲ್ಲಿ ವಾರ್ಷಿಕ ವಾಡಿಕೆ ಮಳೆ ಪ್ರಮಾಣ 4039 ಮಿ.ಮಿ. ರಷ್ಟಿದ್ದು ಸುಮಾರು 124 ಮಳೆದಿನಗಳಲ್ಲಿ ಸುರಿಯುತ್ತದೆ. 2014 ರ ಜನವರಿ–ಡಿಸೆಂಬರ್ ಅವಧಿಯಲ್ಲಿ ಇಲ್ಲಿ ಸುಮಾರು 3554.3 ಮಿ.ಮಿ. ಮಳೆಯಾಗಿತ್ತು.

ಜನ ಸಾಂದ್ರತೆ

ಪುತ್ತೂರು ತಾಲೂಕಿನ ಜನಸಾಂದ್ರತೆ 267 ಆಗಿದೆ. ತಾಲೂಕ್‌ಗಳಲ್ಲಿ ಮಂಗಳೂರು ತಾಲೂಕು ಅತೀ ಹೆಚ್ಚಿನ ಸಾಂದ್ರತೆಯನ್ನು (1048), ಸುಳ್ಯ ತಾಲೂಕು ಅತೀ ಕಡಿಮೆ (170) ಜನ ಸಾಂದ್ರತೆಯನ್ನೂ ಹೊಂದಿದೆ.

ಜನ, ಭಾಷೆ, ಸಮಾಜ, ಜನಾಂಗ

ಪುತ್ತೂರಿನಲ್ಲಿ ಹೆಚ್ಚಿನ ಜನರು ದ್ರಾವಿಡ ಜನಾಂಗಕ್ಕೆ ಸೇರಿದವರಾಗಿದ್ದಾರೆ. ಇಲ್ಲಿ ಹಿಂದೂ, ಮುಸ್ಲಿಮ್, ಕ್ರೈಸ್ತ ಹಾಗೂ ಜೈನ ಮತದ ಜನರಿದ್ದಾರೆ. 2010 ಜನಗಣತಿ ಪ್ರಕಾರ ಇಲ್ಲಿನ ಅಧಿಕೃತ ಭಾಷೆ ಕನ್ನಡ. ಆದರೆ ದ್ರಾವಿಡ ಭಾಷೆಗಳಲ್ಲಿ ಒಂದಾದ ತುಳುವನ್ನು ಹೆಚ್ಚಿನ ಜನರು ಮಾತನಾಡುತ್ತಾರೆ. ಇದಲ್ಲದೆ ಜನರು ಹವ್ಯಕ ಕನ್ನಡ ಕೋಟ ಕನ್ನಡ, ಶಿವಳ್ಳಿ ತುಳು, ಕೊಂಕಣಿ, ಬ್ಯಾರಿ ಭಾಷೆ ಹಾಗೂ ಸ್ಥಳೀಯ ಮಲೆಯಾಳ ಭಾಷೆಗಳನ್ನು ಆಡುವ ಜನರಿದ್ದಾರೆ. ಇತ್ತೀಚಿಗೆ ತುಳು ಲಿಪಿಯನ್ನೂ ಗುರುತಿಸಲಾಗಿದ್ದು ಪದವಿ ಮಟ್ಟದಲ್ಲಿ ಐಚ್ಛಿಕ ಕಲಿಕಾ ವಿಷಯಗಾಗಿ ಸೇರಿಸಲಾಗಿದೆ.

ಉದ್ಯೋಗ

ಪುತ್ತೂರು ತಾಲೂಕಿನಲ್ಲಿ ವ್ಯವಸಾಯ ಪ್ರಧಾನ ಉದ್ಯೋಗವಾಗಿದೆ. ಸುಮಾರು 705 ಶೇ. ರಷ್ಟು ಜನರು ಕೃಷಿ ಹಾಗೂ ಕೃಷಿ ಸಂಬಂಧೀ ಉದ್ಯೋಗಗಳಲ್ಲಿ ತೊಡಗಿಸಿಕೊಂಡಿದ್ದಾರೆ. ತಾಲೂಕಿನಲ್ಲಿ ಒಟ್ಟು ಕೃಷಿ ಕಾರ್ಮಿಕ ಸಂಖ್ಯೆ ಸುಮಾರು 1029 ರಷ್ಟಿದೆ. ಹಲವಾರು ಜನರು ರೇಷ್ಮೆ ಮತ್ತು ಹೈನುಗಾರಿಕೆಗಳನ್ನು ಕೂಡಾ ಉದ್ಯೋಗವನ್ನಾಗಿ ಕೈಗೊಂಡಿದ್ದಾರೆ.

ತಾಲೂಕಿನಲ್ಲಿ ಹಿಂದು, ಮುಸ್ಲಿಮ್ ಮತ್ತು ಕ್ರೈಸ್ತ ಮತಕ್ಕೆ ಸೇರಿದ ಕ್ರಮವಾಗಿ 203201, 65357, 103387 ಸ್ತ್ರೀಯರೂ ಮುಸ್ಲಿಮ್‌ರಲ್ಲಿ 32177 ಪುರುಷರು 33180 ಸ್ತ್ರೀಯರು ಹಾಗೂ ಕ್ರೈಸ್ತರಲ್ಲಿ 75956 ಪುರುಷರು ಮತ್ತು 7686 ಸ್ತ್ರೀಯರೂ ಇದ್ದಾರೆ. ಇವರಲ್ಲದೆ 22 ಸಿಖ್ (17 ಗಂಡಸರು, 5 ಸ್ತ್ರೀಯರು), 28 ಬುದ್ಧರು, 112 ಪುರುಷರು, 16 ಸ್ತ್ರೀಯರು ಇದ್ದಾರೆ. ಪುತ್ತೂರು ತಾಲೂಕಿನ ಒಟ್ಟು ಜೈನರ ಸಂಖ್ಯೆ 909, ಇದರಲ್ಲಿ 437 ಸ್ತ್ರೀಯರು ಮತ್ತು 472 ಪುರುಷರು.

ಸಾಂಸ್ಕೃತಿಕ ಚಟುವಟಿಕೆಗಳು, ಜಾನಪದ ಕ್ರೀಡೆಗಳು

ಪುತ್ತೂರು ಸಾಂಸ್ಕೃತಿಕ ಚಟುವಟಿಕೆಗಳಲ್ಲಿಹಾಗೂ ಜಾನಪದ ಕ್ರೀಡೆಗಳಲ್ಲಿ ಹೆಸರು ಪಡೆದಿದೆ. ಮಾರ್ಚ್ ತಿಂಗಳ ಪ್ರಥಮ ಭಾಗದಲ್ಲಿ ನಡೆಯುವ ಪುತ್ತೂರಿನ ಕಂಬಳಕ್ಕೆ ಜಿಲ್ಲೆಯಲ್ಲಿ ಪ್ರಮುಖ ಸ್ಥಾನ ಇದೆ. ಇದಲ್ಲದೆ ಡಾ. ಶಿವರಾಮ ಕಾರಂತರಿಂದ ಪ್ರಾರಂಭವಾದ ದಸರಾ ಸಾಹಿತ್ಯ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳು ಉತ್ಸಾಹದಿಂದ ನಡೆಯುತ್ತಿವೆ. ವಿಶಿಷ್ಟ ಕಲೆಯಾದ ಯಕ್ಷಗಾನದಲ್ಲಿ ಪುತ್ತೂರಿಗೆ ಗಣ್ಯ ಹೆಸರಿದೆ. ಇತ್ತೀಚಿಗೆ ಇಲ್ಲಿನ ಉತ್ಸಾಹೀ ಜನರು, ಕನ್ನಡ, ತುಳು ಸಿನಿಮಾ ನಿರ್ಮಾಪಕ ನಿರ್ದೇಶಕ ಹಾಗೂ ನಟ ನಟಿಯರಾಗಿ ಹೆಸರು ಮಾಡುತ್ತಿದ್ದಾರೆ.

ಶಿಕ್ಷಣ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ಪುತ್ತೂರು, ಶಿಕ್ಷಣ ಕ್ಷೇತ್ರದಲ್ಲಿ ತುಂಬಾ ಹೆಸರು ಪಡೆದಿದೆ. ತಾಲೂಕಿನಲ್ಲಿ 2014–15 ರಲ್ಲಿ 44 ಕಿರಿಯ ಪ್ರಾಥಮಿಕ ಶಾಲೆಗಳು, 192 ಹಿರಿಯ ಪ್ರಾಥಮಿಕ ಶಾಲೆಗಳು, 78 ಪ್ರೌಢ ಶಾಲೆಗಳು, 29 ಪದವಿ ಪೂರ್ವ ಕಾಲೇಜುಗಳು, 5 ಸರಕಾರೀ ಹಾಗೂ 3 ಖಾಸಗಿ ಪದವಿ ಕಾಲೇಜುಗಳಿವೆ. ಇದರಲ್ಲದೆ ಒಂದು ಖಾಸಗಿ (ತಾಂತ್ರಿಕ ಕಾಲೇಜು) ಒಂದು ಖಾಸಗಿ ಪಾಲಿಟೆಕ್ನಿಕ್ ಕಾಲೇಜುಗಳು ಕೂಡಾ ಇವೆ. ಅಂತೆಯೇ 23590 ವಿದ್ಯಾರ್ಥಿಗಳು (12200 ಹುಡುಗರು, 11390 ಹುಡುಗಿಯರು) ಕಿರಿಯ ಪ್ರಾಥಮಿಕ ಶಾಲೆಗಳಲ್ಲೂ 88722 ವಿದ್ಯಾರ್ಥಿಗಳು (18219 ಹುಡುಗರು, 7431 ಹುಡುಗಿಯರು), 11778 ಪ್ರೌಢ ಶಾಲಾ ವಿದ್ಯಾರ್ಥಿಗಳು (ಹುಡುಗರು 6093, ಹುಡುಗಿಯರು 5685), 9,979 ವಿದ್ಯಾರ್ಥಿಗಳು ಪದವಿ ಪೂರ್ವ ಕಾಲೇಜುಗಳಲ್ಲಿ (4592 ಹುಡುಗರು, 4387 ಹುಡುಗಿಯರು), 3963 ಪದವಿ ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಪಡೆಯುತ್ತಿದ್ದಾರೆ. ಪುತ್ತೂರಿನ ಎಲ್ಲಾ ಪದವಿ ಕಾಲೇಜುಗಳಲ್ಲೂ ಉತ್ತಮ ಶಿಕ್ಷಣ ನೀಡುವ ವ್ಯವಸ್ಥೆ ಇದೆ.

ಆರೋಗ್ಯ

ಪುತ್ತೂರು ಪಟ್ಟಣದಲ್ಲಿ 31 ಮಾರ್ಚ್ 2015ಕ್ಕೆ ಒಂದು ತಾಲೂಕು ಕೇಂದ್ರ ಸರಕಾರಿ ಆಸ್ಪತ್ರೆ ಇದೆ. ತಾಲೂಕಿನಲ್ಲಿ ಒಟ್ಟು 13 ಸರಕಾರೀ ಆಸ್ಪತ್ರೆಗಳು, 17 ಖಾಸಗಿ ಆಸ್ಪತ್ರೆಗಳೂ, 10 ಪ್ರಾಥಮಿಕ ಆರೋಗ್ಯ ಕೇಂದ್ರಗಳೂ, 2 ಸಮುದಾಯ ಆರೋಗ್ಯ ಕೇಂದ್ರಗಳೂ ಕಾರ್ಯಾಚರಿಸುತ್ತಿವೆ. ತಾಲೂಕಿನಲ್ಲಿ ಸುಮಾರು 90 ಔಷಧಿ ಅಂಗಡಿಗರೂ, ಒಂದು ರಕ್ತನಿಧಿಯೂ, 260 ಸಣ್ಣ ಸಣ್ಣ ಚಿಕಿತ್ಸಾಲಯಗಳೂ ಇವೆ.

ಇಷ್ಟಲ್ಲದೆ ತಾಲೂಕಿನಲ್ಲಿ ಒಟ್ಟು 20 ಪಶು ಚಿಕಿತ್ಸಾ ಕೇಂದ್ರಗಳಿವೆ. ಇದರಲ್ಲಿ ಪಶು ಆಸ್ಪತ್ರೆಗಳು, 20 ಚಿಕಿತ್ಸಾಲಯಗಳು, 5 ಪ್ರಾಥಮಿಕ ಪಶು ವೈದ್ಯ ಕೇಂದಗಳು, ಒಂದು ಸಂಚಾರಿ ಪಶು ಚಿಕಿತ್ಸಾಲಯ ಮತ್ತು 21 ಕೃತಕ ಗರ್ಭಧಾರಣಾ ಕೇಂದ್ರಗಳಿವೆ.

ಕೈಗಾರಿಕೆಗಳು

ಪುತ್ತೂರು ತಾಲೂಕಿನಲ್ಲಿ ಒಟ್ಟು 47 ಕಾರ್ಖಾನೆಗಳಿವೆ. ಇವುಗಳಲ್ಲಿ ಒಂದು ರಾಸಾಯನಿಕ, ಒಂದು ಇಂಜಿನಿಯರಿಂಗ್ ಹಾಗೂ 42 ಇತರ ಕಾರ್ಖಾನೆಗಳು ಇವೆ. ಇವುಗಳಲ್ಲಿ ಒಟ್ಟು 968 ಹೆಂಗಸರೂ, 1618 ಪುರುಷರೂ ಉದ್ಯೋಗಿಗಳಾಗಿದ್ದಾರೆ. ಎಲ್ಲಾ 47 ಕಾರ್ಖಾನೆಗಳಲ್ಲಿ ಇರುವ ಉದ್ಯೋಗಿಗಳ ಸಂಖ್ಯೆ 2,586. ಇದರಲ್ಲಿರುವ ಗಂಡಸರ ಸಂಖ್ಯೆ 31 ರಾಸಾಯನಿಕ ಕಾರ್ಖಾನೆ, 13 ಇಂಜಿನಿಯರಿಂಗ್ ಮತ್ತು 1574 ಇತರ ಕಾರ್ಖಾನೆಗಳಲ್ಲಿ ದುಡಿಯುತ್ತಿದ್ದರೆ, ಹೆಂಗಸರ ಸಂಖ್ಯೆ 967 ಇತರ ಕಾರ್ಖಾನೆಗಳಲ್ಲಿ ಮತ್ತು ಒಂದು ಇಂಜಿನಿಯರಿಂಗ್ ಕಾರ್ಖಾನೆಗಳಲ್ಲಿ ಇವೆ.

ತಾಲೂಕಿನ ಒಟ್ಟು 346 ಸಣ್ಣ ಪ್ರಮಾಣದ ಕಾರ್ಖಾನೆಗಳಲ್ಲಿ 1648 ಕಾರ್ಮಿಕರು ದುಡಿಯುತ್ತಿದ್ದಾರೆ.

ಸಾರಿಗೆ

ಪುತ್ತೂರಿನಲ್ಲಿ ಒಂದು ಉತ್ತಮವಾದ ಸರಕಾರೀ ಹಾಗೂ ಸಾರ್ವಜನಿಕ ಸಾರಿಗೆ ವ್ಯವಸ್ಥೆ ಇದೆ. ತಾಲೂಕು ಕೇಂದ್ರದಿಂದ ಹೆಚ್ಚಿನ ಎಲ್ಲಾ ಗ್ರಾಮೀಣ ಪ್ರದೇಶಗಳಿಗೆ ಬಸ್ ಸೌಕರ್ಯವಿದೆ. ಸುಮಾರು 42 ಕಿ.ಮಿ. ರಾಷ್ಟ್ರೀಯ ಹೆದ್ದಾರಿ ಸಮೀಪದ ಪಟ್ಟಾಣ ಉಪ್ಪಿನಂಗಡಿ ಮೂಲಕ ಹಾದು ಹೋಗುತ್ತದೆ. ಅಲ್ಲದೆ 41 ಕಿ.ಮಿ. ಬ್ರಾಡ್ ಗೇಜ್ ಮಂಗಳೂರು ಬೆಂಗಳೂರು ರೈಲ್ವೆ ಕೂಡಾ ಪುತ್ತೂರಿನ ಮಧ್ಯಭಾಗದಲ್ಲಿ ಹಾದು ಹೋಗುತ್ತದೆ.

ಧಾರ್ಮಿಕ ಕೇಂದ್ರಗಳು

ಪುತ್ತೂರು ಪಟ್ಟಣ ಹಾಗೂ ತಾಲೂಕಿನಲ್ಲಿ ವಿವಿಧ ಧರ್ಮಗಳಿಗೆ ಸೇರಿದ ಧಾರ್ಮಿಕ ಕೇಂದ್ರಗಳು ಹೇರಳವಾಗಿವೆ. ಇವುಗಳಲ್ಲಿ ಹಿಂದೂ ಮುಸ್ಲಿಂ ಮತ್ತು ಕ್ರಿಶ್ಚಿಯನ್ ಮತಗಳಿಗೆ ಸೇರಿದ ಕೆಲವು ಕೇಂದ್ರಗಳು ಅತ್ಯಂತ ಪ್ರಾಚೀನ ಧಾರ್ಮಿಕ ಕೇಂದ್ರಗಳಾಗಿವೆ. ಈ ಕೇಂದ್ರಗಳಲ್ಲಿ ಪ್ರಮುಖವಾದವುಗಳನ್ನು ಈ ಕೆಳಗೆ ತಿಳಿಸಲಾಗಿದೆ.

ಶ್ರೀ ಮಹಾಲಿಂಗೇಶ್ವರ ದೇವಸ್ಥಾನ

ಈ ಧಾರ್ಮಿಕ ಸ್ಥಳವು ಪುತ್ತೂರು ಪಟ್ಟಣದ ಹೃದಯ ಭಾಗದಲ್ಲಿ ಇದೆ. ಈ ದೇವಸ್ಥಾನವು ಅತ್ಯಂತ ಪುರಾತನ ಪುಣ್ಯ ಸ್ಥಳವಾಗಿದೆ. ಈ ದೇವಸ್ಥಾನವನ್ನು 1353 ನೇ ಶಕ ವರ್ಷದಲ್ಲಿ ವಿಜಯನಗರದ ದೊರೆ ಪ್ರತಾಪ ಸಿಂಹರಾಯನು ಕಟ್ಟಿಸಿದನು. ಪ್ರತೀ ವರ್ಷ ಏಪ್ರಿಲ್ 10ನೇ ತಾರೀಖಿನಿಂದ ಏಪ್ರಿಲ್ 19 ನೇ ತಾರೀಕಿನ ವರೆಗೆ ನಡೆಯುವ ವರ್ಷಾವಧಿ ಜಾತ್ರೆ, ರಥೋತ್ಸವ, ಪ್ರವಾಸಿಗರನ್ನು ಮತ್ತು ಭಕ್ತರನ್ನು ಬಹುವಾಗಿ ಆಕರ್ಷಿಸುತ್ತಿವೆ. ಈ ದೇವಾಲಯ ತುಂಬಾ ವಿಶಾಲ ಪ್ರದೇಶದಲ್ಲಿ ಇದರ ಪಶ್ಚಿಮ ಭಾಗದಲ್ಲಿ ಪ್ರಸಿದ್ಧಿ ಪಡೆದ ಕೆರೆ ಇದೆ. ಈ ಕೆರೆಯಲ್ಲಿ ಮುತ್ತುಗಳು ಬೆಳೆಯುತ್ತಿದ್ದು ಇದರಿಂದ ಪುತ್ತೂರು (ಮುತ್ತೂರು) ಅನ್ನುವ ಹೆಸರು ಬಂತು ಎಂಬ ಪ್ರತೀತಿ ಇದೆ.

ಶ್ರೀ ಲಕ್ಷ್ಮೀ ವೆಂಕಟರಮಣ ದೇವಸ್ಥಾನ

ಪುತ್ತೂರಿನ ಇನ್ನೊಂದು ಪ್ರಮುಖ ದೇವಸ್ಥಾನ ಶ್ರೀ ಲಕ್ಷ್ಮೀ ವೆಂಕಟರಮಣ ದೇವಸ್ಥಾನ. ಇದೂ ಕೂಡಾ ಪುತ್ತೂರು ಪಟ್ಟಣ ಮಧ್ಯಭಾಗದಲ್ಲಿ ಇದ್ದು ಸ್ಥಳೀಯ ಗೌಡ ಸಾರಸ್ವತ ಸಮಾಜದ ಅಧೀನಕ್ಕೊಳಪಟ್ಟಿದೆ.

ಇವುಗಳಲ್ಲದೆ ಪುತ್ತೂರು ಪಟ್ಟಣದಲ್ಲೂ ಸುತ್ತ ಮುತ್ತಲ ಸ್ಥಳಗಳಲ್ಲೂ ಹಲವಾರು ದೇವ ದೇವಿಯರ ದೇವಸ್ಥಾನಗಳಿವೆ.

ದೈವಸ್ಥಾನಗಳು

ಪುತ್ತೂರು ನಗರದ ಹೊರವಲಯ, ಬಲ್ನಾಡು ಎಂಬಲ್ಲಿ ಶ್ರೀ ದಂಡನಾಯಕ ಉಳ್ಳಾಲ್ತಿ ದೈವಸ್ಥಾನ, ಕಲ್ಲೇಗ ಎಂಬಲ್ಲಿರುವ ಶ್ರೀ ಕಲ್ಕುಡ ಕಲ್ಲುರ್ಟಿ ದೈವಸ್ಥಾನಗಳು ಪ್ರಸಿದ್ಧಿ ಪಡೆದಿವೆ. ಇದಲ್ಲದೆ ಪಟ್ಟಣದಲ್ಲಿಯೂ ಇದರ ಆಸುಪಾಸಿನಲ್ಲಿಯೂ ಜನ ನಂಬಿಕೊಂಡು ಬರುವ ಹಲವು ದೈವಸ್ಥಾನಗಳಿವೆ.

ಮಸೀದಿಗಳು

ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಬಹು ಸಮೀಪದಲ್ಲೇ ಪಟ್ಟಣದ ಮುಖ್ಯ ರಸ್ತೆಯ ಪಕ್ಕ ಮುಖ್ಯವಾದ ಮಸೀದಿ ಇದೆ. ಇದಲ್ಲದೆ ಹೊರವಲಯದ ಕಲ್ಲೇಗದಲ್ಲಿ ಸುಮಾರು 300 ವರ್ಷಗಳ ಹಿಂದೆ ಟಿಪ್ಪುಸುಲ್ತಾನ್ ಕಟ್ಟಿಸಿದ ಎಂದು ಹೇಳಲಾಗುತ್ತಿರುವ ಜುಮ್ಮಾ ಮಸೀದಿ ಇದೆ. ಪುತ್ತೂರಿನಿಂದ 6–8 ಕಿ.ಮೀ. ದೂರದ ಕೂರ್ನಡ್ಕ ಎಂಬಲ್ಲಿ ಕ್ರಿ.ಶ. 1899ರಲ್ಲಿ ಇಲ್ಲಿಗೆ ದೂರದ ಅಫಘಾನಿಸ್ತಾನದಿಮ್ದ ಬಂದ ಕೂರ್ ವಂಶದ ಸೂಫಿ ಸಂತನ ವಂಶಿಗರು ನಿರ್ಮಿಸಿದ ಪೀರ್ ಮೊಹಲ್ಲಾ ಜುಮ್ಮಾ ಮಸೀದಿ ಕೂಡಾ ಪ್ರಸಿದ್ಧ ಧಾರ್ಮಿಕ ಸ್ಥಳವಾಗಿದೆ. ಇದರಿಂದ ಇಲ್ಲಿಗೆ ಕೂರ್ನಡ್ಕ ಎಂಬ ಹೆಸರು ಬಂತು ಎನ್ನುವ ಪ್ರತೀತಿ ಇದೆ.

ಚರ್ಚುಗಳು

ಪುತ್ತೂರಿನ ಮಧ್ಯ ಭಾಗದಲ್ಲಿ ಮೈಸೂರು ಪುತ್ತೂರು ರಸ್ತೆಗೆ ತಾಗಿ ಇರುವ ಮ್ಯಾದೆ ದೇವುಸ್ ಚರ್ಚ್ ಇಲ್ಲಿನ ಪ್ರಮುಖ ಕ್ರಿಸ್ತ ಮಂದಿರ. ಕಿ.ಶ. 1830ರಲ್ಲಿ ಗೋವಾದಿಂದ ಇಲ್ಲಿಗೆ ಬಂದ ಕ್ರೈಸ್ತ ಮಿಷನರಿಗಳು ಇದನ್ನು ನಿರ್ಮಿಸಿದರು. ಅಪೂರ್ವ ವಾಸ್ತು ಶೈಲಿ ಇರುವ ಈ ಚರ್ಚನ್ನು ಇತ್ತೀಚೆಗೆ ಪುನ: ನಿರ್ಮಾಣ ಮಾಡಲಾಗಿದೆ. ಸಮೀಪದ ಕೆಮ್ಮಾಯಿ ಹಾಗೂ ಮರೀಲ್‌ನಲ್ಲಿ ಇನ್ನೆರಡು ಮುಖ್ಯ ಚರ್ಚುಗಳಿವೆ.

ಜಿನ ಮಂದಿರ

ಮುಖ್ಯ ರಸ್ತೆಯ ಪಕ್ಕದಲ್ಲೇ ಇರುವ ಜಿನಮಂದಿರ ಪುತ್ತೂರಿನ ಏಕೈಕ ಜೈನ ಬಸದಿಯಾಗಿದೆ.

ಬ್ಯಾಂಕ್ ಹಾಗೂ ಆರ್ಥಿಕ ಸಂಸ್ಥೆಗಳು

ಪುತ್ತೂರು ಪಟ್ಟಣದಲ್ಲಿ ದೇಶದ ಎಲ್ಲಾ ಪ್ರಮುಖ ಸರಕಾರೀ ಮತ್ತು ಖಾಸಗಿ ಬ್ಯಾಂಕುಗಳ ಶಾಖೆಗಳಿವೆ. ಸಾರ್ವಜನಿಕ ಕ್ಷೇತ್ರದ ಬ್ಯಾಂಕುಗಳ 49 ಶಾಖೆಗಲು, ಖಾಸಗೀ ವಲಯದ ಬ್ಯಾಂಕುಗಳ 6 ಶಾಖೆಗಳು, ಗ್ರಾಮೀಣ ಬ್ಯಾಂಕುಗಳ 3 ಶಾಖೆಗಳು ಇಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಇವುಗಳಲ್ಲದೆ ಖಾಸಗೀ ಹಣಕಾಸು ಸಂಸ್ಥೆಗಳಾದ ಮುತ್ತೂಟ್ ಫೈನಾನ್ಸ್ ನಂತಹ ಸಂಸ್ಥೆಗಳು ತಮ್ಮ ಶಾಖೆಗಳನ್ನು ಹೊಂದಿವೆ. ಮಾತ್ರವಲ್ಲದೆ 31–3–2015ರ ಅಂತ್ಯಕ್ಕೆ ಇಲ್ಲಿ ಜಿಲ್ಲಾ ಸಹಕಾರೀ ಬ್ಯಾಂಕಿನ 9 ಶಾಖೆಗಳು, ಒಂದು ಭೂ ಅಭಿವೃದ್ಧಿ ಬ್ಯಾಂಕ್ 19 ಪತ್ತಿನ ಕೃಷಿ ಸಹಕಾರೀ ಸಂಘಗಳು, 5 ಕೃಷಿಯೇತರ ಪತ್ತಿನ ಸಹಕಾರೀ ಸಂಘಗಳು, ಕಾರ್ಯಾಚರಣೆ ನಡೆಸುತ್ತವೆ. ಪುತ್ತೂರಿನಲ್ಲಿರುವ ಪತ್ತೇತರ ಸಹಕಾರಿ ಸಂಘಗಳು ಒಟ್ಟು 115 ಇವುಗಳಲ್ಲಿ ಒಂದು ಮಾರುಕಟ್ಟೆ, 3 ಗೃಹ ನಿರ್ಮಾಣ, 80 ಹೈನುಗಾರಿಕೆ, 31 ಇತರ ಸಹಕಾರೀ ಸಂಘಗಳು ಅಸ್ತಿತ್ವದಲ್ಲಿ ಇವೆ.

ಪ್ರೇಕ್ಷಣೀಯ ಸ್ಥಳಗಳು

ಪುತ್ತೂರು ನಗರ ಹಾಗೂ ಆಸುಪಾಸಿನಲ್ಲಿರುವ ಪ್ರೇಕ್ಷಣೀಯ ಸ್ಥಳಗಳು ಹೀಗಿವೆ.

ಬಿರುಮಲೆ ಬೆಟ್ಟ

ಪುತ್ತೂರಿನಲ್ಲಿರುವ ಬಿರುಮಲೆ ಬೆಟ್ಟ ಪ್ರವಾಸಿಗರ ಕೇಂದ್ರ ಬಿಂದುವಾಗಿದೆ. ಇದು ಸಮುದ್ರ ಮಟ್ಟದಿಂದ ಸುಮಾರು 1000 ಅಡಿ ಎತ್ತರದಲ್ಲಿದೆ. ಇದರ ತುದಿಯಲ್ಲಿ ದೂರದರ್ಶದ ಒಂದು ಪ್ರಸಾರ ಕೇಂದ್ರವಿದೆ. ಈ ಬೆಟ್ಟದ ಅಭಿವೃದ್ಧಿಗಾಗಿ ಒಂದು ಸಮಿತಿ ಇದ್ದು ಹಲವಾರು ಅಭಿವೃದ್ಧಿ ಕಾರ್ಯಗಳನ್ನು ಮಾಡುತ್ತಿವೆ. ಇಲ್ಲಿ ಒಂದು ಬಯಲು ರಂಗಮಂದಿರ, ಗ್ರಂಥಾಲಯಗಳು ಸಾರ್ವಜನಿಕರ ಪ್ರಯೋಜನಕ್ಕಾಗಿ ತೆರೆದಿವೆ. ಗುಡ್ಡಕ್ಕೆ ಹಸಿರು ಹೊದಿಸುವ ಕಾರ್ಯವು ಯಶಸ್ವಿಯಾಗಿದ್ದು ಬೆಟ್ಟ ಸುತ್ತಲೂ ಹಸಿರು ಕಂಗೊಳಿಸುತ್ತಿದ್ದು ನೋಡುಗರ ಮನಸ್ಸಿಗೆ ಮುದ ನೀಡುತ್ತದೆ.

ಬೆಂದ್ರ್ ತೀರ್ಥ

ಇದು ಒಂದು ಸ್ವಾಭಾವಿಕ ಬಿಸಿ ನೀರಿನ ಬುಗ್ಗೆಯಾಗಿದ್ದು ಪುತ್ತೂರಿನ ಸಮೀಪದ ಇರ್ದೆ ಎಂಬಲ್ಲಿ ಸೀತಾ ನದಿಯ ದಡದಲ್ಲಿದೆ. 'ಬೆಂದ್ರ್' ಅಂದರೆ ತುಳುವಿನಲ್ಲಿ ಬಿಸಿನೀರು ಎಂದರ್ಥ. ಈ ನೀರಿನಲ್ಲಿ ಸ್ನಾನ ಮಾಡಿದರೆ ಚರ್ಮರೋಗಗಳು ವಾಸಿಯಾಗುತ್ತದೆ ಎನ್ನುವ ನಂಬಿಕೆ ಜನರಲ್ಲಿ ಇದೆ.

ಬಾಲವನ

ಖ್ಯಾತ ವಿದ್ವಾಂಸ ಶ್ರೀ ಕೋಟ ಶಿವರಾಮ ಕಾರಂತರು ನೆಲೆಸಿದ್ದ ಕ್ಷೇತ್ರ ಬಾಲವನ. ಪುತ್ತೂರಿನ ಪರ್ಲಡ್ಕ ಎಂಬಲ್ಲಿದೆ. ಸುಮಾರು 40 ವರ್ಷಗಳ ಕಾಲ ಇದು ಶ್ರೀ ಕಾರಂತರ ಕಾರ್ಯಕ್ಷೇತ್ರವಾಗಿತ್ತು. ಇಲ್ಲಿ ಅವರು ಶಿಕ್ಷಣದಲ್ಲಿ ಹಲವಾರು ಪ್ರಯೋಗಗಳನ್ನು ಮಾಡಿದ್ದರು. ತುಂಬಾ ದಯನೀಯ ಸ್ಥಿತಿಯಲ್ಲಿ ಇದ್ದ ಬಾಲವನವನ್ನು ಈಗ ಸರಕಾರವೇ ವಹಿಸಿಕೊಂಡು, ಗ್ರಂಥಾಲಯ, ಕಾರಂತರ ಪ್ರಶಸ್ತಿಗಳು ಹಾಗೂ ಖಾಸಗಿ ವಸ್ತುಗಳ ಪ್ರದರ್ಶನ ಕೇಂದ್ರ, ಈಜುಕೊಳ ಇತ್ಯಾದಿಗಳಿಂದ ಆಕರ್ಷಕ ಪ್ರವಾಸೀ ಕೇಂದ್ರವಾಗಿ ಅಭಿವೃದ್ಧಿ ಪಡಿಸುತ್ತಲಿದೆ.

ಕ್ಯಾಂಪ್ಕೊ ಚಾಕಲೇಟ್ ಕಾರ್ಖಾನೆ

ಪುತ್ತೂರು ಏಷ್ಯಾ ಖಂಡದ ಎರಡನೇ ಹಾಗೂ ಭಾರತದ ಅತೀ ದೊಡ್ಡ ಚಾಕಲೇಟ್ ಕಾರ್ಖಾನೆಯನ್ನು ಹೊಂದಿದೆ. ಇದನ್ನು ದಕ್ಷಿಣ ಕನ್ನಡ ಹಾಗೂ ಕೇರಳ ರಾಜ್ಯದ ಕೊಕ್ಕೊ ಮತ್ತು ಅಡಿಕೆ ಬೆಳೆಗಾರರ ಹಿತ ರಕ್ಷಣೆಗಾಗಿ ಹಾಗೂ ಇವರ ಉತ್ಪಾದನೆಗಳಿಗೆ ಸೂಕ್ತ ಮಾರುಕಟ್ಟೆ ಒದಗಿಸುವ ಉದ್ದೇಶಕ್ಕಾಗಿ ಸಹಕಾರೀ ಕ್ಷೇತ್ರದಲ್ಲಿ ಕೇರಳ ಮತ್ತು ಕರ್ನಾಟಕ ಸರಕಾರದ ಜಂಟಿ ಸಹಯೋಗದಲ್ಲಿ ಪ್ರಾರಂಭಿಸಲಾಯಿತು. ಇಲ್ಲಿ ಖ್ಯಾತ ನೆಸ್ಲೆ ಕಂಪೆನಿಯ ಹೆಚ್ಚಿನ ಉತ್ಪನ್ನಗಳನ್ನು ಉತ್ಪಾದಿಸಲಾಗುತ್ತಿದೆ. ಕಾಂಪ್ಕೊ ಚಾಕಲೇಟುಗಳಿಗೆ ದೇಶದಲ್ಲಿ ಮಾತ್ರವಲ್ಲದೆ ವಿದೇಶಗಳಲ್ಲಿ ಕೂಡಾ ಬೇಡಿಕೆ ಇದೆ.

ಅಂಚೆ ಕಛೇರಿಗಳು, ದೂರವಾಣಿ ಕೇಂದ್ರಗಳು

ಪುತ್ತೂರಿನಲ್ಲಿ ಒಂದು ಮುಖ್ಯ ಅಂಚೆ ಕಛೇರಿಯೂ, ಮೂರು ಉಪ ಅಂಚೆ ಕಛೇರಿಗಳೂ ಇವೆ. ಮುಖ್ಯ ಅಂಚೆ ಕಛೇರಿ ನಗರದ ಮಧ್ಯ ಭಾಗದಲ್ಲಿ ಇದ್ದರೆ, ಉಪ ಅಂಚೆ ಕಛೇರಿಗಳು ಆಸುಪಾಸಿನ ಪ್ರದೇಶಗಳಾದ ಕೋರ್ಟ್ ಗುಡ್ಡ, ಬೊಳ್ವಾರು ಮತ್ತು ಶಿವಪೇಟೆಎಂಬ ಸ್ಥಳಗಳಲ್ಲಿವೆ. ಇಲ್ಲಿನ ಅಂಚೆ ಕಛೇರಿಗೂ 75 ಸಂಖ್ಯೆಗೂ ವಿಶೇಷ ಸಂಬಂಧ ಇದೆ. ಪುತ್ತೂರು ಪಟ್ಟಣ ಹಾಗೂ ತಾಲೂಕಿನಲ್ಲಿರುವ ಒಟ್ಟು ಅಂಚೆ ಕಛೇರಿಗಳ ಸಂಖ್ಯೆ 75, ಇಲ್ಲಿನ ಪಿನ್ ಕೋಡ್ 575 ಇದೆ.

ಪುತ್ತೂರಿನ ಅಂಚೆ ಕಛೇರಿಯಲ್ಲಿ ಇಲಾಖೆಯ ಎಲ್ಲಾ ಸೇವೆಗಳಾದ ಪತ್ರಗಳ ವಿಂಗಡನೆ, ಸಂಸ್ಕರಣೆ ಹಾಗೂ ಬಟವಾಡೆಗಳ ಸೌಲಭ್ಯವಿದೆ. ಇವುಗಳಲ್ಲದೆ, ಉಳಿತಾಯ ಯೋಜನೆ, ಭವಿಷ್ಯ ನಿಧಿ ದೇಣಿಗೆ

ಸ್ವೀಕಾರ, ಅಂಚೆ ಚೀಟಿಗಳ ಮಾರಾಟ, ಜೀವ ವಿಮೆ, ಹಣ ವರ್ಗಾವಣೆ ಇತ್ಯಾದಿ ಸೇವಾ ಸೌಕರ್ಯಗಳು ಲಭ್ಯವಿವೆ.

ಇತರ ಮಾಹಿತಿ

ಪುತ್ತೂರಿನ ಇನ್ನೊಂದು ವಿಶೇಷ ಅಂದರೆ ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಮುಖ ಕೇಂದ್ರಗಳ ಮಧ್ಯದಲ್ಲಿ ಇದೆ. ಪ್ರಮುಖ ಧಾರ್ಮಿಕ ಕೇಂದ್ರಗಳಾದ ಧರ್ಮಸ್ಥಳ, ಕುಕ್ಕೆ ಸುಬ್ರಹ್ಮಣ್ಯ, ಮಧೂರು ಸೌತಡ್ಕ, ಕಟೀಲು, ಪ್ರವಾಸಿ ಕೇಂದ್ರ ಬೇಕಲ ಕೋಟೆ, ಮಂಗಳೂರು ಮಂಗಳೂರಿನ ಸುಲ್ತಾನ್ ಬತ್ತೇರಿ ಎಲ್ಲವೂ 50 ಕಿ.ಮಿ. ನ ಆಸುಪಾಸಿನಲ್ಲಿದೆ.

ಇಂತಹ ಹತ್ತು ಹಲವು ವೈಶಿಷ್ಟ್ಯಗಳಿರುವ ಪುತ್ತೂರನ್ನು ಕೇಂದ್ರವಾಗಿಸಿಕೊಂಡು ಈ ಸಂಶೋಧನಾ ಅಧ್ಯಯನವನ್ನು ನಡೆಸಲಾಗಿದೆ.

ಅಧ್ಯಾಯ ೩

ಅಂಚೆ ಇಲಾಖೆ – ಅಂಚೆ ಕಛೇರಿಗಳ ಹಾಗು ಅಂಚೆ ಉಳಿತಾಯ ಯೋಜನೆಗಳು

ಅಧ್ಯಾಯ 3

ಅಂಚೆ ಇಲಾಖೆ, ಅಂಚೆ ಕಛೇರಿಗಳು, ಅಂಚೆ ಉಳಿತಾಯ ಸೇವೆಗಳು – ಒಂದು ಪಕ್ಷಿ ನೋಟ

ಈ ಅಧ್ಯಾಯದಲ್ಲಿ ಅಂಚೆ ಕಛೇರಿಗಳ ಹುಟ್ಟು ಹಾಗೂ ಬೆಳವಣಿಗೆಗಳನ್ನು ತಿಳಿಯುವ ಪ್ರಯತ್ನ ಮಾಡಲಾಗಿದೆ. ಅಂಚೆ ಪತ್ರಗಳ ಸಂಸ್ಕರಣೆ, ರವಾನೆ ಮತ್ತು ಬಟವಾಡೆ ಅನ್ನು ಮೂಲ ಉದ್ದೇಶದಿಂದ ಪ್ರಾರಂಭವಾದ ಈ ಇಲಾಖೆಯ ಕಾರ್ಯ ಕ್ಷೇತ್ರ ಇಂದು ಆರ್ಥಿಕ ಹಾಗೂ ಬ್ಯಾಂಕಿಂಗ್ ಸೇವೆಗಳ ವರೆಗೆ ವೃದ್ಧಿಸಿದೆ. ಹೀಗೆ ನಡೆದು ಬಂದ ದಾರಿಯ ಅವಲೋಕನ ಸಂಶೋಧನೆಯ ದೃಷ್ಟಿಯಿಂದ ಬಹು ಸೂಕ್ತ ಅಂಚೆ ಇಲಾಖೆಯ ಈ ಯಾತ್ರೆಯನ್ನು ಈ ಕೆಳಗೆ ವಿವರಿಸಲಾಗಿದೆ.

ಪ್ರಾರಂಭ

ನಮ್ಮದೇಶದಲ್ಲಿ ಅಂಚೆ ಯೋಜನೆಯನ್ನು ಪ್ರಪ್ರಥಮವಾಗಿ ಅಂದಿನ ಗವರ್ನರ್ ಜನರಲ್ ಲಾರ್ಡ್ ರಾಬರ್ಟ್ ಕ್ಲೈವ್ 24ನೇ ಮಾರ್ಚ್ 1766 ರಲ್ಲಿ ಆಗಿನ ಪಶ್ಚಿಮ ಬಂಗಾಳ ರಾಜ್ಯದಲ್ಲಿ ಪ್ರಾರಂಭಿಸಿದರು. ಈ ಯೋಜನೆಯನ್ನು ಲಾರ್ಡ್ ವಾರನ್ ಹೇಸ್ಟಿಂಗ್ ಅನ್ನುವ ಗವರ್ನರ್ ಜನರಲ್ 1ನೇ ಏಪ್ರಿಲ್ 1774ರಂದು ಬಂಗಾಳದಲ್ಲಿ ಮೊದಲ ಅಂಚೆ ಕಛೇರಿಯನ್ನು ಪ್ರಾರಂಭಿಸುವುದರೊಂದಿಗೆ ಸಾರ್ವಜನಿಕರ ಉಪಯೋಗಕ್ಕೆ ತೆರೆಯಲಾಯಿತು. ನಂತರ 1778ರಲ್ಲಿ ಮದರಾಸಿನಲ್ಲೂ, 1792 ರಲ್ಲಿ ಮುಂಬಾಯಿಯಲ್ಲೂ ಅಂಚೆ ಕಛೇರಿಗಳನ್ನು ತೆರೆಯಲಾಯಿತು. ಆಗ ನಮ್ಮ ದೇಶವು ಬಿಟಿಷ್ ಸಂಸ್ಥೆ, ಈಸ್ಟ್ ಇಂಡಿಯಾ ಕಂಪನೆಯ ಆಡಳಿತಕ್ಕೆ ಒಳಪಟ್ಟಿತ್ತು. ಪರಿಣಾಮವಾಗಿ 1781ರಲ್ಲಿ ಅಂಚೆ ಇಲಾಖೆಗೆ ಪ್ರಥಮ ಪೋಸ್ ಪೋಸ್ಟಲ್ ಜನರಲ್‌ನ್ನು ಈ ಕಂಪನಿಯು ನೇಮಕ ಮಾಡಿತು. ತಾತ್ಕಾಲಿಕವಾಗಿದ್ದ ಈ ವ್ಯವಸ್ಥೆಗೆ ಲಾರ್ಡ್ ಕಾರ್ನವಾಲೀಸ್ ಎಂಬ ಗವರ್ನರ್ ಜನರಲ್ 1793ರಲ್ಲಿ ಖಾಯಂ ನೆಲೆಯನ್ನು ಒದಗಿಸಿದನು. ಇದರೊಂದಿಗೆ ಹಲವು ಖಾಸಗಿ ಅಂಚೆ ಸೇವೆ ವ್ಯವಸ್ಥೆಗಳು ಕೂಡಾ ಹುಟ್ಟಿಕೊಂಡು ಅಂಚೆ ಸೇವೆಗಳನ್ನು ಪ್ರಮುಖವಾಗಿ ಸುದ್ದಿ ರವಾನೆ ಒದಗಿಸಲು ಪ್ರಾರಂಭಿಸಿದವು. ಆದರೆ, ಅಂಚೆ ಸೇವೆಗಳನ್ನು ಅಭಿವೃದ್ಧಿಗೊಳಿಸುವ ಏಕೈಕ ಉದ್ದೇಶ ಅಂದರೆ, ದೇಶದ ಆಡಳಿತ ನಡೆಸುತ್ತಿದ್ದ ಈಸ್ಟ್ ಇಂಡಿಯಾ ಕಂಪೆಯ ಆರ್ಥಿಕ ಹಾಗೂ ರಾಜಕೀಯ ಅಗತ್ಯಗಳನ್ನು ಪೂರೈಸುವುದು ಆಗಿತ್ತು.

ಅಂಚೆ ಕಛೇರಿ ಕಾಯಿದೆ 1837

ಭಾರತದಲ್ಲಿ ಪ್ರಥಮ ಅಂಚೆ ಇಲಾಖೆ ಕಾಯಿದೆ ಛಿಗಿ೧ಉ೩;1837ರಲ್ಲಿ ಮಂಜೂರಾಯಿತು. ಇದು ಈಸ್ಟ್ ಇಂಡಿಯಾ ಕಂಪನೆಯ ಆಡಳಿತಕ್ಕೊಳಪಟ್ಟ ಪ್ರದೇಶದಲ್ಲಿ ಅಂಚೆ ಮೂಲಕ ಪತ್ರಗಳನ್ನು ರವಾನೆ ಮಾಡುವ ಅಧಿಕಾರವನ್ನು ಅಂದಿನ ಗವರ್ನರ್ ಜನರಲ್‌ರವರಿಗೆ ನೀಡಿತು. ಈ ಕಾನೂನಿನ ಅನ್ವಯ 1ನೇ ಅಕ್ಟೋಬರ್ 1837ರಲ್ಲಿ ಈಸ್ಟ್ ಇಂಡಿಯಾ ಕಂಪನಿಯ ಆಡಳಿತ ಸಮಿತಿಯ ಮೂಲಕ ಕಾರ್ಯ

ನಿರ್ವಹಿಸುವ ಹಲವು ಅಂಚೆ ಕಛೇರಿಗಳು ದೇಶದ ಪ್ರಮುಖ ಪಟ್ಟಣಗಳಲ್ಲಿ ಪ್ರಾರಂಭವಾಯಿತು. ಇದರೊಂದಿಗೆ ಬೇಕಾದ ಅಂಚೆ ಅಧಿಕಾರಿಗಳನ್ನು ನೇಮಿಸಲಾಯಿತು. ಆದರೆ ಈ ಅಂಚೆ ಸೇವೆಗಳಿಗೆ, ತಲುಪಬೇಕಾದ ದೂರ ಮತ್ತು ಭಾರವನ್ನು ಪರಿಗಣಿಸಿ ನಗದಾಗಿ ಶುಲ್ಕವನ್ನು ಪಾವತಿಮಾಡಬೇಕಾಗಿತ್ತು.

ಅಂಚೆ ಕಛೇರಿ ಕಾಯಿದೆ 1854

ಬ್ರಿಟಿಷ್ ಅಧಿಕಾರಿ ಲಾರ್ಡ್ ಡಾಲ್ ಹೌಸಿ ಅವರು ಭಾರತೀಯ ಅಂಚೆ ವ್ಯವಸ್ಥೆಯನ್ನು ಅಭ್ಯಸಿಸಲು 1850 ರಲ್ಲಿ ಒಂದು ಸಮಿತಿಯನ್ನು ನಿಯಮಿಸಿದರು. ಈ ಸಮಿತಿ ತನ್ನ ಶಿಫಾರಸುಗಳನ್ನು 1851ರಲ್ಲಿ ಸಲ್ಲಿಸಿತು. ಇದರ ಪರಿಣಾಮವಾಗಿ 1837ರ ಕಾನೂನಿನ ಸ್ಥಾನದಲ್ಲಿ ಇನ್ನೊಂದು ಅಂಚೆ ಕಛೇರಿ ಕಾಯಿದೆ 1854 ರಲ್ಲಿ ಜಾರಿಗೆ ತರಲಾಯಿತು. ಇದರಲ್ಲಿ ಅಂಚೆ ಚೀಟಿಗಳ ವ್ಯವಸ್ಥೆಯನ್ನು ಪ್ರಾರಂಭಿಸಲಾಯಿತು. ಇನ್ನೊಂದು ಮುಖ್ಯ ವಿಷಯ ಅಂದರೆ ಈ ಕಾಯಿದೆಯಲ್ಲಿ ಹಿಂದೆ ಇದ್ದ ಅಂಚೆ ತಲುಪ ಬೇಕಾದ ದೂರವನ್ನು ಬಿಟ್ಟು ಬರೇ ಅಂಚೆ ಪತ್ರಗಳ ಭಾರದ ಆಧಾರದಲ್ಲಿ ಅಂಚೆ ಶುಲ್ಕವನ್ನು ನಿಗದಿಗೊಳಿಸಲು ನಿರ್ಧರಿಸಲಾಯಿತು. ಅಲ್ಲದೆ ಇಡೀ ದೇಶದಲ್ಲಿ ಅಂಚೆ ರವಾನೆ ಮಾಡುವ ಅಧಿಕಾರವನ್ನು ಅಂಚೆ ಕಚೇರಿಗಳಿಗೆ ನೀಡಲಾಯಿತು. ಇದರ ಹೊರತಾಗಿ ಕೆಲವು ರಾಜರ ಆಡಳಿತದಲ್ಲಿದ್ದ ರಾಜ್ಯಗಳು ಅವರದ್ದೇ ಆದ ಸ್ವಂತ ಅಂಚೆ ಸೇವಾ ವ್ಯವಸ್ಥೆಯನ್ನು ಹೊಂದಿದ್ದರು. ಭಾರತೀಯ ಅಂಚೆ ಇಲಾಖೆಗೆ ಅಂತಹ ರಾಜ್ಯಗಳಲ್ಲಿ ಕಾರ್ಯ ನಿರ್ವಹಿಸಲು ಅನುಕೂಲವಾಗುವಂತೆ ವ್ಯವಸ್ಥೆಯನ್ನು ರೂಪಿಸಲಾಯಿತು. ಅದರಂತೆ ಅಂಚೆ ಕಛೇರಿಗಳು ಮುದ್ರಿಸಿದ್ದ ಅಂಚೆ ಚೀಟಿಗಳಲ್ಲಿ ಕಾರ್ಯ ನಿರ್ವಹಿಸಲು ಅನುಕೂಲವಾಗುವಂತೆ ವ್ಯವಸ್ಥೆಯನ್ನು ರೂಪಿಸಲಾಯಿತು. ಅದರಂತೆ ಅಂಚೆ ಕಛೇರಿಗಳು ಮುದ್ರಿಸಿದ್ದ ಅಂಚೆ ಚೀಟಿಗಳನ್ನು ಇಂತಹ ಪತ್ರಗಳ ಮೇಲೆ ಅಂಟಿಸಬೇಕಾಗಿತ್ತು. ಇತರ ರಾಜಾಡಳಿತ ಹೊಂದಿದ ರಾಜ್ಯಗಳಲ್ಲಿ ಅವರದ್ದೇ ಆದ ಅಂಚೆ ಚೀಟಿಗಳನ್ನು ಮುದ್ರಿಸಿ ಅಂಚೆ ಕಾರ್ಯವನ್ನು ನಿರ್ವಹಿಸುತ್ತಿದ್ದರು. ಈ ಎಲ್ಲಾ ಕಾರ್ಯಗಳ ಮೇಲ್ವಿಚಾರಣೆಗಳಿಗೆ ಒಬ್ಬ ಅಂಚೆ ಕಛೇರಿಗಳ ಪ್ರಧಾನ ಅಂಚೆ ಅಧಿಕಾರಿ ಸ್ಥಾನವನ್ನು ಹೊರತಾಗಿ ನಿರ್ಮಿಸಲಾಯಿತು. ಪ್ರಥಮ ಪ್ರಧಾನ ಅಂಚೆ ಅಧಿಕಾರಿಯಾಗಿ ಮಿ. ಎಡ್ಲ್ ಅವರನ್ನು ನೇಮಿಸಲಾಯಿತು. ಉತ್ತರ ಭಾಗದ ದೊಡ್ಡ ದೊಡ್ಡ ರಾಜಾಡಳಿತ ಪ್ರದೇಶಗಳ ಅಂಚೆ ಕಾರ್ಯ ನಿರ್ವಹಣೆಯ ಮೇಲುಸ್ತುವಾರಿಯನ್ನು ಈ ಅಧೀಕ್ಷಕರಿಗೆ ನೀಡಲಾಯಿತು. ಉಳಿದ ಸಣ್ಣ ಸಣ್ಣ ಪ್ರದೇಶಗಳ ಉಸ್ತುವಾರಿಯನ್ನು ರಾಜಾಡಳಿತ ಪ್ರದೇಶಗಳ ಅಂಚೆ ಅಧೀಕ್ಷರಿಗೆ ವಹಿಸಲಾಯಿತು. ಈ ಅಂಚೆ ಕಾಯಿದೆ ಎಲ್ಲಾ ಮಾರ್ಗಗಳ ಅಂಚೆ ಸೇವೆಗಳಿಗೆ ಏಕರೂಪದ ಸೇವಾ ಶುಲ್ಕ ವಿಧಿಸಲು ಹಾಗೂ ಎಲ್ಲಾ ಅಂಚೆ ಕಛೇರಿಗಳಿಗೆ ಏಕರೂಪದ ವಿನ್ಯಾಸವನ್ನು ಹೊಂದಲು ನಿರ್ದೇಶಿಸಿತು.

ಭಾರತದ ಪ್ರಪ್ರಥಮ ತಂತಿ ವಾರ್ತೆ ಕಾಯಿದೆ 1854

ವಿದ್ಯುತ್ ಚಾಲಿತ ತಂತಿ ಸಂದೇಶ ವ್ಯವಸ್ಥೆಗಿಂತ ಮೊದಲು, ಭಾರತದಲ್ಲಿ ಯಂತ್ರ ಚಾಲಿತ ಸಂಜ್ಞೆಗಳ ಮೂಲಕ ಸಂದೇಶಗ್ ಕಳುಹಿಸುವ 'ಸೆಮಾಫೋರ್' ಎಂಬ ವ್ಯವಸ್ಥೆಯನ್ನು ತಂತಿ ವಾರ್ತೆ ಎಂದು ಕರೆಯುತ್ತಿದ್ದರು. ಇದಕ್ಕೆ ಬೇಕಾದ ಸಂಜ್ಞಾ ಗೋಪುರಗಳನ್ನು ನಿರ್ಮಿಸಲು ಈಸ್ಟ್ ಇಂಡಿಯಾ ಕಂಪನಿ

1820ರಲ್ಲಿ ಯೋಚಿಸಿತ್ತು. ಕಲ್ಕತ್ತಾದಿಂದ ಮುಂಬಯಿಗೆ ಪ್ರತಿ ಎಂಟು ಮೈಲು ದೂರಕ್ಕೆ ಒಂದರಂತೆ, ನೂರು ಅಡಿ ಎತ್ತರದ ಗೋಪುರಗಳನ್ನು ಬಂಗಾಳ ಮತ್ತು ಬಿಹಾರ ರಾಜ್ಯಗಳನ್ನೊಳಗೊಂಡಂತೆ ನಿರ್ಮಿಸಲಾಯಿತು. ಆದರೆ, ಇಂತಹ ವ್ಯವಸ್ಥೆಯ ಜಾಲವನ್ನು ಇಡೀ ದೇಶಕ್ಕೆ ಹರಡುವಂತಹ ವ್ಯವಸ್ಥೆ ಏರ್ಪಡಲೇ ಇಲ್ಲ. ಇದೇ ಸಮಯಕ್ಕೆ ವಿದ್ಯುತ್ ನಿಯಂತ್ರಿತ ವ್ಯವಸ್ಥೆ ಬಂದುದರಿಂದ ಸೆಮಾಫೋರ್ ವ್ಯವಸ್ಥೆ ತನ್ನ ಅಸ್ತಿತ್ವವನ್ನು ಕಳೆದುಕೊಂಡಿತು.

ಬ್ರಿಟಿಷ್ ಸಂಸತ್ತು ಅನುಮೋದಿಸಿದ 1854ರ XXXIV ಕಾಯಿದೆ ಭಾರತದ ಪ್ರಪ್ರಥಮ ತಂತಿ ಸಂದೇಶದ ಕಾಯಿದೆ. ಈ ಸೇವೆಯನ್ನು ಸಾರ್ವಜನಿಕರಿಗೆ ಮುಕ್ತವಾಗಿರಿಸಿದಾಗ ಹದಿನಾರು ಪದಗಳ 400 ಮೈಲು ದೂರಕ್ಕೆ ಸಂದೇಶವನ್ನು ರವಾನಿಸಲು ರೂ. 1 ಶುಲ್ಕವನ್ನು ನಿಗದಿಪಡಿಸಲಾಯಿತು. ಆದರೆ ಸಂಜೆ 6 ಗಂಟೆಯಿಂದ ಮುಂಜಾನೆ 6 ಗಂಟೆವರೆಗೆ ಕಳಿಸಲಾಗುವ ಸಂದೇಶಗಳಿಗೆ ದುಪ್ಪಟ್ಟು ಶುಲ್ಕವನ್ನು ವಿಧಿಸಲಾಗುತ್ತಿತ್ತು. ಭಾರತದಲ್ಲಿ 1860–61ಅ ಅವಧಿಯಲ್ಲಿ ಒಟ್ಟು 11,093 ಮೈಲು ಉದ್ದದ (17852 ಕಿ.ಮೀ.) ತಂತಿ ವಾರ್ತಾಪಥವಿತ್ತು ಮತ್ತು 145 ತಂತಿ ವಾರ್ತಾ ಕಛೇರಿಗಳಿದ್ದುವು.

ಬ್ರಿಟಿಷ್ ಆಡಳಿತ ಮತ್ತು ಅಂಚೆ ಇಲಾಖೆ (1858–1947)

ಭಾರತದ ಆಡಳಿತವು 1858ರಲ್ಲಿ ಈಸ್ಟ್ ಇಂಡಿಯಾ ಕಂಪನಿಯಿಂದ ಬ್ರಿಟಿಷ್ ಸರಕಾರಕ್ಕೆ ವರ್ಗಾವಣೆ ಆಯಿತು. ದೇಶದಲ್ಲಿ 1861ರಲ್ಲಿ 889 ಅಂಚೆ ಕಛೇರಿಗಳು ಸುಮಾರು 43 ಮಿ. ಪತ್ರಗಳು ಹಾಗೂ 4.5 ಮಿ. ವಾತ್ರಾ ಪತ್ರಗಳ ಅಂಚೆ ವ್ಯವಹಾರವನ್ನು ನಿಭಾಯಿಸಿದವು. ಅಲಹಾಬಾದ್‌ನಲ್ಲಿ ದೇಶದ ಪ್ರಪ್ರಥಮ ಅಂಚೆ ಮೇಲ್ವಿಚಾರಣಾ ಅಧಿಕಾರಿಯನ್ನು 1870ರಲ್ಲಿ ನೇಮಕ ಮಾಡಲಾಯಿತು.

ಬ್ರಿಟಿಷ್ ಸರಕಾರ ಬೇರೆ ಬೇರೆ ಸಮಯಗಳಲ್ಲಿ ಅಂಚೆ ಮತ್ತು ತಂತಿ ಸೇವೆಗಳ ನಿಯಂತ್ರಣ ಮತ್ತು ವಿಸ್ತರಣೆಗಾಗಿ ಹಲವಾರು ಕಾಯಿದೆಗಳನ್ನು ಜಾರಿಗೆ ತಂದಿತು. ಅವುಗಳಲ್ಲಿ ಮುಖ್ಯವಾದುವು ಈ ಕೆಳಗೆ ನಮೂದಿಸಲಾಗಿದೆ.

- ಶಾಸನ ಸಭೆಯು 28ನೇ ಫೆಬ್ರವರಿ 1873 ರಂದು ಸರಕಾರೀ ಉಳಿತಾಯ ಬ್ಯಾಂಕ್ ಕಾಯಿದೆ 1873 ಅನುಮೊದಿಸಿತು. ಇದನ್ನು 1881ರಲ್ಲಿ ಜಾರಿಗೆ ತರಲಾಯಿತು. ಇದರ ಅನ್ವಯ 1ನೇ ಏಪ್ರಿಲ್ 1882ರಂದು ಮುಂಬಯಿ ರಾಜಾಡಳಿತ ಪ್ರದೇಶ ಹೊರತು ಪಡಿಸಿ ದೇಶದಾದ್ಯಂತ ಅಂಚೆ ಕಛೇರಿ ಉಳಿತಾಯ ಬ್ಯಾಂಕುಗಳನ್ನು ತೆರೆಯಲಾಯಿತು. ಮದರಾಸು ರಾಜಾಡಳಿತ ಪ್ರದೇಶದಲ್ಲಿ ಈ ಬ್ಯಾಂಕುಗಳ ಸಂಖ್ಯೆ ನಿಯಮಿತವಾಗಿದ್ದು ಬಂಗಾಳ ಪ್ರದೇಶದಲ್ಲಿ ಒಂದೇ ಒಂದು ಶಾಖೆ ಕೂಡಾ ತೆರೆಯಲಿಲ್ಲ.
- ಅಂಚೆ ಮತ್ತು ತಂತಿ ಇಲಾಖೆಯ ಉದ್ಯೋಗಿಗಳ ಕ್ಷೇಮಾಭಿವೃದ್ಧಿಗಾಗಿ ಭಾರತ ಸರಕಾರ 1ನೇ ಫೆಬ್ರವರಿ 1884ರಂದು ಅಂಚೆ ಜೀವ ವಿಮಾ ಯೋಜನೆಯನ್ನು ಪ್ರಾರಂಭಿಸಿತು.

- ಭಾರತೀಯ ತಂತಿ ವಾರ್ತಾ ಕಾಯಿದೆಯನ್ನು 1885ರಲ್ಲಿ ಜಾರಿಗೊಳಿಸಲಾಯಿತು.

- ಸರಕಾರೀ ಉಳಿತಾಯ ಬ್ಯಾಂಕ್ ಕಾಯಿದೆ 1881ರ ಸ್ಥಾನದಲ್ಲಿ ಅಂಚೆ ಸೇವೆಗಳ ನಿಯಂತ್ರಣಕ್ಕಾಗಿ 22ನೇ ಮಾರ್ಚ್ 1898ರಂದು ಭಾರತೀಯ ಅಂಚೆ ಕಛೇರಿ ಕಾಯಿದೆ 1898ನ್ನು ಶಾಸನ ಸಭೆಯಲ್ಲಿ ಅಂಗೀಕರಿಸಲಾಯಿತು. ಈ ಕಾನೂನು 1ನೇ ಜುಲ್ಯಾ 1898 ರಂದು ಜಾರಿಗೆ ಬಂದಿತು.

- ಭಾರತೀಯ ನಿಸ್ತಂತುತಂತಿ ಸಂದೇಶ ಕಾಯಿದೆ 1933 ರಲ್ಲಿ ಜಾರಿಗೆ ಬಂದಿತು.

ಜಗತ್ತಿನ ಪ್ರಪ್ರಥಮ ಅಧಿಕೃತ ವಾಯುಯಾನ ಟಪಾಲು ರವಾನೆಯ ವಿಮಾನವು ಭಾರತದಲ್ಲಿ 18ನೇ ಫೆಬ್ರವರಿ 1911 ರಂದು ನಡೆಯಿತು. ಈ ಯಾನ ಕ್ರಮಿಸಿದ ದೂರ 18 ಕಿ.ಮೀ. ಆಗಿದ್ದು 27 ನಿಮಿಷ ಸಮಯ ತೆಗೆದುಕೊಂಡಿತು. ಈ ವಿಮಾನದ ಚಾಲಕ ಫ್ರೆಂಚ್ ಪ್ರಜೆ ಹೆನ್ರಿ ಪಿಕ್ವೆಟ್ ಸುಮಾರು 15 ಕಿ.ಗ್ರಾಮ್. ಭಾರವಿದ್ದ ಈ ಪತ್ರಗಳನ್ನು (ಸುಮಾರು 6000 ಕಾಗದ ಪತ್ರಗಳು) ಗಂಗಾನದಿಯ ಮೇಲಿನಿಂದ ಅಲಹಾಬಾದ್‌ನಿಂದ ನೈನಿಗೆ ರವಾನಿಸಲಾಗಿತ್ತು. ಈ ಪತ್ರಗಳ ಸಮೂಹದಲ್ಲಿ ಇಂಗ್ಲಂಡಿನ ರಾಜ ಜಾರ್ಜ್ ಬರೆದ ಪತ್ರವೂ ಸೇರಿತ್ತು ಎನ್ನುವುದು ವಿಶೇಷ ಸುದ್ಧಿ.

ಸ್ವಾತಂತ್ರ್ಯಾನಂತರದ ಅಂಚೆ ಸೇವೆಗಳು

ಸ್ವಾತಂತ್ರ್ಯಾನಂತರ ಭಾರತದಲ್ಲಿ ಅಂಚೆ ಸೇವೆಗಳು ದೇಶಾದ್ಯಂತ ಸುಗಮವಾಗಿ ನಡೆಯುತ್ತಿದೆ. ಅಂಚೆ ಕಛೇರಿಗಳು ವಿವಿಧ ರೀತಿಯ ಗ್ರಾಹಕರ ಅನುಕೂಲಕ್ಕೆ ಹೊಂದುವ ವಿವಿಧ ರೀತಿಯ ಸೇವಾ ಸೌಲಭ್ಯಗಳನ್ನು ರೂಪಿಸುತ್ತದೆ. ಭಾರತೀಯ ಅಂಚೆ ಇಲಾಖೆಯು ಆಗಸ್ಟ್ 2011ರಲ್ಲಿ ಕಾಶ್ಮೀರದ ಶ್ರೀ ನಗರದಲ್ಲಿರುವ ದಾಲ್ ಸರೋವರದಲ್ಲಿ ತೇಲುವ ಅಂಚೆ ಕಛೇರಿಯನ್ನು ಉದ್ಘಾಟಿಸಿತು. ಅಂಚೆ ಮತ್ತು ತಂತಿ ಇಲಾಖೆಗಳನ್ನು 1941ರಲ್ಲಿ ಒಂದೇ ಇಲಾಖೆಯಾಗಿ ಮಾಡಿದರೆ, 1ನೇ ಜನವರಿ 1985 ಅವುಗಳನ್ನು ಅಂಚೆ ಇಲಾಖೆ ಮತ್ತು ತಂತಿ ಇಲಾಹೆ ಎಂದು ಪುನರ್ವಿಂಗಡಿಸಲಾಯಿತು.

ಅಂಚೆ ಇಲಾಖೆ

ಪ್ರಸ್ತುತ ಭಾರತೀಯ ಅಂಚೆ ಇಲಾಖೆ ಪ್ರತ್ಯೇಕ ಅಸ್ತಿತ್ವ ಪಡೆದಿದೆ. ಭಾರತೀಯ ಅಂಚೆಯು ಭಾರತ ಸರಕಾರದ ಸಂವಹನ ಮತ್ತು ಮಾಹಿತಿ ತಂತ್ರಜ್ಞಾನ ಮಂತ್ರಿ ಮಂಡಲದ ಭಾಗವಾದ ಅಂಚೆ ವಿಭಾಗದ ಮೇಲುಸ್ತುವಾರಿಯಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಅಂಚೆ ಇಲಾಖೆಯು ಅಂಚೆ ಸೇವಾ ಸಮಿತಿ ಎನ್ನುವ ಶೃಂಗ ಸಮಿತಿಯ ಕೆಳಗೆ ಕರ್ತವ್ಯ ನಿರ್ವಹಿಸುತ್ತಿದೆ. ಅಂಚೆ ಸೇವಾ ಸಮಿತಿಯು ಓರ್ವ ಅಧ್ಯಕ್ಷ ಹಾಗೂ ಆರು ಜನ ಸದಸ್ಯರೊಳಗೊಂಡಿದೆ.

ಈ ಆರು ಜನ ಸದಸ್ಯರು ಇಲಾಖೆಯ ಸಿಬ್ಬಂದಿ ನಿರ್ವಹಣೆ, ಆರ್ಥಿಕ ವ್ಯವಹಾರಗಳು, ತಂತ್ರಜ್ಞಾನ, ಅಂಚೆ ಜೀವ ವಿಮಾ, ಮಾನವ ಸಂಪನ್ಮೂಲ ಅಭಿವೃದ್ಧಿ ಹಾಗೂ ಯೋಜನೆಗಳು ಎನ್ನುವ ಆರು

ವಿಭಾಗಗಳನ್ನು ನೋಡಿಕೊಳ್ಳುತ್ತಾರೆ. ಜಂಟಿ ಕಾರ್ಯದರ್ಶಿ ಹಾಗೂ ಆರ್ಥಿಕ ಸಲಹೆಗಾರ ಅನ್ನುವ ಸಿಬ್ಬಂದಿ ಸಮಿತಿಯ ಖಾಯಂ ಆಹ್ವಾನಿತರಾಗಿದ್ದಾರೆ.

ಪ್ರಸ್ತುತ ಅಂಚೆ ಇಲಾಖೆಯು ಭಾರತ ಸರಕಾರದ ಕಾರ್ಯ ಕರ್ತನಂತೆ ಕೆಲಸಮಾಡುತ್ತದೆ. ಅಂಚೆ ಕಛೇರಿ ಉಳಿತಾಯ ಬ್ಯಾಂಕು ಭಾರತದ ಸಂವಿಧಾನದ ಏಳನೇ ಷೆಡ್ಯೂಲಿನ ಒಕ್ಕೂಟದ ಪಟ್ಟಿಯ ನಂ. 39ರಲ್ಲಿ ಸೇರ್ಪಡೆಯಾಗಿದೆ. ಈ ಇಲಾಖೆಯು ಭಾರತ ಸರಕಾರ ರೂಪಿಸಿದ ವಿವಿಧ ಸೇವಾ ಸೌಲಭ್ಯಗಳನ್ನು ಈ ಕೆಳಗಿನ ಕಾಯಿದೆಗಳನ್ವಯ ನೀಡುತ್ತಿದೆ.

1. ಸರಕಾರೀ ಉಳಿತಾಯ ಬ್ಯಾಂಕ್ ಕಾಯಿದೆ 1873
2. ಸರಕಾರೀ ಉಳಿತಾಯ ಪತ್ರಗಳ ಕಾಯಿದೆ 1959
3. ಸಾರ್ವಜನಿಕ ಭವಿಷ್ಯ ನಿಧಿ ಕಾಯಿದೆ 1968

ಅಂಚೆ ಇಲಾಖೆಯ ಕಾರ್ಯ ನಿರ್ವಹಣಾ ಜಾಲ

ಭಾರತೀಯ ಅಂಚೆ ವಿಭಾಗವನ್ನು 22 ಅಂಚೆ ವಲಯಗಳಾಗಿ ವಿಭಾಗಿಸಲಾಗಿದೆ. ಪ್ರತಿ ಅಂಚೆ ವಲಯಕ್ಕೆ ಓರ್ವ ಮುಖ್ಯ ಅಂಚೆ ಪ್ರಧಾನ ಇದ್ದಾರೆ. ಪ್ರತಿ ವಲಯನ್ನು ಕ್ಷೇತ್ರ ಹಂಚಿಕೆಗಳನ್ನು ಒಳಗೊಂಡ ವಿಭಾಗಳೆಂದು ಕರೆಇಯುವ ಪ್ರಾದೇಶಿಕ ಕ್ಷೇತ್ರಗಳಾಗಿ ಪುನರ್ವಿಂಗಡಿಸಲಾಗಿದೆ. ಪ್ರತಿ ವಿಭಾಗಕ್ಕೆ ಪ್ರಧಾನ ಅಂಚೆ ಅಧಿಕಾರಿ ಇರುತ್ತಾರೆ. ವಲಯ ಹಾಗೂ ಪ್ರಾದೇಶಿಕ ಕ್ಷೇತ್ರಗಳಲ್ಲಿ ಟಪಾಲು ಸರಕು ಡಿಪೊ, ಟಪಾಲು ಮೋಟಾರು ಸೇವೆಗಳು ಇತ್ಯಾದಿ ವಿಭಾಗಗಳಿರುತ್ತವೆ. ಇವುಗಳಲ್ಲಿ ಭಾರತದ ಸೇನಾ ತುಕಡಿಗಳು ಅಂಚೆ ಸೇವೆಗಳ ಸಲುವಾಗಿ ಮೇಲೆ ಹೇಳಿದ 22 ವಲಯಗಳಲ್ಲದೆ ಒಂದು ತಳ ಮಟ್ಟದ ವಲಯವು ಹೆಚ್ಚುವರಿ ಪ್ರಧಾನ ನಿರ್ದೇಶಕರ ಕೈಕೆಳಗೆ ಇದೆ. ಈ ನಿರ್ದೇಶಕರು ಸೇನೆಯ ಮೇಜರ್ ಜನರಲ್ ಶ್ರೇಣಿ ಹೊಂದಿದ್ದಾರೆ.

1–6–1774ಕ್ಕೆ ಅಸ್ತಿತ್ವಕ್ಕೆ ಬಂದ ಈ ಅಂಚೆ ಇಲಾಖೆಯಲ್ಲಿ ಒಟ್ಟು 1,54,979 (31.03.2015) ಅಂಚೆ ಕಛೇರಿಗಳು ಕಾರ್ಯ ನಡೆಸುತ್ತಿವೆ. ಇಲಾಖೆಯು 1,39,102 (19.86 ಶೇ.) ಕಛೇರಿಗಳು ಗ್ರಾಮೀಣ ಪ್ರದೇಶಗಳಲ್ಲಿ ಇದೆ ಹಾಗೂ 4,60,457 (31.03.2015 ರಂದು) ಸಿಬ್ಬಂದಿಗಳಿದ್ದಾರೆ. ಪ್ರಕೃತ ಶೇ. ಎಸ್.ಕೆ. ಸಿನ್ಹ ಅವರು ಪ್ರಧಾನ ನಿರ್ದೇಶಕ ಹಾಗೂ ಕಾರ್ಯದರ್ಶಿ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಆಧುನೀಕರಣ

ಅಂಚೆ ಇಲಾಖೆಯಲ್ಲಿ ಆಧುನಿಕ ತಂತ್ರಜ್ಞಾನ ಅಳವಡಿಸಿಕೊಂಡು ಗಣಕೀಕರಣ ಯೋಜನೆಯನ್ನು ಅನುಷ್ಠಾನಗೊಳಿಸುವ ಕಾರ್ಯ ಮುನ್ನಡೆಯಲ್ಲಿದೆ.

ಅಂಚೆ ಕಛೇರಿಗಳು ನೀಡುವ ಸೇವಾ ಸೌಲಭ್ಯಗಳು

ಅಂಚೆ ಕಛೇರಿಗಳು ಗ್ರಾಹಕರಿಗೆ ನೀಡುವ ಸೇವಾ ಸೌಲಭ್ಯಗಳನ್ನು ಈ ಕೆಳಗೆ ತೋರಿಸಿದಂತೆ ನಾಲ್ಕು ವಿಭಾಗಗಳಾಗಿ ವರ್ಗೀಕರಿಸಬಹುದು.

1. ಅಂಚೆ ಅಥವಾ ಟಪಾಲು ಸೇವೆಗಳು
2. ಆರ್ಥಿಕ ಸೇವೆಗಳು ಅಥವಾ ಹಣಕಾಸು ಸಂಬಂಧೀ ಸೇವೆಗಳು
3. ಚಿಲ್ಲರೆ ಸೇವೆಗಳು
4. ಹೆಚ್ಚುವರಿ ಸವಲತ್ತು ಸೇವೆಗಳು ಅಥವಾ ವಿಶೇಷ ಸೇವೆಗಳು

1. ಅಂಚೆ ಅಥವಾ ಟಪಾಲು ಸೇವಾ ಸೌಲಭ್ಯಗಳು

ಟಪಾಲುಗಳ ಕೋಢೀಕರಣ, ಸಂಸ್ಕರಣ, ವರ್ಗಾವಣೆ ಹಾಗೂ ಬಟವಾಡೆ ಇವು ಅಂಚೆ ಕಛೇರಿಗಳ ಪ್ರಾಥಮಿಕ ಕಾರ್ಯಗಳಾಗಿವೆ. ಸಂದೇಶ ರೂಪದಲ್ಲಿರುವ ಎಲ್ಲಾ ಅಂಚೆ ವಸ್ತುಗಳನ್ನು ಟಪಾಲು ಎಂದು ವರ್ಗೀಕರಿಸಬಹುದು. ಇದರಲ್ಲಿ ಪತ್ರಗಳು, ಅಂಚೆ ಕಾರ್ಡುಗಳು, ಅಂತರ್ದೇಶೀಯ ಪತ್ರಗಳು, ಕಟ್ಟುಗಳು ನೋಂದಾಯಿತ, ಸಾಮಾನ್ಯ ವಿಮೆ ಮಾಡಿದ, ಮೌಲ್ಯ ಪಾವತಿ ವಸ್ತುಗಳ ತ್ವರಿತ ಅಂಚೆ ಇತ್ಯಾದಿಗಳು ಸೇರಿವೆ.

ದೇಶದಲ್ಲಿನ 1,54,879 ಅಂಚೆ ಕಛೇರಿಗಳು 579545 ಟಪಾಲು ಪೆಟ್ಟಿಗೆಗಳ ಮೂಲಕ ಸಂಗ್ರಹಿಸಿ 389 ಸಂಸ್ಕರಣಾ ಅಂಚೆ ಕಛೇರಿಗಳಲ್ಲಿ ಸಂಸ್ಕರಿಸಿ ರಸ್ತೆ, ರೈಲು ಹಾಗೂ ವಿಮಾನಗಳ ಮೂಲಕ ರವಾನಿಸಿ ದೇಶದಾದ್ಯಂತ ಈ ಪತ್ರಗಳನ್ನು ಬಟವಾಡೆ ಮಾಡಲಾಗುತ್ತದೆ.

ರವಾನೆ ಕಟ್ಟುಗಳು: ಟಪಾಲು ಸೇವೆಗಳಲ್ಲಿ ರವಾನೆ ಕಟ್ಟುಗಳ ರವಾನೆ ಹಾಗೂ ಬಟವಾಡೆ ಸೇರಿದೆ. ಸಾಮಾನ್ಯ ಪತ್ರಗಳು, ಸರಕುಗಳು ಹಾಗೂ ಯಾವುದೇ ವಸ್ತುಗಳನ್ನು ರವಾನೆ ಕಟ್ಟುಗಳ ಮೂಲಕ ರವಾನಿಸಿ ಬಟವಾಡೆ ಮಾಡಬಹುದು. ಈ ರವಾನೆ ಕಟ್ಟುಗಳನ್ನು ಟಪ್ಪಾಲು ಪೆಟ್ಟಿಗೆಗಳಿಗೆ ಹಾಕುವುದಿಲ್ಲ ಬದಲಾಗಿ ಅಂಚೆ ಕಛೇರಿಯಲ್ಲಿರುವ ನಿಗದಿತ ಕಿಟಕಿಯಲ್ಲಿ ನೀಡಲಾಗುತ್ತಿದೆ. ಕಟ್ಟುಗಳ ಭಾರ, ಆಕಾರ ಹಾಗೂ ಕಳುಹಿಸಬೇಕಾದ ಸ್ಥಳದ ದೂರ ಇವುಗಳನ್ನು ಪರಿಗಣಿಸಿ ರವಾನೆ ಶುಲ್ಕವನ್ನು ನಿಗದಿಪಡಿಸಲಾಗುತ್ತದೆ.

2. ಆರ್ಥಿಕ ಸೇವೆಗಳು

ಅಂಚೆ ಕಛೇರಿಗಳಲ್ಲಿ ಹಣಕಾಸು ಸಂಬಂಧೀ ಹಲವು ಸೇವಾ ಸೌಲಭ್ಯಗಳು ದೊರೆಯುತ್ತಿವೆ. ತಮ್ಮ ಅನುಕೂಲ ಮತ್ತು ಬೇಡಿಕೆಗಳನ್ನು ಹೊಂದಿಕೊಂಡು ಹೂಡಿಕೆದಾರರು ತಕ್ಕ ಹೂಡಿಕೆಯ

ಅವಕಾಶಗಳನ್ನು ಉಪಯೋಗಿಸಿಕೊಳ್ಳಬಹುದು. ಅಂಚೆ ಕಛೇರಿಯಲ್ಲಿ ಲಭ್ಯವಿರುವ ಆರ್ಥಿಕ ಅಥವಾ ಹಣಕಾಸು ಸಂಬಂಧಿಸಿದ ಉಳಿತಾಯ ಯೋಜನೆಗಳು ಈ ಕೆಳಗಿನಂತಿವೆ.

1. **ಅಂಚೆ ಕಛೇರಿ ಉಳಿತಾಯ ಖಾತೆ**

ಈ ಉಳಿತಾಯ ಯೋಜನೆಯು ಅಂಚೆ ಕಛೇರಿಯು ಒಂದು ಮಹತ್ವವಾದ ಹಾಗೂ ದೇಶದಲ್ಲೇ ಅತ್ಯಂತ ಹಳೆಯದಾದ ಯೋಜನೆಯಾಗಿದೆ. ನಗದು ಮಾತ್ರ ನೀಡಿ ಈ ಖಾತೆಯನ್ನು ತೆರೆಯಬಹುದು. ಈ ಠೇವಣಿಗಳ ಮೇಲೆ 4 ಶೇ. ಬಡ್ಡಿ ಅಂಚೆ ಕಛೇರಿ ನೀಡುತ್ತದೆ. ಈ ಖಾತೆಯಲ್ಲಿ ಕನಿಷ್ಟ ಹೂಡಿಕೆ ರೂ. 20. ಚೆಕ್ ಸೌಲಭ್ಯದೊಡನೆ ಖಾತೆ ತೆರೆಯುವ ಕನಿಷ್ಟ ಠೇವಣಿ ರೂ. 500. ಚೆಕ್ ಸೌಲಭ್ಯ ಪಡೆಯದವರು ಖಾತೆಯಲ್ಲಿ ಯಾವಾಗಲೂ ರೂ. 50 ಹಾಗೂ ಚೆಕ್ ಪಡೆದವರು ಖಾತೆಯಲ್ಲಿ ರೂ. 500 ಕನಿಷ್ಟ ಮೊತ್ತವನ್ನು ಇಟ್ಟಿರಬೇಕು. ಹಣಕಾಸು ವರ್ಷ 2012–13 ರಿಂದ ಈ ಠೇವಣಿ ಮೇಲೆ ಗಳಿಸಿದ ಬಡ್ಡಿ ರೂ. 10,000 ಕ್ಕಿಂತ ಕಡಿಮೆ ಇದ್ದರೆ ಆದಾಯ ತೆರಿಗೆ ಕಟ್ಟಬೇಕಾಗಿಲ್ಲ. ಈ ಠೇವಣಿ ಮೇಲೆ ನಾಮ ನಿರ್ದೇಶನ ಸೌಲಭ್ಯ ಇದೆ. ಒಂದು ಕಛೇರಿಯಲ್ಲಿ ಓರ್ವ ವ್ಯಕ್ತಿ ಒಂದು ಖಾತೆಯನ್ನು ಮಾತ್ರ ಹೊಂದಿರಬಹುದು. ಈ ಠೇವಣಿಯನ್ನು ಅಗತ್ಯವಿದ್ದಲ್ಲಿ ಒಂದು ಅಂಚೆ ಕಛೇರಿಯಿಂದ ಇನ್ನೊಂದಕ್ಕೆ ವರ್ಗಾಯಿಸಬಹುದು. ಅಂಚೆ ಕಛೇರಿಯು ಉಳಿತಾಯ ಯೋಜನೆಗಳಲ್ಲಿ ಉಳಿತಾಯ ಖಾತೆಯ ವಿವಿಧ ವರ್ಗಗಳ ಜನರನ್ನು ಆಕರ್ಷಿಸುವ ಒಂದು ಬಹುಮುಖ್ಯ ಉಳಿತಾಯ ಯೋಜನೆಯಾಗಿದೆ. ಈ ಖಾತೆಯನ್ನು ಒಬ್ಬನೇ ಅಥವಾ ಎರಡು ಜನ ಜಂಟಿಯಾಗಿ ತೆರೆಯಬಹುದು.

2. **ಆವರ್ತ ಠೇವಣಿ ಖಾತೆ**

ಈ ಖಾತೆಯನ್ನು ನಗದು ಅಥವಾ ಚೆಕ್ಕು ನೀಡಿ ಯಾವನೇ ಒಬ್ಬ ಭಾರತೀಯ ತೆರೆಯಬಹುದು. ಈ ಖಾತೆಯಡಿ ಠೇವಣಿಗೆ ಗರಿಷ್ಠ ಮಿತಿ ಇಲ್ಲ. ಖಾತೆಯನ್ನು ರೂ. 10 ರ ಆವರ್ತಗಳಲ್ಲಿ ನೀಡಬೇಕು. ಖಾತೆಗೆ 5 ವರ್ಷ ಅವಧಿ ಇದ್ದರೂ, ಅಗತ್ಯವಿದ್ದಲ್ಲಿ ಹೂಡಿಕೆದಾರರು ಮೂರು ವರ್ಷಗಳ ಬಳಿಕ ಯಾವುದೇ ಸಮಯದಲ್ಲಿ ಹಿಂಪಡೆಯಬಹುದು. ಹೂಡಿಕೆದಾರರು ಒಂದು ಅಂಚೆ ಕಛೇರಿಯಲ್ಲಿ ಎಷ್ಟು ಖಾತೆಗಳನ್ನು ಬೇಕಾದರೂ ತೆರೆಯಬಹುದು. ಈ ಖಾತೆಗಳ ಮೇಲೆ ನಾಮನಿರ್ದೇಶನ ಮತ್ತು ವರ್ಗಾವಣೆ ಸೌಲಭ್ಯವಿರುತ್ತದೆ. ಇದನ್ನು ಒಬ್ಬ ವ್ಯಕ್ತಿ ಇಲ್ಲವೇ ಎರಡು ಜನ ಜಂಟಿಯಾಗಿ ತೆರೆಯಬಹುದು. ಈ ಠೇವಣಿ ಮೇಲೆ 1ನೇ ಏಪ್ರಿಲ್ 2016ರ ಲಾಗ್ಯಾತು 7.4 ಶೇ. (ಮೂರು ತಿಂಗಳಿಗೊಮ್ಮೆ ಅಸಲಿಗೆ ಸೇರಿಸಿ) ಬಡ್ಡಿ ನೀಡಲಾಗುತ್ತದೆ. ಒಂದು

ವರ್ಷದ ನಂತರ ಈ ಠೇವಣಿಯಲ್ಲಿರುವ ಶಿಲ್ಕಿನ 50 ಶೇ. ಮೊತ್ತವನ್ನು ಹಿಂಪಡೆಯಬಹುದು.

3. **ನಿರಖು ಠೇವಣಿ ಖಾತೆ (ಅವಧಿಯ ಠೇವಣಿಗಳು)**

ಈ ಠೇವಣಿಗಳ ಕನಿಷ್ಠ ಮೊತ್ತ ರೂ. 200 ಗರಿಷ್ಟ ಮಿತಿ ಇಲ್ಲ. ಈ ಠೇವಣಿಗಳನ್ನು ಒಂದು, ಎರಡು, ಮೂರು ಮತ್ತು ಐದು ವರುಷಗಳ ಅವಧಿಗೆ ತೆರೆಯಬಹುದು. ಈ ಖಾತೆಗಳ ಮೇಲೆ 1ನೇ ಏಪ್ರಿಲ್ 2016 ರಿಂದ ಈ ಕೆಳಗಿನ ದರದಲ್ಲಿ ಹೂಡಿಕೆದಾರರಿಗೆ ಬಡ್ಡಿ ದೊರೆಯುತ್ತದೆ.

ಒಂದು ವರ್ಷ – 7.1 ಶೇ., ಎರಡು ವರ್ಷಗಳಿಗೆ – 7.2 ಶೇ., ಮೂರು ವರ್ಷ ಅವಧಿಗೆ – 7.4 ಶೇ., 5 ವರ್ಷದ ಅವಧಿ – 7.9 ಶೇ. ಈ ಖಾತೆಯನ್ನು ಓರ್ವ ವ್ಯಕ್ತಿ ಅಥವಾ ಎರಡು ಜನ ಜಂಟಿಯಾಗಿ ತೆರೆಯಬಹುದು. ಆದರೆ ಗುಂಪುಗಳಿಗೆ ಖಾತೆ ತೆರೆಯಲು ಅವಕಾಶವಿಲ್ಲ. ಬಡ್ಡಿ ಹಣವನ್ನು ಖಾತೆಗೆ ಪ್ರತೀ ತಿಂಗಳ ಕೊನೆಗೆ ಜಮಾ ಮಾಡಲಾಗುತ್ತದೆ. ಈ ಖಾತೆಗಳ ಮೇಲೆ ನಾಮ ನಿರ್ದೇಶನದ ಸೌಲಭ್ಯವಿದೆ. ಠೇವಣಿಗಳನ್ನು ಅವಧಿಯ ಕೊನೆಯಲ್ಲಿ ಹಿಂಪಡೆಯಬಹುದು ಅಥವಾ ಇನ್ನೊಂದು ಅವಧಿಗೆ ನವೀಕರಿಸಬಹುದು. ಒಂದು ವರ್ಷದ ಮೊದಲು ಯಾವುದೇ ಸಮಯ ಖಾತೆಯನ್ನು ಮುಚ್ಚಬಹುದು. ನವೀಕರಣದ ಬಗ್ಗೆ ಖಾತೆದಾರನು ತಿಳಿಸದಿದ್ದಲ್ಲಿ ಖಾತೆಗೆ ಹಿಂದಿನ ಅವಧಿಯಷ್ಟೇ ಸಮಯಕ್ಕೆ ತನ್ನಿಂದ ತಾನೇ ನವೀಕರಣಗೊಳ್ಳುತ್ತವೆ.

4. **ಮಾಸಿಕ ಆದಾಯ ಯೋಜನೆ**

ನಿಗದಿತ ಆದಾಯ ತರುವ ಹೂಡಿಕೆದಾರರಿಗೆ ಈ ಯೋಜನೆ ಬಹಳ ತಕ್ಕುದಾಗಿದೆ. ಈ ಠೇವಣಿಯನ್ನು ರೂ. 1500 ರ ಆವರ್ತಗಳಲ್ಲಿ ಹೂಡಬಹುದು. ಗರಿಷ್ಟ ಏಕವ್ಯಕ್ತಿ ಖಾತೆಯಲ್ಲಿ ರೂ. 45 ಲಕ್ಷ ಕನಿಷ್ಟ ರೂ. 1500 ಹಾಗೂ ಜಂಟಿ ಖಾತೆಯಲ್ಲಿ ಗರಿಷ್ಟ ರೂ. 9 ಲಕ್ಷಗಳು. ನಾಮ ನಿರ್ದೇಶನ, ಖಾತಾ ವರ್ಗಾವಣೆ, ಸೌಲಭ್ಯಗಳು ಈ ಖಾತೆಗಳಿಗೆ ಇವೆ. ಈ ಠೇವಣಿಗಳ ಮೇಲೆ 1ನೇ ಏಪ್ರಿಲ್ 2016 ರಿಂದ 7.8 ಶೇ. ಬಡ್ಡಿ ದೊರೆಯುತ್ತದೆ. ಬಡ್ಡಿಯನ್ನು ಪ್ರತಿ ತಿಂಗಳ ಶಿಲ್ಕಿನ ಮೇಲೆ ಲೆಕ್ಕ ಹಾಕಿ ಉಳಿತಾಯ ಖಾತೆಗೆ ಜಮಾ ಮಾಡಲಾಗುತ್ತದೆ. ಇಲ್ಲವೇ ಬಡ್ಡಿಹಣವನ್ನು ಚೆಕ್ ಮೂಲಕ ಹಿಂಪಡೆಯಬಹುದಾಗಿದೆ.

5. **ಹಿರಿಯ ನಾಗರಿಕರ ಉಳಿತಾಯ ಖಾತೆ**

ಈ ಖಾತೆಯು ಅತೀ ಹೆಚ್ಚು ಬಡ್ಡಿ ನೀಡುವ ಖಾತೆಗಳಲ್ಲಿ ಒಂದು. ಈ ಖಾತೆಯನ್ನು 60 ವರ್ಷ ಮೀರಿಯೂ ಯಾವನೇ ಹಿರಿಯ ನಾಗರಿಕನು ರೂ. 1000ದ ಆವರ್ತಗಳಲ್ಲಿ ತೆರೆಯಬಹುದು. ಸ್ವಯಂ ನಿವೃತ್ತಿ ಪಡೆದ 55 ವರ್ಷ ಮೀರಿದ ಹೂಡಿಕೆದಾರರು ಅಥವಾ ನಿವೃತ್ತ ಸೈನಿಕರು ಕೂಡಾ ಈ ಖಾತೆ ತೆರೆಯಬಹುದು. ಈ ಖಾತೆಗಳನ್ನು 5 ವರ್ಷ ಅವಧಿಗೆ ತೆರೆಯಬಹುದು ಹಾಗೂ ಅವಧಿಯ ಕೊನೆಯಲ್ಲಿ ಪುನ: ಮೂರು ವರ್ಷದ ಅವಧಿಗೆ ನವೀಕರಿಸಲು ಅವಕಾಶವಿದೆ. ಈ ಠೇವಣಿಯು ಗರಿಷ್ಠ ಮೊತ್ತ ರೂ. 15 ಲಕ್ಷಗಳು. ಈ ಖಾತೆಯನ್ನು ಏಕವ್ಯಕ್ತಿ ಅಥವಾ ದಂಪತಿಗಳ ಹೆಸರಿನಲ್ಲಿ ಜಂಟಿಯಾಗಿ ತೆರೆಯಬಹುದು. ಬಡ್ಡಿ ಆದಾಯದ ಮೇಲೆ ರೂ. 10,000 ಬಡ್ಡಿ ಹಣದವರೆಗೆ ತೆರಿಗೆ ಇರುವುದಿಲ್ಲ. ಈ ಖಾತೆಗೆ ಕೂಡಾ ನಾಮ ನಿರ್ದೇಶನ, ಖಾತಾ ವರ್ಗಾವಣೆ, ನವೀಕರಣ ಇತ್ಯಾದಿ ಸೌಲಭ್ಯಗಳು ದೊರೆಯುತ್ತವೆ. ಈ ಖಾತೆಯ ಮೇಲೆ 8.6 ಶೇ. ಬಡ್ಡಿ ದೊರೆಯುತ್ತದೆ.

6. **ಸಾರ್ವಜನಿಕ ಭವಿಷ್ಯ ನಿಧಿ**

ಸಾರ್ವಜನಿಕ ಭವಿಷ್ಯ ನಿಧಿ ಒಂದು ಜನಪ್ರಿಯ ಹೂಡಿಕಾ ಆಯ್ಕೆಯಾಗಿದೆ. ಈ ಯೋಜನೆಯಡಿ ಹೂಡಿಕೆದಾರನು ರೂ. 1.5 ಲಕ್ಷ ಹಣವನ್ನು 15 ವರ್ಷದ ಅವಧಿಗೆ ಹೂಡಬಹುದು. ಕನಿಷ್ಠ ಹೂಡಿಕೆ ರೂ. 500. ಈ ಠೇವಣಿ ಮೇಲೆ 8.10 ಶೇ. ಬಡ್ಡಿ ಲೆಕ್ಕ ಹಾಕಿ ವರ್ಷದ ಕೊನೆಗೆ ಠೇವಣಿ ಮೊತ್ತಕ್ಕೆ ಜಮಾ ಮಾಡಲಾಗುತ್ತದೆ. ಈ ಖಾತೆಗೆ ವರ್ಷದಲ್ಲಿ ಏಕ ಕಂತಿನಲ್ಲಿ ಅಥವಾ 12 ಕಂತುಗಳಲ್ಲಿ ಠೇವಣಿ ಇರಿಸಬಹುದು. ಈ ಖಾತೆಯನ್ನು ರೂ. 100ರ ಆರಂಭಿಕ ಠೇವಣಿ ಇಟ್ಟು ತೆರೆಯಬಹುದಾದರೂ ಆವರ್ತ ಕನಿಷ್ಠ ರೂ. 500 ಆಗುವಂತೆ ಜಮಾ ಮಾಡಬೇಕಾಗಿದೆ. ಅವಧಿ ಕೊನೆಯಲ್ಲಿ ಪುನ: 5 ವರ್ಷದ ಅವಧಿಗೆ ನವೀಕರಿಸಬಹುದು. ಠೇವಣಿ ಹಣವನ್ನು 15 ವರ್ಷದ ಮೊದಲು ಹಿಂಪಡೆಯಲು ಅವಕಾಶವಿಲ್ಲ. ಈ ಠೇವಣಿ ಮೇಲಿನ ಬಡ್ಡಿ ಪೂರ್ತಿ ತೆರಿಗೆ ವಿನಾಯಿತಿ ಪಡೆದಿದೆ ಹಾಗೂ ವರ್ಷದಲ್ಲಿ ಜಮಾ ಮಾಡುವ ಹಣ 80ಸಿ ಕಲಮಿನನ್ವಯ ತೆರಿಗೆ ವಿನಾಯಿತಿ ಪಡೆದಿದೆ. ಮೂರನೇ ವರ್ಷದ ನಂತರ ಈ ಠೇವಣಿ ಮೇಲೆ ಸಾಲ ಸೌಲಭ್ಯ ದೊರೆಯುತ್ತದೆ.

7. **ರಾಷ್ಟ್ರೀಯ ಉಳಿತಾಯ ಪತ್ರಗಳು**

ಈ ಯೋಜನೆ ಅನ್ವಯ 5 ವರ್ಷ ಅವಧಿಯು ರಾಷ್ಟ್ರೀಯ ಉಳಿತಾಯ ಪತ್ರಗಳು (VIII ನೀಡಿಕೆ) ದೊರೆಯುತ್ತದೆ. ಈ ಯೋಜನೆಯಲ್ಲಿ ಕನಿಷ್ಟ ಹೂಡಿಕೆ ರೂ. 100.

ಗರಿಷ್ಟ ಮಿತಿ ಇಲ್ಲ. ಈ ಪತ್ರಗಳು ರೂ. 100, ರೂ. 500, ರೂ. 1000, ರೂ. 5,000 ಹಾಗೂ ರೂ. 10000 ಮುಖ ಬೆಲೆಯಲ್ಲಿ ದೊರೆಯುತ್ತದೆ. ಈ ಪತ್ರಗಳನ್ನು ಹೂಡಿಕೆದಾರರು ಐದು ವರ್ಷದ ಅವಧಿಯಲ್ಲಿ ಒಂದು ಸಲ ಮಾತ್ರ ಬೇರೆಯವರಿಗೆ ವರ್ಗಾವಣೆ ಮಾಡಬಹುದು. ಈ ಠೇವಣಿ ಹಾಗೂ ಬಡ್ಡಿಯ ಮೇಲೆ ಕಲಮು80 ಸಿ ಪ್ರಕಾರ ತೆರಿಗೆ ವಿನಾಯಿತಿ ಪಡೆಯಬಹುದು. ಈ ಪತ್ರಗಳ ಮುಖ ಬೆಲೆಯ ಮೇಲೆ 8.1 ಶೇ. ಬಡ್ಡಿ ದೊರೆಯುವುದಾದರೂ ಅವಧಿ ಕೊನೆಗೆ ಅಸಲಿನೊಡನೆ ಹೂಡಿಕೆದಾರರಿಗೆ ನೀಡಲಾಗುತ್ತದೆ. ಠೇವಣಿಯು ಅರ್ಧವಾರ್ಷಿಕ ಶಿಲ್ಕುಮೇಲೆ ಬಡ್ಡಿಯನ್ನು ಲೆಕ್ಕ ಹಾಕಲಾಗುತ್ತದೆ.

8. ರಾಷ್ಟ್ರೀಯ ಉಳಿತಾಯ ಪತ್ರಗಳು (IX ನೀಡಿಕೆ)

ಈ ಉಳಿತಾಯ ಪತ್ರಗಳನ್ನು ನಿಗದಿತ 10 ವರ್ಷಗಳ ಅವಧಿಗೆ ನೀಡಲಾಗಿದೆ.

9. ಕಿಸಾನ್ ವಿಕಾಸ ಪತ್ರಗಳು

10. ಸುಕನ್ಯಾ ಸಮೃದ್ಧಿ ಖಾತೆ

ಈ ಖಾತೆಯನ್ನು ಪ್ರಧಾನ ಮಂತ್ರಿಯವರ ಮಹತ್ವದ 'ಬೇಟಿ ಬಚಾವೋ, ಬೇಟಿ ಪಢಾವೋ' ಆಂದೋಲನದ ಅಂಗವಾಗಿ ರೂಪಿಸಲಾಗಿದೆ. ಈ ಖಾತೆಯನ್ನು ಹೆಣ್ಣು ಮಕ್ಕಳ ಮಗುವಿನ ಹೆತ್ತವರು ಅಥವಾ ಪೋಷಕರು ಮಗುವಿನ ಹೆಸರಿನಲ್ಲಿ ಹುಟ್ಟಿದ ತಾರೀಕಿನಿಂದ 10 ವರ್ಷದ ಒಳಗೆ ಮಾತ್ರ ಪ್ರಾರಂಭಿಸಬಹುದು. ಈ ಯೋಜನೆಯನ್ನು ಹೆಣ್ಣು ಮಕ್ಕಳ ವಿದ್ಯಾಭ್ಯಾಸ ಹಾಗೂ ವಿವಾಹಗಳ ಆರ್ಥಿಕ ಅಡಚಣೆ ನಿರ್ವಹಣೆಗಾಗಿ ಆಯೋಜಿಸಲಾಗಿದೆ. ಈ ಯೋಜನೆಗೆ 1ನೇ ಏಪ್ರಿಲ್ 2016 ರ ಲಾಗ್ಯಾತು 8.6 ಶೇ. ಬಡ್ಡಿಯನ್ನು ನಿಗದಿಪಡಿಸಲಾಗಿದೆ. ಬಡ್ಡಿಯನ್ನು ವರ್ಷದ ಅಂತ್ಯಕ್ಕೆ ಅಸಲಿಗೆ ಜಮಾ ಮಾಡಲಾಗುತ್ತದೆ.

ಈ ಯೋಜನೆಯಡಿ ಹೂಡಬಹುದಾದ ಕನಿಷ್ಟ ಮೊತ್ತ ರೂ. 1000 ಹಾಗೂ ಗರಿಷ್ಟ ಮೊತ್ತ ರೂ. 1,50,000 ಹೆಚ್ಚುವರಿ ಠೇವಣಿಯನ್ನು ರೂ. 100 ರ ಆವರ್ತಗಳಲ್ಲಿ ಮಾಡಬಹುದು. ಈ ಖಾತೆಯನ್ನು ಒಂದು ಹೆಣ್ಣು ಮಗಳ ಹೆಸರಿನಲ್ಲಿ ಒಂದು ಖಾತೆಯನ್ನು ತೆರೆಯಬಹುದು. ಎರಡು ಖಾತೆಗಳನ್ನು ಎರಡು ಹೆಣ್ಣು ಮಕ್ಕಳಿದ್ದರೆ ಮಾತ್ರ ತೆರೆಯಬಹುದಾಗಿದೆ. ಕನಿಷ್ಟ ರೂ. 1000 ವನ್ನು ಒಂದು ಹಣಕಾಸು ವರ್ಷದಲ್ಲಿ ಠೇವಣಿ ಇಡದಿದ್ದರೆ. ಖಾತೆ ನಿಷ್ಕ್ರಿಯವಾಗುತ್ತದೆ. ಪುನ: ಊರ್ಜಿತಗೊಳಿಸಲು ವರ್ಷಕ್ಕೆ ರೂ. 50 ದಂಡ ನೀಡಬೇಕಾಗುತ್ತದೆ. ಹಿಂದಿನ ಹಣಕಾಸು ವರ್ಷದ ಕೊನೆಯಲ್ಲಿ, ಖಾತೆದಾರಳಿಗೆ 18 ವರ್ಷವಾಗಿದ್ದರೆ, ಈ

ಖಾತೆಯಲ್ಲಿರುವ ಮೊತ್ತದ 50 ಶೇ. ವನ್ನು ನಗದೀಕರಿಸಬಹುದು. ಖಾತೆದಾರಳಿಗೆ 21 ವರ್ಷವಾದ ಮೇಲೆ ಖಾತೆಯನ್ನು ಮುಕ್ತಾಯಗೊಳಿಸಬಹುದು. ಖಾತೆದಾರಳಿಗೆ 18 ವರ್ಷವಾಗಿದ್ದರೆ, ಅವಳ ವಿವಾಹದ ಉದ್ದೇಶಕ್ಕೆ ಕೂಡಾ ಖಾತೆಯನ್ನು ಅಂತ್ಯಗೊಳಿಸಬಹುದು.

11. ಜೀವ ವಿಮಾ ಸೌಲಭ್ಯ

ಅಂಚೆ ಕಛೇರಿಗಳು ನೀಡುವ ಜೀವ ವಿಮಾ ಸೌಲಭ್ಯವು ಒಂದು ಪ್ರಮುಖ ಆರ್ಥಿಕ ಸಂಬಂಧೀ ಸೇವೆಯಾಗಿದೆ. ಈ ಸೌಲಭ್ಯವನ್ನು ಅಂಚೆ ಇಲಾಖೆ, ಅಂಚೆ ಜೀವ ವಿಮಾ ಹಾಗೂ ಗ್ರಾಮೀಣ ಅಂಚೆ ಜೀವ ವಿಮಾ ಎನ್ನುವ ಯೋಜನೆ ಅನ್ವಯ ನೀಡುತ್ತದೆ. ಈ ಯೋಜನೆಯಲ್ಲಿ ಅತ್ಯಂತ ಕನಿಷ್ಟ ವಿಮಾ ಕಂತು ಹಾಗೂ ಗರಿಷ್ಟ ಲಾಭಾಂಶ ಗ್ರಾಹಕರಿಗೆ ಬರುವಂತೆ ರೂಪಿಸಲಾಗಿದೆ.

ಅಂಚೆ ಜೀವ ವಿಮಾ ಯೋಜನೆಯಲ್ಲಿ ಪೂರ್ತಿ ಜೀವನ ಭದ್ರತಾ ವಿಮಾ (ಸುರಕ್ಷ), ದತ್ತಿ ಭದ್ರತಾ ವಿಮೆ (ಸಂತೋಷ) ಪರಿವರ್ತನಾಶೀಲ ಪೂರ್ತಿ ಜೀವನ ಭದ್ರತಾ ವಿಮೆ (ಸುವಿಧ) ಜಂಟಿ ಜೀವನ ವಿಮೆ (ಯುಗಳ ಸುರಕ್ಷ) ನಿರೀಕ್ಷಿತ ದತ್ತಿ ಭದ್ರತಾ ವಿಮೆ (ಸುಮಂಗಲ) ಹಾಗೂ ಮಕ್ಕಳ ವಿಮಾ ಎನ್ನುವ ಜೀವ ವಿಮೆ ವಿವಿಧ ಹೆಸರುಗಳಲ್ಲಿ ಲಭ್ಯವಿದೆ.

ಗ್ರಾಮೀಣ ಅಂಚೆ ಜೀವ ವಿಮಾ ಯೋಜನೆಯಲ್ಲಿ ಗ್ರಾಮ ಸುರಕ್ಷ (ಪೂರ್ತಿ ಜೀವನ ಭದ್ರತಾ ವಿಮೆ), ಗ್ರಾಮ ಸಂತೋಷ (ದತ್ತಿ ಭದ್ರತಾ ವಿಮೆ) ಗ್ರಾಮ ಸುವಿಧ (ಪರಿವರ್ತನಾಶೀಲ ಪೂರ್ತಿ ಜೀವನ ಭದ್ರತಾ ವಿಮೆ) ಯುಗಳ ಸುರಕ್ಷ (ಜಂಟಿ ಜೀವನ ವಿಮೆ) ಸುಮಂಗಲ (ನಿರೀಕ್ಷಿತ ದತ್ತಿ ಭದ್ರತಾ ವಿಮೆ) ಹಾಗೂ ಮಕ್ಕಳ ವಿಮೆ ಅನ್ನುವ ವಿವಿಧ ಹೆಸರುಗಳ ಗ್ರಾಮೀಣ ವಿಮಾಕರಾರು ಪತ್ರಗಳು ದೊರೆಯುತ್ತವೆ.

3. ಚಿಲ್ಲರೆ ಸೇವೆಗಳು

ದೇಶಾದ್ಯಂತ ಇರುವ ತನ್ನ ಕಛೇರಿಯ ವಿಶಾಲ ಜಾಲದ ಮೂಲಕ ಅಂಚೆ ಇಲಾಖೆ ಗ್ರಾಹಕರ ಬಿಲ್ಲುಗಳನ್ನು ವಿವಿಧ ಸೇವಾ ಉದ್ದಿಮೆಗಳ ಪರವಾಗಿ ಸ್ವೀಕರಿಸಿ ಸಂಬಂಧಿತ ನಷ್ಟಗಳಿಗೆ ಪಾವತಿಸುತ್ತದೆ. ಚಿಲ್ಲರೆ ಸೇವೆಗಳಲ್ಲಿ ದೂರವಾಣಿ, ವಿದ್ಯುತ್, ಚರ ದೂರವಾಣಿ ಇತ್ಯಾದಿಗಳಿಗೆ ಸಂಬಂಧ ಪಟ್ಟ ಶುಲ್ಕಗಳನ್ನು ಅಂಚೆ ಕಛೇರಿಗಳು ಸ್ವೀಕರಿಸುತ್ತದೆ. ಇದಲ್ಲದೆ, ವಿದೇಶೀ ರಹದಾರಿ ಅರ್ಜಿಗಳು, ರೈಲ್ವೆ, ವಿಮಾನ ಹಾಗೂ ರಸ್ತೆ ಸಾರಿಗೆ ಟಿಕೆಟುಗಳು ಮುಂಗಡ ಕಾದಿರಿಸುವಿಕೆ, ಕರ್ನಾಟಕ ಸಾರ್ವಜನಿಕ ಸೇವಾ ಪ್ರಾಧಿಕಾರದ ಅರ್ಜಿ ವಿತರಣೆ, ಚಿನ್ನದ ನಾಣ್ಯಗಳ ಮಾರಾಟ,

ವಿಶ್ವವಿದ್ಯಾಲಯಗಳಿಗೆ ಸಂಬಂಧಿಸಿದ ಪಾವತಿಗಳು ಇವುಗಳನ್ನು ಅಂಚೆ ಕಛೇರಿಗಳು ನಿರ್ವಹಿಸುತ್ತದೆ.

4. **ಹೆಚ್ಚುವರಿ ಸವಲತ್ತು ಸೇವೆಗಳು ಅಥವಾ ವಿಶೇಷ ಸೇವೆಗಳು**

ಅಂಚೆ ಇಲಾಖೆಯ ವ್ಯಾಪಾರ ಅಭಿವೃದ್ಧಿ ಮತ್ತು ಮಾರುಕಟ್ಟೆ ನಿರ್ದೇಶನಾಲಯವು ಈ ಸೇವೆಗಳನ್ನು ನಿಭಾಯಿಸುತ್ತದೆ. ಈ ನಿರ್ದೇಶನಾಲಯವು 1996ರಲ್ಲಿ ಮಾರುಕಟ್ಟೆ ಮೌಲ್ಯಾಭಿವೃದ್ಧಿ ಸೇರಿದ ಹೆಚ್ಚುವರಿ ಸವಲತ್ತುಗಳನ್ನು ರೂಪಿಸಲು ಮೇಲು ಉಸ್ತುವಾರಿ ಹಾಗೂ ಅಭಿವೃದ್ಧಿ ಪಡಿಸಲು ಸ್ಥಾಪನೆ ಮಾಡಲಾಯಿತು. ಈ ಕೆಳಗೆ ಹೆಚ್ಚುವರಿ ಸವಲತ್ತು ಸೇವೆಗಳ ವಿವರ ಸಂಕ್ಷಿಪ್ತವಾಗಿ ನೀಡಲಾಗಿದೆ.

ತ್ವರಿತ ಅಂಚೆ

ಪತ್ರಗಳ ಹಾಗೂ ಕಟ್ಟುಗಳ ಕ್ಷಿಪ್ರ ರವಾನೆ ಹಾಗೂ ಬಟವಾಡೆಗೆ ಈ ಸೇವೆ ಒದಗಿಸಲಾಗಿದೆ. ಈ ವಸ್ತುಗಳ ಗರಿಷ್ಟ ತೂಕ 35 ಕಿಲೋ ರವಾನಿಸಬೇಕಾದ ವಸ್ತುಗಳ ತೂಕ ಹಾಗೂ ಕಳುಹಿಸಬೇಕಾದ ಊರಿಗೆ ಇರುವ ದೂರ ಇವುಗಳನ್ನು ಗಣನೆಗೆ ತೆಗೆದುಕೊಂಡು ಅಂಚೆ ಶುಲ್ಕವನ್ನು ನಿಶ್ಚಯಿಸಲಾಗುತ್ತದೆ.

ಕ್ಷಿಪ್ರ ರವಾನೆ ಕಟ್ಟುಗಳ ಅಂಚೆ

ಈ ಟಪಾಲುಗಳನ್ನು ಅತ್ಯಂತ ಕ್ಷಿಪ್ರ ವಾಹಕಗಳ ಮೂಲಕ ರವಾನಿಸಿ ಬಟವಾಡೆ ಮಾಡಲಾಗುತ್ತದೆ. ಅರ್ಧ ಕಿಲೋಗ್ರಾಮ್ ತೂಕದಿಂದ ಗರಿಷ್ಟ 35 ಕಿಲೋ ತೂಕದವರೆಗೆ ವಸ್ತುಗಳನ್ನು ರವಾನಿಸಿ ಬಟವಾಡೆ ಮಾಡಲಾಗುತ್ತದೆ.

ಮಾಧ್ಯಮ ಅಂಚೆ

ಈ ಸೌಲಭ್ಯ ರೀತ್ಯಾ, ಯಾವುದೇ ಸರಕಾರಿ ಹಾಗೂ ಖಾಸಗಿ ಸಂಸ್ಥೆಗಳು ತಮ್ಮ ಜಾಹೀರಾತನ್ನು ಅಂಚೆ ಕಾರ್ಡುಗಳಲ್ಲಾಗಲೀ, ಅಂತರ್ದೇಶೀಯ ಪತ್ರಗಳಲ್ಲಾಗಲೀ, ಏರೋಗ್ರಾಮ್‌ಗಳಲ್ಲಾಗಲೀ ಪ್ರಚುರ ಪಡಿಸಬಹುದಾಗಿದೆ.

ಶುಭಾಶಯ ಅಂಚೆ ಸೇವೆ

ಈ ಸೌಲಭ್ಯದಡಿಯಲ್ಲಿ ಅಂಚೆ ಕಛೇರಿಗಳೇ ಅಂಚೆ ಚೀಟಿ ಕೂಡಾ ಅಂಟಿಸಿಸಿದ್ಧಪಡಿಸಿದ ಶುಭಾಶಯ ಪತ್ರಗಳು ಗ್ರಾಹಕರಿಗೆ ದೊರೆಯುತ್ತದೆ. ಕಳುಹಿಸಬೇಕಾದವರ ವಿಳಾಸ ಗ್ರಾಹಕರು ಒದಗಿಸಿದರೆ ರವಾನೆ ಹಾಗೂ ಬಟವಾಡೆ ಕಾರ್ಯವನ್ನು ಅಂಚೆ ಕಛೇರಿ ನಿರ್ವಹಿಸುತ್ತದೆ.

ಸರಕು ಸಾಗಾಣಿಕೆ ಅಂಚೆ

ಸರಕು ಸಾಗಾಣಿಕೆ ಸೇವೆಯಲ್ಲಿ ಅಂಚೆ ಕಛೇರಿಯು ಸರಕುಗಳ ಬೇಡಿಕೆಯಿಂದ ಪೂರೈಕೆವರೆಗೆ ಇರುವ ಎಲ್ಲಾ ಕಾರ್ಯಗಳನ್ನು ನಿರ್ವಹಿಸುತ್ತದೆ. ಸರಕು ಸಂಗ್ರಹಣೆ, ದಾಸ್ತಾನು, ಸಾಗಾಣಿಕೆ ಹಾಗೂ ವಿತರಣೆ ಇವುಗಳನ್ನು ಅಂಚೆ ಕಛೇರಿ ನಿರ್ವಹಿಸುತ್ತದೆ.

ಇ-ಅಂಚೆ ಸೌಲಭ್ಯ

ಇ-ಅಂಚೆ ಸೌಲಭ್ಯದಲ್ಲಿ ಕಳುಹಿಸಬೇಕಾದ ಸಂದೇಶಗಳನ್ನು ಗ್ರಾಹಕನ ಸ್ವಂತ ಕೈಬರಹದಲ್ಲಿ ಪಡೆದು ಅದನ್ನು ಇದ್ದಂತೆಯೇ ತಂತ್ರಜ್ಞಾನದ ಮೂಲಕ ಪರಿಷ್ಕರಿಸಿ ಬೇಕಾದ ವಿಳಾಸದಾರರಿಗೆ ಅಂತರ್ಜಾಲದ ಮೂಲಕ ಕಳುಹಿಸುವ ವ್ಯವಸ್ಥೆಯನ್ನು ಅಂಚೆ ಕಛೇರಿಗಳು ಒದಗಿಸುತ್ತದೆ.

ಅಂಚೆ ಚೀಟಿಗಳ ಪೂರೈಕೆ

ಅಂಚೆ ಚೀಟಿ ಹವ್ಯಾಸವಿರುವ ಗ್ರಾಹಕರಿಗೆ ಹೊಸತಾಗಿ ಬಿಡುಗಡೆಯಾದ ಅಂಚೆ ಚೀಟಿಗಳ ಪೂರೈಕೆಯನ್ನು ಅಂಚೆ ಕಛೇರಿಗಳ ಮೂಲಕ ಪೂರೈಸುತ್ತದೆ.

ಮಾಹಿತಿ ಪೂರೈಕೆ

ಈ ಮೇಲೆ ವಿವರಿಸಿದ ಸೇವೆಗಳಲ್ಲದೆ ಅಂಚೆ ಇಲಾಖೆ ಗುರುತು ಚೀಟಿ ನೀಡಿಕೆ, ವಿಳಾಸ, ಪಿನ್ ಕೋಡ್ ಹುಡುಕಾಟ, ಇತ್ಯಾದಿ ಮಾಹಿತಿಗಳನ್ನು ಒದಗಿಸುತ್ತದೆ.

ಅಂಚೆ ಕಛೇರಿಗಳು ನೀಡುವ ಈ ಎಲ್ಲಾ ಸೇವೆಗಳು ಇಲಾಖೆಯು ಅತ್ಯಂತ ಗ್ರಾಹಕ ಸ್ನೇಹಿಯನ್ನಾಗಿ ಮಾಡಿದೆ.

ಅಧ್ಯಾಯ ೪

ಮಾಹಿತಿ ವಿಶ್ಲೇಷಣೆ

ಅಧ್ಯಾಯ 4

ಮಾಹಿತಿ ಹಾಗೂ ದತ್ತಾಂಶಗಳ ವಿಶ್ಲೇಷಣೆ

ಪೀಠಿಕೆ

ಈ ಅಧ್ಯಯನದಲ್ಲಿ ವಿವಿಧ ಮೂಲಗಳಿಂದ ಮತ್ತು ವಿವಿಧ ರೀತಿಗಳಿಂದ ಸಂಗ್ರಹಿಸಿದ ಮಾಹಿತಿ ಹಾಗೂ ದತ್ತಾಂಶಗಳ ವಿಶ್ಲೇಷಣೆ ಹಾಗೂ ಅರ್ಥ ವಿವರನೆ ನೀಡಲಾಗಿದೆ. ಸಂಗ್ರಹಿಸಿದ ಮಾಹಿತಿಗಳನ್ನು ಕೋಷ್ಟಕಗಳು ಮತ್ತು ನಕ್ಷೆಗಳ ಮೂಲಕ ಪ್ರಸ್ತುತಪಡಿಸಿ ವಿವಿಧ ಸಂಖ್ಯಾ ಶಾಸ್ತ್ರಗಳ ಉಪಕರಣಗಳ ಮೂಲಕ ವಿಶ್ಲೇಷಿಸಿ ದೊರೆತ ಫಲಿತಾಂಶದ ವಿವರಣೆಗಳನ್ನು ಈ ಕೆಳಗೆ ನೀಡಲಾಗಿದೆ.

ವಯಸ್ಸು

ಹೂಡಿಕೆದಾರನ ವಯಸ್ಸು ಅಧ್ಯಯನದ ಪ್ರಮುಖ ವಿಷಯಗಳಲ್ಲಿ ಒಂದಾಗಿದೆ. ಯಾಕೆಂದರೆ ವಯಸ್ಸಿಗನುಗುಣವಾಗಿ ಹೂಡಿಕೆದಾರರ ಆದಾಯದ ವಿನಿಯೋಗದ ಆದ್ಯತೆ ಬದಲಾಗುತ್ತದೆ. ಯುವಕರಿಗೆ ಹೆಚ್ಚು ಖರ್ಚು ಮಾಡುವ ಸ್ವಭಾವವಿದ್ದರೆ ಹಿರಿಯರಿಗೆ ಉಳಿತಾಯದತ್ತ ಒಲವು ತೋರಿಸುತ್ತಾರೆ. ಈ ಕೆಳಗಿನ ಕೋಷ್ಠಕದಲ್ಲಿ ಮಾಹಿತಿದಾರರನ್ನು ವಯಸ್ಸಿಗನುಗುಣವಾಗಿ ವರ್ಗೀಕರಿಸಲಾಗಿದೆ.

ಕೋಷ್ಠಕ 1


ವಯಸ್ಸಿನ ಆಧಾರದಲ್ಲಿ ಮಾಹಿತಿದಾರರ ವರ್ಗೀಕರಣ

ವಯಸ್ಸು	ಮಾಹಿತಿದಾರರ ಸಂಖ್ಯೆ	ಪ್ರತಿಶತ
19 ವರ್ಷಕ್ಕಿಂತ ಕೆಳಗೆ	07	5.8
19 ರಿಂದ 25 ವರ್ಷಗಳು	14	11.6
25ರಿಂದ35 ವರ್ಷಗಳು	52	43.3
35 ರಿಂದ 45 ವರ್ಷಗಳು	39	32.5
45 ರಿಂದ ಹೆಚ್ಚು	08	6.8
ಒಟ್ಟು	**120**	**100.0**

ಆಕರ: ಕ್ಷೇತ್ರ ಸಮೀಕ್ಷೆ

ನಕ್ಷೆ 1

ವಯಸ್ಸಿನ ಆಧಾರದಲ್ಲಿ ಮಾಹಿತಿದಾರರ ವರ್ಗೀಕರಣ



ಈ ಮೇಲಿನ ಕೋಷ್ಟಕದಲ್ಲಿ ಕಾಣುವಂತೆ 52 ಮಹಿಳಾ ಹೂಡಿಕೆದಾರರು (ಶೇ. 43.3) 25–35 ವರ್ಷಗಳ ಶ್ರೇಣಿಯಲ್ಲಿ ಇದ್ದಾರೆ. 39 (32.5 ಶೇ.) ಹೂಡಿಕೆದಾರರು 35–45 ರ ಶ್ರೇಣಿಯಲ್ಲಿ ಇದ್ದಾರೆ. ಎರಡೂ ವರ್ಗಗಳನ್ನು ಪರಿಗಣಿಸಿದರೆ 75.8 ಶೇ. ರಷ್ಟು 25–45 ವರ್ಷಗಳ ಪರಿಧಿಯಲ್ಲಿ ಬರುತ್ತಾರೆ. ಕಾರಣ, 25 ವರ್ಷಗಳಿಂದ ಸ್ಥಿರ ಆದಾಯವು ಪ್ರಾರಂಭವಾಗುತ್ತದೆ. 45 ವರ್ಷಗಳ ವರೆಗೆ ವ್ಯಕ್ತಿಗಳು ಹೆಚ್ಚಿನ ಕುಟುಂಬದ ಖರ್ಚುವೆಚ್ಚಗಳ ಜವಾಬ್ದಾರಿ ಇರುವುದಿಲ್ಲ. ಆದುದರಿಂದ ಈ ವಯಸ್ಸಿನವರು ಉಳಿತಾಯ ಮಾಡುವ ಮನೋಭಾವದವರು ಇರುತ್ತಾರೆ. 45 ವರ್ಷಗಳಿಂದಾಚೆಗೆ ಕುಟುಂಬದ ಜವಾಬ್ದಾರಿ ಹೆಚ್ಚಾಗುತ್ತದೆ. ಉಳಿತಾಯ ಮಾಡುವ ಮಿಗತೆ ಹಣ ಕಡಿಮೆ ಆಗುತ್ತದೆ.

ವಿಶ್ಲೇಷಣೆ: ಈ ಸಮೀಕ್ಷೆಯ ಆಧಾರದಲ್ಲಿ ಹೇಳುವುದಾದರೆ, ಮಹಿಳೆಯರಲ್ಲಿ 25–45 ವಯಸ್ಸಿನ ಶ್ರೇಣಿಯಲ್ಲಿ ಉಳಿತಾಯ ಹೆಚ್ಚಾಗಿರುತ್ತದೆ.

ವಿದ್ಯಾರ್ಹತೆ

ಕೋಷ್ಟಕ 2


ಮಾಹಿತಿದಾರರ ವಿದ್ಯಾರ್ಹತೆ

ವಿದ್ಯಾರ್ಹತೆ	ಮಾಹಿತಿದಾರರ ಸಂಖ್ಯೆ	ಪ್ರತಿಶತ
ಪದವಿಪೂರ್ವ ಮತ್ತು ಕೆಳಗೆ	32	26.7
ಪದವಿ	73	60.8
ಸ್ನಾತಕೋತ್ತರ	12	10.0
ಸ್ನಾತಕೋತ್ತರ ಪದವಿಗಿಂತ ಹೆಚ್ಚು	03	2.5
ಒಟ್ಟು	**120**	**100.0**

ಆಕರ: ಕ್ಷೇತ್ರ ಸಮೀಕ್ಷೆ

ನಕ್ಷೆ 2

ಮಾಹಿತಿದಾರರ ವಿದ್ಯಾರ್ಹತೆ



ಈ ಕೋಷ್ಟಕದಂತೆ, ಈ ಸಮೀಕ್ಷೆಯಲ್ಲಿ ಭಾಗವಹಿಸಿದ ಒಟ್ಟು ಮಹಿಳಾ ಹೂಡಿಕೆದಾರರಲ್ಲಿ 60.8 ಶೇ. (73 ಮಹಿಳೆಯರು) ಪದವಿ ವಿದ್ಯಾರ್ಹತೆಯನ್ನು ಹೊಂದಿದ್ದಾರೆ. ಪದವಿಪೂರ್ವ ಮತ್ತು ಕೆಳಗಿನ ವಿದ್ಯಾಭ್ಯಾಸವನ್ನು 26.7 ಶೇ. (32 ಮಹಿಳೆಯರು) ಪಡೆದಿದ್ದಾರೆ. ಸ್ನಾತಕೋತ್ತರ ಪದವಿ ವಿಷಯದವರು 10 ಶೇ. (12 ಮಹಿಳೆಯರು) ಇದ್ದರೆ ಸ್ನಾತಕೋತ್ತರ ಪದವಿಗಿಂತ ಹೆಚ್ಚು ವಿದ್ಯಾಭ್ಯಾಸ ಹೊಂದಿದವರು ಶೇ. 2.5 (3 ಮಹಿಳೆಯರು) ಮಾತ್ರ.

ವಿಶ್ಲೇಷಣೆ: ಹೆಚ್ಚಿನ ಮಹಿಳಾ ಹೂಡಿಕೆದಾರರು ಪದವಿ ವಿದ್ಯಾಭ್ಯಾಸ ಪಡೆದವರಾಗಿದ್ದಾರೆ. ಸ್ನಾತಕೋತ್ತರ ಮತ್ತು ಅದಕ್ಕಿಂತ ಹೆಚ್ಚಿನ ವಿದ್ಯಾಭ್ಯಾಸ ಪಡೆದವರು ಕಡಿಮೆ ಇರುವುದರಿಂದ ಸಮೀಕ್ಷೆಯಲ್ಲಿಯೂ ಅವರ ಪಾಲು ಕನಿಷ್ಠವಿದೆ.

ವೈವಾಹಿಕ ಮಾಹಿತಿ

ಹೂಡಿಕೆದಾರರ ವೈವಾಹಿಕ ಸ್ಥಿತಿ ಕೂಡಾ ಅವರ ಉಳಿತಾಯದ ಮನೋಭಾವ ನಿಶ್ಚಯಿಸುತ್ತದೆ. ವಿವಾಹಿತ ಮಹಿಳೆಯರು ಹೆಚ್ಚು ಜವಾಬ್ದಾರಿಯಾಗಿರುತ್ತಾರೆ. ಹೊಣೆಯರಿತು ಖರ್ಚು ಮಾಡಿ ಉಳಿತಾಯ ಮಾಡುವ ಸ್ವಭಾವದವರಾಗಿರುತ್ತಾರೆ. ಈ ಕೆಳಗಿನ ಕೋಷ್ಟಕದಲ್ಲಿ ಸಮೀಕ್ಷೆಯಲ್ಲಿ ಭಾಗವಹಿಸಿದ ಮಹಿಳೆ ಹೂಡಿಕೆದಾರರ ವೈವಾಹಿಕ ಮಾಹಿತಿ ನೀಡಲಾಗಿದೆ.

ಕೋಷ್ಟಕ 3


ಮಾಹಿತಿದಾರರ ವೈವಾಹಿಕ ವಿವರ

ವೈವಾಹಿಕ ಸ್ಥಿತಿ	ಮಾಹಿತಿದಾರರ ಸಂಖ್ಯೆ	ಪ್ರತಿಶತ
ವಿವಾಹಿತರು	92	76.7
ಅವಿವಾಹಿತರು	28	23.3
ಒಟ್ಟು	**120**	**100.0**

ಆಕರ: ಕ್ಷೇತ್ರ ಸಮೀಕ್ಷೆ

ನಕ್ಷೆ3

ಮಾಹಿತಿದಾರರ ವೈವಾಹಿಕ ವಿವರ



ಸಮೀಕ್ಷೆಯ ಅಂಕಿ ಸಂಖ್ಯೆಗಳ ಪ್ರಕಾರ ಹೂಡಿಕೆದಾರರಲ್ಲಿ 76.7 ಶೇ. ಅಂದರೆ ಹೆಚ್ಚಿನವರು ವಿವಾಹಿತ ಮಹಿಳೆಯರಾಗಿದ್ದಾರೆ. ಅವಿವಾಹಿತ ಮಹಿಳಾ ಹೂಡಿಕೆದಾರರು ಕೇವಲ 23.3 ಶೇ. ಅಂದರೆ 28 ಮಹಿಳೆಯರು ಮಾತ್ರ.

ವಿಶ್ಲೇಷಣೆ: ವಿವಾಹಿತ ಮಹಿಳೆಯರ ಮೇಲೆ ಕುಟುಂಬ ನಿರ್ವಹಣೆಯ ಹೆಚ್ಚಿನ ಜವಾಬ್ದಾರಿ ಇರುವುದರಿಂದ ಅವರಲ್ಲಿ ಹೆಚ್ಚಾಗಿ ಉಳಿತಾಯದ ಅಭ್ಯಾಸವಿರುತ್ತದೆ. ಅಂಚೆ ಕಛೇರಿಯ ಉಳಿತಾಯ ಯೋಜನೆಗಳಲ್ಲಿ ಹೂಡಿಕೆ ಮಾಡಿದ ಮಹಿಳೆಯರಲ್ಲಿ ಬಹುಪಾಲು ವಿವಾಹಿತರು.

ಉದ್ಯೋಗ

ಹೂಡಿಕೆದಾರರ ಉದ್ಯೋಗಗಳಿಗೂ ಅವರು ಹೂಡುವ ಹೂಡಿಕೆಗಳಿಗೂ ಹತ್ತಿರದ ಸಂಬಂಧವಿದೆ. ವ್ಯಕ್ತಿಯು ಮಾಡುವ ಉದ್ಯೋಗವು ಅವರ ಆದಾಯಕ್ಕೆ ಮೂಲವಾಗಿದೆ ಹಾಗೂ ಆದಾಯವು

ಉಳಿತಾಯದ ಮೂಲ ಸಮೀಕ್ಷೆಗೆ ಒಳಗಾದ ಮಹಿಳಾ ಹೂಡಿಕೆದಾರರ ಉದ್ಯೋಗಗಳ ವಿವರವನ್ನು ಈ ಕೆಳಗಿನ ಕೋಷ್ಟಕ ನೀಡುತ್ತದೆ.

ಕೋಷ್ಟಕ 4


ಮಾಹಿತಿದಾರರ ಉದ್ಯೋಗಗಳ ವಿವರ

ಉದ್ಯೋಗ	ಮಾಹಿತಿದಾರರ ಸಂಖ್ಯೆ	ಪ್ರತಿಶತ
ವ್ಯಾಪಾರ	10	8.3
ಮನೆವಾರ್ತೆ	34	28.3
ಸರಕಾರೀ ಕೆಲಸ	18	15.00
ವ್ಯವಸಾಯ	08	6.7
ಖಾಸಗಿ ಸಂಸ್ಥೆಗಳಲ್ಲಿ ಉದ್ಯೋಗ	41	34.2
ನಿವೃತ್ತ ಉದ್ಯೋಗಿಗಳು	03	2.5
ಇತರ (ಆಯಾ, ಕೂಲಿ ಇತ್ಯಾದಿ)	06	5.0
ಒಟ್ಟು	**120**	**100.0**

ಆಕರ: ಕ್ಷೇತ್ರ ಸಮೀಕ್ಷೆ

ನಕ್ಷೆ4

ಮಾಹಿತಿದಾರರ ಉದ್ಯೋಗಗಳ ವಿವರ



ಅಧ್ಯಯನಕ್ಕೆ ನಡೆಸಿದ ಈ ಸಮೀಕ್ಷೆಯಲ್ಲಿ ಕಂಡು ಬಂದಂತೆ ಹೆಚ್ಚಿನ ಮಹಿಳಾ ಹೂಡಿಕೆದಾರರು ಖಾಸಗಿ ಸಂಸ್ಥೆಯಲ್ಲಿ ಉದ್ಯೋಗಿಗಳು. ಒಟ್ಟು ಸಂಖ್ಯೆಯಲ್ಲಿ ಇವರ ಪಾಲು ಶೇಕಡಾ 34.2 (41 ಮಹಿಳೆಯರು). ನಂತರದ ಸ್ಥಾನ ಗೃಹ ಕೃತ್ಯ ಅಥವಾ ಮನೆಕೆಲಸದಲ್ಲಿ ತೊಡಗಿರುವ ಮಹಿಳೆಯರು. ಇವರ ಪಾಲು 28.3 ಶೇ. (34 ಮಹಿಳೆಯರು). ನಿವೃತ್ತ ಉದ್ಯೋಗಿಗಳು ಕೇವಲ 2.5 ಶೇ. ರಷ್ಟು ಮಾತ್ರ ಇದ್ದಾರೆ.

ವಿಶ್ಲೇಷಣೆ: ಖಾಸಗಿ ಸಂಸ್ಥೆಗಳ ಉದ್ಯೋಗಿಗಳಿಗೆ ಸಂಬಳದ ಆದಾಯ ಸಾಮಾನ್ಯವಾಗಿ ಕಡಿಮೆ ಇರುತ್ತದೆ. ಆದುದರಿಂದ ಅವರಲ್ಲಿ ಉಳಿತಾಯದ ಮನೋಭಾವ ಹೆಚ್ಚು. ಈ ಮಹಿಳೆಯರು ಸಮೀಪದ ಸುಲಭದ ಉಳಿತಾಯ ಅವಕಾಶವನ್ನು ಉಪಯೋಗಿಸುತ್ತಾರೆ. ಆದುದರಿಂದ ಖಾಸಗಿ ಸಂಸ್ಥೆಯ ಉದ್ಯೋಗಿಗಳು ಅಂಚೆ ಕಛೇರಿಯ ಉಳಿತಾಯ ಯೋಜನೆಗಳಲ್ಲಿ ಹೂಡಿಕೆ ಮಾಡುವುದು ಕಂಡು ಬರುತ್ತದೆ.

ಆದಾಯ

ಹೂಡಿಕೆದಾರರ ಆದಾಯವು ಅವರು ಮಾಡುವ ಉಳಿತಾಯದ ಮೇಲೆ ನೇರ ಪರಿಣಾಮ ನೀಡುತ್ತದೆ. ಮಿಗತೆ ಆದಾಯವೇ ಉಳಿತಾಯದ ತಳಪಾಯ ಸಾಮಾನ್ಯವಾಗಿ ಹೆಚ್ಚಿನ ಆದಾಯ ಅಂದರೆ ಹೆಚ್ಚಿನ ಉಳಿತಾಯ. ಈ ಕೆಳಗಿನ ಕೋಷ್ಠಕ ಸಮೀಕ್ಷೆಯಲ್ಲಿ ಭಾಗವಹಿಸಿದ ಮಹಿಳಾ ಹೂಡಿಕೆದಾರರ ಆದಾಯ ವಿವರಗಳನ್ನು ಒದಗಿಸುತ್ತದೆ.

ಕೋಷ್ಠಕ 5


ಹೂಡಿಕೆದಾರ ಮಹಿಳೆಯರ ಆದಾಯದ ವಿವರ

ವಾರ್ಷಿಕ ಆದಾಯ	ಮಾಹಿತಿದಾರರ ಸಂಖ್ಯೆ	ಪ್ರತಿಶತ
ರೂ. 1,00,000 ಕ್ಕಿಂತ ಕೆಳಗೆ	58	48.3
ರೂ. 1,00,000ದಿಂದ 5,00,000 ದ ವರೆಗೆ	44	36.7
ರೂ. 5,00,000 ದಿಂದ ರೂ. 10,00,000 ದ ವರೆಗೆ	13	10.8
ರೂ. 10,00,000 ಕ್ಕಿಂತ ಹೆಚ್ಚು	05	4.2
ಒಟ್ಟು	**120**	**100.0**

ಆಕರ: ಕ್ಷೇತ್ರ ಸಮೀಕ್ಷೆ

ನಕ್ಷೆ5

ಹೂಡಿಕೆದಾರ ಮಹಿಳೆಯರ ಆದಾಯದ ವಿವರ



ಹೆಚ್ಚು ಆದಾಯವಿರುವ ಹೂಡಿಕೆದಾರರ ಉಳಿತಾಯ ಕೂಡಾ ಹೆಚ್ಚು ಆಗಿರುತ್ತದೆ. ಆದರೂ ಇಲ್ಲಿ ರೂ. 10,00,000ಕ್ಕಿಂತ ಹೆಚ್ಚು ಆದಾಯವಿರುವ ಹೂಡಿಕೆದಾರರು ಒಟ್ಟು ಸಮೀಕ್ಷೆಗೊಳಪಟ್ಟ ಮಹಿಳಾ ಹೂಡಿಕೆದಾರರು 4.2 ಶೇ. ಮಾತ್ರ ಕಂಡು ಬರುತ್ತದೆ. ಇವರು ಸ್ನಾತಕೋತ್ತರ ಪದವಿಗಿಂತ ಹೆಚ್ಚಿನ ವಿದ್ಯಾಭ್ಯಾಸ ಪಡೆದ ವೈದ್ಯರು, ಕಾಲೇಜು ಶಿಕ್ಷಕರು ಈ ವರ್ಗಕ್ಕೆ ಸೇರಿ ತೆರಿಗೆ ಉಳಿತಾಯಕ್ಕಾಗಿ ಅಂಚೆ ಕಛೇರಿಯಲ್ಲಿ ಹಣ ಹೀಡಿಕೆ ಮಾಡುವವರು. ಇವರ ಪಾಲು ಕೇವಲ 4.2 ಶೇ. ಮಾತ್ರ ಕಂಡು ಬರುತ್ತದೆ. ಇನ್ನುಳಿದಂತೆ ಹೆಚ್ಚಿನ ಮಹಿಳಾ ಹೂಡಿಕೆದಾರರು ರೂ. 1,00,000 ಕ್ಕಿಂತ ಕಡಿಮೆ ಆದಾಯವಿರುವ, ಖಾಸಗಿ ಸಂಸ್ಥೆಯ ಉದ್ಯೋಗಿಗಳು, ಮನೆ ವಾರ್ತೆ ಉದ್ಯೋಗಿಗಳು ಇತ್ಯಾದಿ ಅನ್ನಬಹುದು. ಈ ಸಮೀಕ್ಷೆಯಲ್ಲಿ 85.0 ಶೇ. ಹೂಡಿಕೆದಾರರು ರೂ. 5,00,000 ಕ್ಕಿಂತ ಕಡಿಮೆ ವಾರ್ಷಿಕ ಆದಾಯದವರು.

ವಿಶ್ಲೇಷಣೆ: ಬಹುಪಾಲು ಮಹಿಳಾ ಹೂಡಿಕೆದಾರರು ರೂ. 1,00,000 ಕ್ಕಿಂತ ಕಡಿಮೆ ಆದಾಯವಿರುವವರು, ಎರಡನೇ ಸ್ಥಾನ ರೂ. 1,00,000 ಮತ್ತು ರೂ. 5,00,000 ವಾರ್ಷಿಕ ಆದಾಯದ ಶ್ರೇಣಿಯಲ್ಲಿರುವ 36.7 ಶೇ. ಮಹಿಳೆಯರು. ಹೆಚ್ಚು ಆದಾಯವಿರುವವರು ಹೆಚ್ಚು ಪ್ರತಿಫಲ ಬರುವ ಶೇರು ಮಾರುಕಟ್ಟೆ, ಖಾಸಗಿ ಹಣಕಾಸು ಸಂಸ್ಥೆಗಳಲ್ಲಿ ಉಳಿತಾಯ ಮಾಡಬಹುದು ಎಂದುಅಭಿಪ್ರಾಯ ಪಡಬಹುದು.

ಹೂಡಿಕೆಯ ಅವಧಿ

ಅಲ್ಪಾವಧಿ ಮತ್ತು ದೀರ್ಘಾವಧಿ ಹೂಡಿಕೆಯ ಆಯ್ಕೆಯು ಹೂಡಿಕೆದಾರರ ಆರ್ಥಿಕ ಅಗತ್ಯಗಳನ್ನು ಅವಲಂಬಿಸಿದೆ. ಸದ್ಯೋಭವಿಷ್ಯದಲ್ಲಿ ಹಣದ ಅಗತ್ಯ ಇರುವವರು ಅಲ್ಪಾವಧಿ ಹೂಡಿಕೆಗಳ ಯೋಜನೆಗಳನ್ನು ಆಯ್ಕೆ ಮಾಡಿದರೆ ದೀರ್ಘ ಕಾಲದ ನಂತರದ ಆರ್ಥಿಕ ಅಗತ್ಯ ಇರುವವರು

ದೀರ್ಘಕಾಲದ ಅವಧಿಯ ಯೋಜನೆಗಳನ್ನು ಆಯ್ಕೆ ಮಾಡುತ್ತಾರೆ. ಈ ಸಮೀಕ್ಷೆಯಲ್ಲಿ ಕಂಡು ಬಂದ ಹೂಡಿಕೆದಾರರ ಹೂಡಿಕೆಗಳ ಅವಧಿಯನ್ನು ಈ ಕೋಷ್ಟಕ ತೋರಿಸುತ್ತದೆ.

ಕೋಷ್ಟಕ 6


ಮಾಹಿಳಾ ಹೂಡಿಕೆದಾರರ ಹೂಡಿಕೆ ಅವಧಿ ಆಯ್ಕೆಗಳು

ಅವಧಿ	ಮಾಹಿತಿದಾರರ ಸಂಖ್ಯೆ	ಪ್ರತಿಶತ
ಅಲ್ಪಾವಧಿ	72	60.00
ದೀರ್ಘಾವಧಿ	48	40.00
ಒಟ್ಟು	**120**	**100.0**

ಆಕರ: ಕ್ಷೇತ್ರ ಸಮೀಕ್ಷೆ

ನಕ್ಷೆ6

ಮಾಹಿಳಾ ಹೂಡಿಕೆದಾರರ ಹೂಡಿಕೆ ಅವಧಿ ಆಯ್ಕೆಗಳು



ಮೇಲಿನ ಕೋಷ್ಟಕದ ಅನ್ವಯ 60.0 ಶೇ. ಮಹಿಳಾ ಹೂಡಿಕೆದಾರರು ಅಲ್ಪಾವಧಿ ಹೂಡಿಕೆಗಳನ್ನು ಆಯ್ಕೆ ಮಾಡುತ್ತಾರೆ. ದೀರ್ಘಾವಧಿಯನ್ನು ಆಯ್ಕೆ ಮಾಡುವವರು ಉಳಿದ 40 ಶೇ. ಮಹಿಳೆಯರು.

ವಿಶ್ಲೇಷಣೆ: ಹೆಚ್ಚಿನ ಮಹಿಳಾ ಹೂಡಿಕೆ ಮಾಹಿತಿದಾರರು ರೂ. 1,00,000 ಕ್ಕಿಂತ ಕಡಿಮೆ ಆದಾಯವಿರುವವರು ಆಗಿದೆ. ಇವರಿಗೆ ಆರ್ಥಿಕ ಅಡಚಣೆಗಳು ಹೆಚ್ಚು. ಈ ವರ್ಗದ ಮಹಿಳೆಯರು ನಿರೀಕ್ಷಿತ ಹಾಗೂ ಅನಿರೀಕ್ಷಿತ ಆರ್ಥಿಕ ಅಡಚಣೆಗಳನ್ನು ನಿಭಾಯಿಸಲು ಉಳಿತಾಯಗಳನ್ನು ಕಡಿಮೆ ಅವಧಿಗೆ ಮಾಡುತ್ತಾರೆ. ದೀರ್ಘಾವಧಿ ಕಾಯಲು ಅವರಲ್ಲಿ ಆರ್ಥಿಕ ಸಾಮರ್ಥ್ಯ ಇರುವುದಿಲ್ಲ. ಆದುದರಿಂದ ಹೆಚ್ಚಿನ ಮಹಿಳಾ ಹೂಡಿಕೆದಾರರು ಅಲ್ಪಾವಧಿ ಉಳಿತಾಯ ಯೋಜನೆಗಳಲ್ಲಿ ಹಣ ತೊಡಗಿಸುತ್ತಾರೆ ಅನ್ನಬಹುದು.

ಹೂಡಿಕೆಯ ಸಂದರ್ಭದಲ್ಲಿ ಗಮನಿಸುವ ವಿಷಯಗಳು

ವಿವಿಧ ಹೂಡಿಕೆದಾರರ ಆದ್ಯತೆಗಳು ಒಂದೇ ರೀತಿಯಲ್ಲಿ ಇರುವುದಿಲ್ಲ. ಕೆಲವರು ಕೇವಲ ಪ್ರತಿಫಲವನ್ನು ನೋಡುತ್ತಾರೆ. ಇವರು ಹೆಚ್ಚಿನ ಪ್ರತಿಫಲಕ್ಕಾಗಿ ಹೆಚ್ಚು ನಷ್ಟ ಭಯವಿರುವ ಹೂಡಿಕೆಗಳನ್ನು ಮಾಡಲು ಸಿದ್ಧರಿರುತ್ತಾರೆ. ಇನ್ನು ಕೆಲವರಿಗೆ ಸುರಕ್ಷಿತ ಯೋಜನೆಗಳೇ ಬೇಕು. ಪ್ರತಿಫಲ ಕಡಿಮೆಯಾದರೂ ಇವರು ಅಂಥ ಯೋಜನೆಗಳಲ್ಲಿಯೇ ಹೂಡಿಕೆ ಮಾಡುತ್ತಾರೆ. ಈ ಸಮೀಕ್ಷೆಯಲ್ಲಿನ ಮಹಿಳೆಯರ ಅಪೇಕ್ಷೆಯನ್ನು ಕೆಳಗಿನ ಕೋಷ್ಟಕ ತೋರಿಸುತ್ತದೆ.

ಕೋಷ್ಟಕ 7


ಹೂಡಿಕೆ ಮಾಡುವಾಗ ಹೂಡಿಕೆದಾರರು ಗಮನಿಸುವ ಸಂಗತಿ

ಗಮನಿಸುವ ವಿಷಯ	ಮಾಹಿತಿದಾರರ ಸಂಖ್ಯೆ	ಪ್ರತಿಶತ
ಪ್ರತಿಫಲ	51	52.6
ತೆರಿಗೆ ಉಳಿತಾಯ	07	05.8
ನಷ್ಟ ಭಯ	18	15
ಕನಿಷ್ಠ ಹೂಡಿಕೆ	26	23.3
ಇತರ	16	13.3
ಒಟ್ಟು	**120**	**100.0**

ಆಕರ: ಕ್ಷೇತ್ರ ಸಮೀಕ್ಷೆ

ನಕ್ಷೆ 7

ಹೂಡಿಕೆ ಮಾಡುವಾಗ ಹೂಡಿಕೆದಾರರು ಗಮನಿಸುವ ಸಂಗತಿ



ಕ್ಷೇತ್ರ ಸಮೀಕ್ಷೆ ತಿಳಿಸುವಂತೆ ಬಹುಪಾಲು ಮಹಿಳಾ ಹೂಡಿಕೆದಾರರು (ಶೇ. 42.5) ಹೂಡಿಕೆಯಿಂದ ಬರುವ ಪ್ರತಿಫಲವನ್ನು ನಿರೀಕ್ಷಿಸುತ್ತಾರೆ. ಇನ್ನು ಕೆಲವು ಮಹಿಳೆಯರು 'ಕ್ರಮಬದ್ಧ ಹೂಡಿಕೆ ವ್ಯವಸ್ಥೆಯಂತೆ ತಿಂಗಳಿಗೆ ಕನಿಷ್ಠ ಹೂಡಿಕೆ ಮಾಡುತ್ತಾರೆ. ಇಂತಹ ಮಹಿಳೆಯರು ದ್ವಿತೀಯ ಸ್ಥಾನದಲ್ಲಿ 23.3 ಶೇ. ಹೊಂದಿದ್ದಾರೆ. ಕನಿಷ್ಠ ಪಾಲು 5.8 ಶೇ. ಇದು ತೆರಿಗೆ ಉಳಿತಾಯ ಉದ್ದೇಶವಿರುವ ಮಹಿಳೆ ಹೂಡಿಕೆದಾರರು.

ವಿಶ್ಲೇಷಣೆ: ಈ ಸಮೀಕ್ಷೆಯಲ್ಲಿ ಭಾಗವಹಿಸಿದ ಮಹಿಳೆಯರು ಸಾಮಾನ್ಯ ಆದಾಯವಿರುವವರು. ಸ್ವಾಭಾವಿಕವಾಗಿಯೇ, ಇವರು ಹೆಚ್ಚಿನ ಪ್ರತಿಫಲ ಅಪೇಕ್ಷಿಸುತ್ತಾರೆ. ಆದುದರಿಮ್ದ ಹೆಚ್ಚಿನ ಮಹಿಳಾ ಹೂಡಿಕೆದಾರರು ಹೂಡಿಕೆಗಳಿಂದ ಹೆಚ್ಚಿನ ಪ್ರತಿಫಲ ನಿರೀಕ್ಷಿಸುತ್ತಾರೆ ಎಂದು ತಿಳಿಯಬಹುದು.

ಉಳಿತಾಯ ಯೋಜನೆಗಳ ಕುರಿತು ತಿಳುವಳಿಕೆ

ಬಹುಪಾಲು ಹೂಡಿಕೆದಾರರಿಗೆ, ಅದರಲ್ಲೂ ಮಹಿಳಾ ಹೂಡಿಕೆದಾರರಿಗೆ ಅಂಚೆ ಕಛೇರಿಯ ಎಲ್ಲಾ ಉಳಿತಾಯ ಯೋಜನೆಗಳ ಕುರಿತು ತಿಳಿದಿಲ್ಲ ಎನ್ನುವುದು ಆಶ್ಚರ್ಯಕರ ಸಂಗತಿಯಾಗಿದೆ. ಅಂಚೆ ಕಛೇರಿಯ ಹಲವಾರು ಉಪಯೋಗೀ ಯೋಜನೆಗಳ ಲಾಭ ಹೂಡಿಕೆದಾರರಿಗೆ ಸಿಗುತ್ತಿಲ್ಲ. ಉದಾಹರಣೆಗೆ ಸರಕಾರದ ಸೂಕ್ತ ಸುರಕ್ಷೆ ಯೋಜನೆ ಇನ್ನೂ ಹೆಚ್ಚಿನವರಿಗೆ ಮಾಹಿತಿ ಇಲ್ಲ.

ಕೋಷ್ಟಕ 8


ಅಂಚೆ ಕಛೇರಿಯ ಉಳಿತಾಯ ಯೋಜನೆಗಳ ಅರಿವು

ಯೋಜನೆ	ತಿಳಿದಿದೆ		ತಿಳಿದಿಲ್ಲ	
	ಮಾಹಿತಿದಾರರ ಸಂಖ್ಯೆ	ಪ್ರತಿಶತ	ಮಾಹಿತಿದಾರರ ಸಂಖ್ಯೆ	ಪ್ರತಿಶತ
ಉಳಿತಾಯ ಠೇವಣಿ	26	21.7	94	78.3
ಕಾಲಾವಧಿ ಠೇವಣಿ	51	42.5	69	97.5
ಆವರ್ತಕ ಠೇವಣಿ	60	50.0	40	50.0
ಕಿಸಾನ್ ವಿಕಾಸ ಪತ್ರ	51	42.5	69	57.5
ಸಾರ್ವಜನಿಕ ಉಳಿತಾಯ ಪತ್ರ	32	26.7	88	63.3
ರಾಷ್ಟ್ರೀಯ ಉಳಿತಾಯ ಪತ್ರ	38	31.7	82	68.3
ಮಾಸಿಕ ಆದಾಯ ಯೋಜನೆ	51	42.5	69	57.5
ಅಂಚೆ ಜೀವ ವಿಮೆ	18	15.0	102	85.0
ಸರಕಾರೀ ಪಿಂಚಣಿದಾರರ ಯೋಜನೆ	16	13.3	114	86.7
ಸುಕನ್ಯಾ ಸುರಕ್ಷ	11	9.2	109	90.6
ಒಟ್ಟು	**120**		**100.0**	

ಆಕರ: ಕ್ಷೇತ್ರ ಸಮೀಕ್ಷೆ

ನಕ್ಷೆ 8

ಅಂಚೆ ಕಛೇರಿಯ ಉಳಿತಾಯ ಯೋಜನೆಗಳ ಅರಿವು



ಇಲ್ಲಿ ಪ್ರಯೋಗಿಸಿದ ಅಂಚೆ ಕಛೇರಿಯ ಉಳಿತಾಯಗಳ ಕುರಿತು ತಿಳುವಳಿಕೆಯು ಬಹು ಆಯ್ಕೆ ಉತ್ತರಕ್ಕೆ ಅವಕಾಶ ಇರುವ ಹೇಳಿಕೆಯಾಗಿದೆ. ಮೇಲಿನ ಕೋಷ್ಟಕದಲ್ಲಿ ಕಾಣುವಂತೆ ಅಂಚೆ ಕಛೇರಿಯು ಬಹು ಮುಖ್ಯ ಉಳಿತಾಯ ಯೋಜನೆ ಕುರಿತು ಕೇವಲ 26 ಹೂಡಿಕೆದಾರರಿಗೆ ಅರಿವು ಇದೆ. ಅಂಕಿ ಸಂಖ್ಯೆಗಳು ತೋರಿಸುವಂತೆ 50.0 ಶೇ. ಮಹಿಳಾ ಹೂಡಿಕೆದಾರರಿಗೆ ಆವರ್ತಕ ಠೇವಣಿ ಬಗ್ಗೆ ತಿಳಿದಿದೆ. ಆದರೆ ಅರಿವು ಇಲ್ಲದವರೂ ಅಷ್ಟೇ ಸಂಖ್ಯೆಯಲ್ಲಿ ಕಾಣಿಸುತ್ತಾರೆ. ಮಹಿಳೆಯರಿಗೆ ಅತ್ಯಂತ ಕನಿಷ್ಠ ತಿಳುವಳಿಕೆ ಇರುವುದು. ಸುಕನ್ಯ ಸುರಕ್ಷ ಯೋಜನೆ, ಪ್ರಧಾನ ಮಂತ್ರಿಯವರ ಬಹು ನಿರೀಕ್ಷಿತ ಯೋಜನೆ ಸಮೀಕ್ಷೆಯ 9.2 ಶೇ. ಮಹಿಳೆಯರಿಗೆ ಮಾತ್ರ ಈ ಯೋಜನೆ ಕುರಿತು ತಿಳುವಳಿಕೆ ಇದೆ.

ವಿಶ್ಲೇಷಣೆ: ಆವರ್ತಿತ ಠೇವಣಿಯ ಕುರಿತು ತಿಳುವಳಿಕೆ ಇರುವ ಹಾಗೂ ತಿಳುವಳಿಕೆ ಇಲ್ಲದ ಮಹಿಳಾ ಹೂಡಿಕೆದಾರರು ಸಮ ಸಮ ಸಂಖ್ಯೆಯಲ್ಲಿ ಇದ್ದಾರೆ. ಹೂಡಿಕೆದಾರರಿಗೆ ಸುಕನ್ಯ ಸುರಕ್ಷ ಯೋಜನೆ ಕುರಿತು ಅತ್ಯಂತ ಕನಿಷ್ಟ ಹೂಡಿಕೆದಾರರಿಗೆ ತಿಳಿದಿದೆ. ಒಟ್ಟಿನಲ್ಲಿ ಪ್ರತೀ ಯೋಜನೆಯ ವಿಷಯದಲ್ಲಿಯೂ ತಿಳಿಯದಿರುವವರ ಸಂಖ್ಯೆ ತಿಳಿದಿರುವವರ ಸಂಖ್ಯೆಗಿಂತ ಜಾಸ್ತಿ ಇದೆ.

ಉಳಿತಾಯ ಯೋಜನೆಗಳ ಮಾಹಿತಿ ಮೂಲಗಳು

ಉಳಿತಾಯ ಯೋಜನೆಯ ಮಾಹಿತಿ ಮೂಲವು ಹೂಡಿಕೆದಾರರ ಮೇಲೆ ತುಂಬಾ ಪರಿಣಾಮ ಬೀರುತ್ತದೆ. ಪತ್ರಿಕಾ ಜಾಹೀರಾತು, ದೂರದರ್ಶನದ ಜಾಹೀರಾತು, ಹಸ್ತ ಪತ್ರಿಕೆ, ಕರಪತ್ರ ಇವು ಎಲ್ಲಾ

ಮಾಧ್ಯಮಗಳಿಗಿಂತ, ಸಂಬಂಧಿಕರು, ಸಹೋದ್ಯೋಗಿಗಳು, ಹಾಗೂ ಗೆಳೆಯರು ಕೊಡುವ ಅಭಿಪ್ರಾಯ ಹೆಚ್ಚು ಪರಿಣಾಮಕಾರಿ. ವಿವಿಧ ಮಾಹಿತಿ ಮೂಲಗಳ ವಿವರವನ್ನು ಈ ಕೆಳಗಿನ ಕೋಷ್ಟಕ ನೀಡುತ್ತದೆ.

ಕೋಷ್ಟಕ 9


ಅಂಚೆ ಕಛೇರಿಯ ಯೋಜನೆಗಳ ಮಾಹಿತಿ ಮೂಲಗಳು

ಮಾಹಿತಿ ಮೂಲ	ಮಾಹಿತಿದಾರರ ಸಂಖ್ಯೆ	ಪ್ರತಿಶತ
ಜಾಹೀರಾತು	32	26.7
ಸಂಬಂಧಿಕರು / ಗೆಳೆಯರು	40	33.3
ಅಂಚೆ ಕಛೇರಿ ಉದ್ಯೋಗಗಳು	14	11.7
ಅಂಚೆ ಕಾರ್ಯಕರ್ತರು	22	18.3
ಸಹೋದ್ಯೋಗಿಗಳು	12	10.0
ಒಟ್ಟು	**120**	**100.0**

ಆಕರ: ಕ್ಷೇತ್ರ ಸಮೀಕ್ಷೆ

ನಕ್ಷೆ9

ಅಂಚೆ ಕಛೇರಿಯ ಯೋಜನೆಗಳ ಮಾಹಿತಿ ಮೂಲಗಳು



ಕೋಷ್ಟಕದಲ್ಲಿ ಕಾಣುವಂತೆ 33.3 ಶೇ. ಹೂಡಿಕೆದಾರರು ತಮ್ಮ ಸಂಬಂಧಿಕರೇ ಗೆಳೆಯರ ಮೂಲಕ ಅಂಚೆ ಕಛೇರಿ ಉಳಿತಾಯ ಯೋಜನೆಗಳ ಮಾಹಿತಿ ಪಡೆದಿರುತ್ತಾರೆ. ಎರಡನೇ ಮುಖ್ಯ ಮಾಹಿತಿ ಮೂಲ ಜಾಹೀರಾತು. ಒಟ್ಟು ಮಹಿಳಾ ಹೂಡಿಕೆದಾರರ 26.7 ಶೇ. ಹೂಡಿಕೆದಾರರು ಯೋಜನೆಗಳ ವಿವರವನ್ನು ಜಾಹೀರಾತುಗಳ ಮೂಲಕ ತಿಳಿದಿದ್ದಾರೆ. ಸಹೋದ್ಯೋಗಿ ಮೂಲವು ಕನಿಷ್ಠ ಪಾಲು 10 ಶೇ. ಪಡೆದಿದೆ.

ವಿಶ್ಲೇಷಣೆ: ಸಂಬಂಧಿಗಳು ಹಾಗೂ ಗೆಳೆಯರು ಅತೀ ಹೆಚ್ಚು ನಂಬಲರ್ಹ ಮೂಲಗಳಾಗಿರುವುದರಿಂದ ಬಹುಪಾಲು ಹೂಡಿಕೆದಾರರು ಇವರಿಂದ ಯೋಜನೆಗಳ ಬಗ್ಗೆ ಮಾಹಿತಿಯನ್ನು ಪಡೆಯುತ್ತಾರೆ.

ಉಳಿತಾಯ ಯೋಜನೆಯಲ್ಲಿ ಹೂಡಿದ ಉದ್ದೇಶ

ಎಲ್ಲಾ ಹೂಡಿಕೆದಾರರ ಹೂಡಿಕೆಯ ಉದ್ದೇಶ ಒಂದೇ ಆಗಿರುವುದಿಲ್ಲ. ಹೂಡಿಕೆಯ ಉದ್ದೇಶವು ಹೂಡಿಕೆದಾರರ ಭವಿಷ್ಯದ ನಿರೀಕ್ಷಿತ ಅನಿರೀಕ್ಷಿತ ಆರ್ಥಿಕ ಅಡಚಣೆಗಳನ್ನು ನಿಭಾಯಿಸುವುದು ಆಗಿರುತ್ತದೆ. ಈ ಕೆಳಗಿನ ಉದ್ದೇಶಗಳು ಕುಟುಂಬದ ಮುಖ್ಯಸ್ಥನಿಗೆ ಅನ್ವಯವಾಗುವಂತೆ ಕಂಡರೂ ಮಹಿಳೆಯರ ಉದ್ದೇಶವೂ ಅದೇ ಆಗಿರುತ್ತದೆ. ಯಾಕೆಂದರೆ ಮಹಿಳೆಯರ ಉಳಿತಾಯವು ಯಜಮಾನನ ಹೂಡಿಕೆಗೆ ಪೂರಕವಾಗಿರುತ್ತದೆ. ಕೆಳಗಿನ ಕೋಷ್ಠಕ ಮಾಹಿತಿದಾರ ಮಹಿಳಾ ಹೂಡಿಕೆದಾರರ ಉಳಿತಾಯದ ಉದ್ದೇಶಗಳನ್ನು ಪರಿಚಯಿಸುತ್ತದೆ.

ಕೋಷ್ಠಕ 10

ಹೂಡಿಕೆದಾರರು ಹೂಡಿಕೆ ಮಾಡುವ ಉದ್ದೇಶ


ಉದ್ದೇಶ	ಶ್ರೇಯಾಂಕ 1	ಶ್ರೇಯಾಂಕ 2	ಶ್ರೇಯಾಂಕ 3	ಶ್ರೇಯಾಂಕ 4	ಶ್ರೇಯಾಂಕ 5	ಶ್ರೇಯಾಂಕ 6	ಗುರುತ್ವ ನೀಡಿದ ಶ್ರೇಯಾಂಕ ಮೊತ್ತ	ಶ್ರೇಯಾಂಕ ಪ್ರತಿಶತ	ಶ್ರೇಯಾಂಕ
1. ತುರ್ತು ಆರ್ಥಿಕ ಅಗತ್ಯ ನಿಭಾಯಿಸಲು	40	42	04	14	16	04	540	18.7	ಐಐ
2. ಕುಟುಂಬದ ಭವಿಷ್ಯದ ಆರ್ಥಿಕ ಅವಶ್ಯಕತೆ ಪೂರೈಸಲು	06	06	26	18	42	22	702	24.3	ಐ
3. ವೈವಾಹಿಕ ಖರ್ಚುಗಳ ವಿಭಜನೆ	22	08	50	20	18	02	470	16.3	ಐಐಐ
4. ನಿರಂತರ ಆದಾಯ	20	04	22	36	04	34	378	13.1	ಗಿಐ
5. ನಿವೃತ್ತ ಜೀವನದ ಭದ್ರತೆಗಾಗಿ	20	32	10	06	06	46	396	13.7	ಗಿ
6. ತೆರಿಗೆ ಹೊರೆಯನ್ನು ಕಡಿಮೆ ಮಾಡಲು	12	28	08	26	34	12	402	13.9	ಐಗಿ
ಒಟ್ಟು	**120**	**120**	**120**	**120**	**120**	**120**	**2888**	**100.0**	

ಆಕರ: ಕ್ಷೇತ್ರ ಸಮೀಕ್ಷೆ

ವಿಶ್ಲೇಷಣೆ: ಶ್ರೇಯಾಂಕ 1 = 6 ಅಂಕಗಳು ಶ್ರೇಯಾಂಕ 2 = 5 ಅಂಕಗಳು. ಶ್ರೇಯಾಂಕ 3 = 4 ಅಂಕಗಳು ಶ್ರೇಯಾಂಕ 4 = 3 ಅಂಕಗಳು ಶ್ರೇಯಾಂಕ 5 = 2 ಅಂಕಗಳು, ಶ್ರೇಯಾಂಕ 6 = 1 ಅಂಕಗಳು.

ನಕ್ಷೆ 10

ಹೂಡಿಕೆದಾರರು ಹೂಡಿಕೆ ಮಾಡುವ ಉದ್ದೇಶ



ಮೇಲೆ ಕಾಣುವ ಅಂಕಿ ಸಂಖ್ಯೆಗಳ ಪ್ರಕಾರ ಕುಟುಂಬದ ಅವಶ್ಯಕತೆಗಳನ್ನು ಪೂರೈಸಲು ಹೂಡಿಕೆಯ ಪ್ರಪ್ರಥಮ ಉದ್ದೇಶವಾಗಿದೆ. ಮಾಹಿತಿದಾರರು ಇದಕ್ಕೆ ಪ್ರಥಮ ಶ್ರೇಯಾಂಕ ನೀಡಿದ್ದಾರೆ. ಇದರ ಗುರುತ್ವ ನೀಡಿದ ಶ್ರೇಯಾಂಕದ ಪ್ರತಿಶತ 24.3 ಕಂಡುಬರುತ್ತದೆ. ಎರಡನೇ ಮುಖ್ಯ ಉದ್ದೇಶ ತುರ್ತು ಆರ್ಥಿಕ ಅಗತ್ಯತೆ ನಿಭಾವಣೆ. ಇದಕ್ಕೆ ಎರಡನೇ ಶ್ರೇಯಾಂಕ ನೀಡಿಕೆಯಾಗಿ 18.7 ಶೇ. ಗುರುತ್ವ ನೀಡಿದ ಶ್ರೇಯಾಂಕ ಪ್ರತಿಶತ ಪಡೆದಿದೆ. ಕೊನೆಯ ಶ್ರೇಯಾಂಕ ನಿರಂತರ ಆದಾಯ ಆರನೇ ಸ್ಥಾನದಲ್ಲಿ ಇದ್ದು 13.1 ಗುರುತ್ವ ನೀಡಿದ ಶ್ರೇಯಾಂಕ ಪ್ರತಿಶತ ಪಡೆದಿದೆ.

ವಿಶ್ಲೇಷಣೆ: ಸ್ವಾಭಾವಿಕವಾಗಿಯೇ ಮಹಿಳೆಯರು ಕುಟುಂಬದ ಜವಾಬ್ದಾರಿಯನ್ನು ಪರ್ಯಾಯವಾಗಿ ವಹಿಸುತ್ತಿರುವುದರಿಂದ ಕುಟುಂಬದ ಭವಿಷ್ಯದ ಆರ್ಥಿಕ ಅವಶ್ಯಕತೆಗಳನ್ನು ಪೂರೈಸಲು ಅವರು ಉಳಿತಾಯ ಮಾಡುತ್ತಾರೆ ಎಂದು ಸಮೀಕ್ಷೆ ತಿಳಿಸುತ್ತದೆ.

ಮಾಹಿತಿದಾರರು ಹೂಡಿಕೆ ಮಾಡಿದ ಯೋಜನೆಗಳು

ಅಂಚೆ ಕಛೇರಿ ಉಳಿತಾಯ ಯೋಜನೆಗಳು ಹಾಗೂ ಮಹಿಳಾ ಹೂಡಿಕೆದಾರರ ಅನಿಸಿಕೆಗಳು ಒಂದೇ ನಾಣ್ಯದ ಎರಡು ಮುಖಗಳು. ಯಾಕೆಂದರೆ ಹೂಡಿಕೆ ಪ್ರಕ್ರಿಯೆಯು ಮಹಿಳಾ ಹೂಡಿಕಾದಾರರ ಅನಿಸಿಕೆಗಳ ಮೇಲೆ ನಿಂತಿದೆ. ಸಮೀಕ್ಷೆಯಲ್ಲಿ ಕಂಡುಬಂದಂತೆ. ಮಾಹಿತಿದಾರರು ಹಣ ಮಾಡಿದ ಉಳಿತಾಯ ಯೋಜನೆಗಳನ್ನು ಕೆಳಗಿನ ಕೋಷ್ಟಕದಲ್ಲಿ ಕಾಣಿಸಲಾಗಿದೆ.

ಕೋಷ್ಟಕ 11


ಮಾಹಿತಿದಾರರು ಹೂಡಿಕೆ ಮಾಡಿದ ಯೋಜನೆಗಳು

ಯೋಜನೆಗಳು	ಮಾಹಿತಿದಾರರ ಸಂಖ್ಯೆ	ಪ್ರತಿಶತ
ಉಳಿತಾಯ ಠೇವಣಿ	22	18.3
ಕಾಲಾವಧಿ ಠೇವಣಿ	38	31.7
ಆವರ್ತಕ ಠೇವಣಿ	60	50.0
ಕಿಸಾನ್ ವಿಕಾಸ ಪತ್ರ	16	13.3
ರಾಷ್ಟ್ರೀಯ ಉಳಿತಾಯ ಪತ್ರ	46	38.3
ಸಾರ್ವಜನಿಕ ಭವಿಷ್ಯ ನಿಧಿ	08	6.7
ಮಾಸಿಕ ಆದಾಯ ಯೋಜನೆ	54	45.0
ಅಂಚೆ ಜೀವ ವಿಮೆ	14	11.7
ಸರಕಾರೀ ಪಿಂಚಣಿದಾರರ ಠೇವಣಿ	12	10.0
ಸುಕನ್ಯ ಸುರಕ್ಷ	26	21.7
ಒಟ್ಟು	**120**	**100.0**

ಆಕರ: ಕ್ಷೇತ್ರ ಸಮೀಕ್ಷೆ

ನಕ್ಷೆ11

ಮಾಹಿತಿದಾರರು ಹೂಡಿಕೆ ಮಾಡಿದ ಯೋಜನೆಗಳು



ಹೂಡಿಕೆದಾರರು ಪ್ರಸ್ತುತ ಹೂಡಿಕೆ ಮಾಡಿದ ಯೋಜನೆಗಳು ಬಹು ಆಯ್ಕೆ ಪ್ರಕ್ರಿಯೆಯ ಉತ್ತರವಿರುವ ಪ್ರಶ್ನೆ. ಏಕೆಂದರೆ ಇಲ್ಲಿ ಓರ್ವ ಮಹಿಳಾ ಹೂಡಿಕೆದಾರರು ಒಂದಕ್ಕಿಂತ ಹೆಚ್ಚು ಯೋಜನೆಗಳಲ್ಲಿ ಹೂಡಿಕೆ ಮಾಡುವ ಅವಕಾಶ ಇದೆ.

ಮೇಲೆ ಕಾಣಿಸಿದ ಕೋಷ್ಟಕದ ಅನುಸಾರ ಆವರ್ತಕ ಯೋಜನೆಯಲ್ಲಿ ಹೂಡಿಕೆ ಮಾಡಿದ ಮಹಿಳೆಯರ ಸಂಖ್ಯೆ 69 (50.9 ಶೇ.) ಇರುವುದು ಕಾಣಿಸುತ್ತದೆ. ಹೂಡಿಕೆಯಲ್ಲಿ ನಂತರದ ಸ್ಥಾನವನ್ನು ಮಾಸಿಕ ಆದಾಯ ಯೋಜನೆಯು 45.0 ಶೇ. (54 ಮಹಿಳೆಯರು) ಪಡೆದಿದೆ. ಸಾರ್ವಜನಿಕ ಅಭಿವೃದ್ಧಿ ನಿಧಿ ಮೇಲೆ ಹೂಡಿಕೆ ಕನಿಷ್ಠವಾಗಿದ್ದು 6.7 ಶೇ. ಪಾಲು ಪಡೆದಿದೆ.

ವಿಶ್ಲೇಷಣೆ: ಹೆಚ್ಚಿನ ಮಹಿಳಾ ಹೂಡಿಕೆದಾರರು ಆವರ್ತ ಠೇವಣಿಯನ್ನು ಮೆಚ್ಚಿ ಅದರಲ್ಲಿ ಹೂಡಿಕೆ ಮಾಡಿದ್ದಾರೆ. ಬಹು ನಿರೀಕ್ಷಿತ ಸುಕನ್ಯ ಸುರಕ್ಷದ ಮೇಲೆ 21.7 ಶೇ. ಹೂಡಿಕೆದಾರರು ಹಣ ಹೂಡಿದ್ದಾರೆ.

ಪಕ್ವವಾದ ಠೇವಣಿ ಹಣದ ವಿನಿಯೋಗ

ಪಕ್ವವಾದ ಯೋಜನೆಯ ಠೇವಣಿಯನ್ನು ಹೂಡಿಕೆದಾರರು ವಿನಿಯೋಗಿಸುವ ಆಯ್ಕೆಯು ಯೋಜನೆಗಳ ಜನಪ್ರಿಯತೆಯನ್ನು ಸೂಚಿಸುತ್ತದೆ. ಹೂಡಿಕೆದಾರರಿಗೆ ಯೋಜನೆಗಳ ಹಾಗೂ ಅವುಗಳ ನಿರ್ವಹಣೆ ಕುರಿತು ಸಮಾಧಾನ ಇದ್ದರೆ. ಹೂಡಿಕೆಯನ್ನು ಅವಧಿ ಮುಗಿದಾಗ ಅದೇ ಯೋಜನೆಯಲ್ಲಿ ಮುಂದುವರಿಸುತ್ತಾರೆ ಅಥವಾ ಅದೇ ಅಂಚೆ ಕಛೇರಿಯು ಇನ್ನೊಂದು ಯೋಜನೆಯಲ್ಲಿ ತೊಡಗಿಸುತ್ತಾರೆ. ಒಂದು ಪಕ್ಷ ಅವರಿಗೆ ಆ ಸಮಯದಲ್ಲಿ ಹಣದ ಅಗತ್ಯವಿದ್ದು ಠೇವಣಿಯನ್ನು ಹಿಂಪಡೆದರೆ ಹೊಸದಾಗಿ ಯೋಜನೆಯನ್ನು ಪ್ರಾರಂಭಿಸಬಹುದು. ಉದಾಹರಣೆಗೆ ಆವರ್ತ ಯೋಜನೆಯ ಹಣವನ್ನು ಅವಧಿಗೆ ಮುನ್ನವೇ ಪಡೆದು ಇನ್ನೊಂದು ಹೊಸ ಆವರ್ತ ಯೋಜನೆಯನ್ನು ಪ್ರಾರಂಭಿಸಬಹುದು. ಕೆಳಗೆ ತೋರಿಸಿದ ಕೋಷ್ಟಕದಲ್ಲಿ ಅವಧಿ ಮುಗಿದ ಠೇವಣಿಯು ಪುನರ್ವಿನಿಯೋಗವನ್ನು ತೋರಿಸಲಾಗಿದೆ.

ಕೋಷ್ಟಕ 12


ಠೇವಣಿ ಹಣದ ಪುನರ್ ವಿನಿಯೋಗ

ಪುನರ್ ವಿನಿಯೋಗ	ಮಾಹಿತಿದಾರರ ಸಂಖ್ಯೆ	ಪ್ರತಿಶತ
ನವೀಕರಣ	26	21.7
ಅದೇ ಅಂಚೆ ಕಛೇರಿಯ ಇತರ ಯೋಜನೆಗಳಲ್ಲಿ ಹೂಡಿಕೆ	54	45.0
ಆ ಅಂಚೆ ಕಛೇರಿಯ ಹೊರತು ಬಾಹ್ಯ ಸಂಸ್ಥೆಗಳಲ್ಲಿ ಹೂಡಿಕೆ	18	15.0
ಹೂಡಿಕೆ ಹಿಂಪಡೆತ	22	18.3
ಒಟ್ಟು	**120**	**100.0**

ಆಕರ: ಕ್ಷೇತ್ರ ಸಮೀಕ್ಷೆ

ನಕ್ಷೆ 12

ಠೇವಣಿ ಹಣದ ಪುನರ್ ವಿನಿಯೋಗ



ಸಮೀಕ್ಷೆಯಿಂದ ತಿಳಿಯುವುದೇನೆಂದರೆ 45.0 ಶೇ. ಹೂಡಿಕೆದಾರರು ಅವಧಿ ಪೂರೈಸಿದ ಠೇವಣಿಗಳನ್ನು ಅಂಚೆ ಕಛೇರಿಯ ಇತರ ಯೋಜನೆಗಳಲ್ಲಿ ಹೂಡಲು ಇಷ್ಟಪಡುತ್ತಾರೆ. 18.3 ಶೇ. ಹೂಡಿಕೆದಾರರು ಠೇವಣಿ ಮೊತ್ತವನ್ನು ಹಿಂಪಡೆಯಲು ಬಹಸುತ್ತಾರೆ. 21.7 ಶೇ. ಹೂಡಿಕೆದಾರರು ನವೀಕರಣ ಮಾಡಲು ಇಚ್ಛಿಸುತ್ತಾರೆ.

ವಿಶ್ಲೇಷಣೆ: ಬಹುಪಾಲು ಹೂಡಿಕೆದಾರರು ಅದೇ ಕಛೇರಿಯ ಇತರ ಯೋಜನೆಗಳಲ್ಲಿ ಹೂಡಿಕೆಯನ್ನು ಮುಂದುವರಿಸಲು ಬಯಸುವುದರಿಂದ ಅಂಚೆ ಕಛೇರಿಯ ಹೂಡಿಕೆಗಳು ಹೂಡಿಕೆದಾರರಿಗೆ ತೃಪ್ತಿಯನ್ನು ತಂದಿದೆ ಎಂದು ತಿಳಿಯಬಹುದು. ಮಾಹಿತಿದಾರರೊಡನೆ ನಡೆಸಿದ ಸಂವಾದದಲ್ಲಿ ಮಹಿಳಾ ಹೂಡಿಕೆದಾರರು ತಿಳಿಸಿದಂತೆ ಠೇವಣಿಯ ಹಿಂಪಡೆತ ಆ ಕಾಲದ ಅಡಚಣೆಯನ್ನು ನಿಭಾಯಿಸಬೇಕಾದ ಒತ್ತಡವೇ ಹೊರತು, ಕಛೇರಿಯು ಯೋಜನೆಗಳ ಮೇಲಿನ ಅಸಂತೃಪ್ತಿಯ ಕಾರಣಕ್ಕಾಗಿ ಅಲ್ಲ.

ಮಾಸಿಕ ಹೂಡಿಕೆಯ ಮೊತ್ತ

ಮಹಿಳಾ ಹೂಡಿಕೆದಾರರು ಪ್ರತಿ ತಿಂಗಳೂ ಯೋಜನೆಗಳಲ್ಲಿ ಹೂಡುವ ಮೊತ್ತ ಅವರವರ ಆರ್ಥಿಕ ಸಾಮರ್ಥ್ಯವನ್ನು ಅವಲಂಬಿಸಿದೆ. ಹೆಚ್ಚು ಆದಾಯವಿರುವವರು ಹೆಚ್ಚು ಹೂಡಿಕೆ ಮಾಡುತ್ತಾರೆ ಎನ್ನುವುದು ಎಲ್ಲಾ ಕಾಲದಲ್ಲೂ ಸತ್ಯವಲ್ಲ. ಯಾಕೆಂದರೆ ಹೂಡಿಕೆಯನ್ನು ಆದಾಯಕ್ಕಿಂತಲೂ ಮಿಗತೆ ಮೊತ್ತದ ಮೇಲೆ ನಿರ್ಧರಿತವಾಗುತ್ತದೆ. ಕೆಳಗಿನ ಕೋಷ್ಟಕ ಹೂಡಿಕೆಯ ಮೊತ್ತವನ್ನು ತೋರಿಸುತ್ತದೆ.

ಕೋಷ್ಟಕ 13


ಮಾಹಿತಿದಾರರ ಮಾಸಿಕ ಹೂಡಿಕೆ ಮೊತ್ತ

ಹೂಡಿಕೆ	ಮಾಹಿತಿದಾರರ ಸಂಖ್ಯೆ	ಪ್ರತಿಶತ
ರೂ. 1,000 ಕ್ಕಿಂತ ಕಡಿಮೆ	57	47.5
ರೂ. 1,000 ದಿಂದ ರೂ. 3,000 ವರೆಗೆ	32	26.7
ರೂ. 3,000 ದಿಂದ ರೂ. 6,000 ವರೆಗೆ	22	18.3
ರೂ. 6,000 ಕ್ಕಿಂತ ಹೆಚ್ಚು	09	07.5
ಒಟ್ಟು	**120**	**100.0**

ಆಕರ: ಕ್ಷೇತ್ರ ಸಮೀಕ್ಷೆ

ನಕ್ಷೆ 13

ಮಾಹಿತಿದಾರರ ಮಾಸಿಕ ಹೂಡಿಕೆ ಮೊತ್ತ



ಈ ಅಧ್ಯಯನವು ವಿಷದಪಡಿಸುವಂತೆ, 47.5 ಶೇ. ಮಹಿಳೆಯರು ರೂ. 1,000 ಕ್ಕಿಂತ ಕಡಿಮೆ ಮೊತ್ತವನ್ನು ಪ್ರತಿ ತಿಂಗಳು ಹೂಡಿಕೆ ಮಾಡುತ್ತಾರೆ. ನಂತರದ ಮಾಸಿಕ ಹೂಡಿಕೆ ಮೊತ್ತ ರೂ. 1,000 ದಿಂದ ರೂ. 3,000 ತೊಡಗಿಸುವವರ ಶ್ರೇಣಿಯಲ್ಲಿ 26.7 ಶೇ. ಮಹಿಳೆಯರು ಇದ್ದಾರೆ. ಅಂದರೆ ಬಹುಪಾಲು 74.2 ಶೇ. ಮಹಿಳೆಯರು ಪ್ರತಿ ತಿಂಗಳು ರೂ. 3,000 ವರೆಗೆ ಉಳಿತಾಯ ಯೋಜನೆಗಳಲ್ಲಿ ತೊಡಗಿಸುತ್ತಾರೆ. ರೂ. 6,000 ತೊಡಗಿಸುವವರ ಸಂಖ್ಯೆ ಕೇವಲ 9 (7.5 ಶೇ.) ಮಾತ್ರ ಇದೆ.

ವಿಶ್ಲೇಷಣೆ:ಈ ಸಮೀಕ್ಷೆಯಲ್ಲಿ ಭಾಗವಹಿಸಿದ ಮಹಿಳೆಯರ ಆದಾಯ ಕಡಿಮೆ ಇರುವುದರಿಂದ, ಉಳಿತಾಯ ಕೂಡಾ ಸಾಮಾನ್ಯವಾಗಿ ಕಡಿಮೆಯೇ ಇರುತ್ತದೆ. ಆದುದರಿಂದ ಬಹುಪಾಲು ಮಹಿಳೆಯರು ತಿಂಗಳಿಗೆ ರೂ. 1,000 ಕ್ಕಿಂತ ಕಡಿಮೆ ಹಣವನ್ನು ಉಳಿತಾಯ ಯೋಜನೆಗಳಲ್ಲಿ ಹೂಡುತ್ತಾರೆ.

ರೂ. 6,000 ಕ್ಕಿಂತ ಹೆಚ್ಚಿಗೆ ಹೂಡುವವರು ತೆರಿಗೆ ಉಳಿತಾಯ ಯೋಜನೆಗಳ ಲಾಭ ಪಡೆಯುವವರು ಎಂದು ಊಹಿಸಬಹುದು.

ಹೂಡಿಕೆದಾರರಿಗೆ ಕಛೇರಿಯೊಡನೆ ವ್ಯವಹಾರ ಸಂಪರ್ಕ ಅವಧಿ

ಹೂಡಿಕೆದಾರರಿಗೆ ಅಂಚೆ ಕಛೇರಿಯೊಡನೆ ವ್ಯವಹಾರ ಸಂಬಂಧ ಸಂಪರ್ಕದ ಅವಧಿ ಅಂಚೆ ಕಛೇರಿಯ ಯೋಜನೆಗಳ ಜನಪ್ರಿಯತೆ ಹಾಗೂ ಸಿಬ್ಬಂದಿಗಳ ಸೇವಾ ಗುಣ ಮಟ್ಟವನ್ನು ಸೂಚಿಸುತ್ತದೆ. ದೀರ್ಘದಿಂದ ಸಂಪರ್ಕ ಅವಧಿ ಗ್ರಾಹಕರ ತೃಪ್ತಿಗೆ ಮಾಪಕವಾಗಿದೆ.

ಕೋಷ್ಟಕ 14


ಹೂಡಿಕೆದಾರ – ಅಂಚೆ ಕಛೇರಿ ಸಂಪರ್ಕ ಅವಧಿ

ಅವಧಿ	ಮಾಹಿತಿದಾರರ ಸಂಖ್ಯೆ	ಪ್ರತಿಶತ
2 ವರ್ಷಕ್ಕಿಂತ ಕಡಿಮೆ	41	34.2
2 ರಿಂದ 5 ವರ್ಷಗಳು	58	48.3
5 ರಿಂದ 10 ವರ್ಷಗಳು	17	14.2
10 ವರ್ಷಗಳಿಗಿಂತ ಹೆಚ್ಚು	04	03.3
ಒಟ್ಟು	**120**	**100.0**

ಆಕರ: ಕ್ಷೇತ್ರ ಸಮೀಕ್ಷೆ

ನಕ್ಷೆ14

ಹೂಡಿಕೆದಾರ – ಅಂಚೆ ಕಛೇರಿ ಸಂಪರ್ಕ ಅವಧಿ



ಅಧ್ಯಯನದ ಸಮೀಕ್ಷೆಯಲ್ಲಿ ಕಾಣುವಂತೆ, 48.3 ಶೇ. ಹೂಡಿಕೆದಾರರು 2 ರಿಂದ 5 ವರ್ಷಗಳ ಅವಧಿಯ ಸಂಪರ್ಕದಲ್ಲಿ ಇರುವವರು ನಂತರದ ಸ್ಥಾನ 2000 ಕಡಿಮೆ ವರ್ಷಗಳ ಸಂಪರ್ಕದಲ್ಲಿ

ಇರುವವರು (ಶೇ. 34.2). ದೀರ್ಘಕಾಲದ 10 ವರ್ಷಗಳ ಅವಧಿ ಕೇವಲ 3.3 ಶೇ. ಮಹಿಳಾ ಹೂಡಿಕೆದಾರರ ವ್ಯವಹಾರ ಸಂಪರ್ಕ.

ವಿಶ್ಲೇಷಣೆ: ಬಹುಪಾಲು ಮಾಹಿತಿದಾರರು ಅಲ್ಪಾವಧಿ ಹೂಡಿಕೆದಾರರು ಆ ಕಾರಣದಿಂದ ಅಂಚೆ ಕಛೇರಿಯೊಡನೆ ಹೆಚ್ಚಿನ ಹೂಡಿಕೆದಾರರು ಕಡಿಮೆ ಅವಧಿ ವ್ಯವಹಾರ ಸಂಬಂಧೀ ಸಂಪರ್ಕವನ್ನು ಹೊಂದಿದ್ದಾರೆ.

ಹೂಡಿಕೆಯ ಪರ್ಯಾಯ ಅವಕಾಶಗಳು

ಇಂದು ಹೂಡಿಕೆದಾರರಿಗೆ, ಅಂಚೆ ಉಳಿತಾಯ ಯೋಜನೆಗಳಲ್ಲಿ ಹತ್ತು ಹಲವು ಪರ್ಯಾಯ ಹೂಡಿಕೆಯ ಅವಕಾಶಗಳು ಲಭ್ಯವಿದೆ. ರಾಷ್ಟ್ರೀಕೃತ ಬ್ಯಾಂಕುಗಳು, ಖಾಸಗಿ ಬ್ಯಾಂಕುಗಳು, ಹಣಕಾಸು ಸಂಸ್ಥೆಗಳೂ ಸೇರಿದಂತೆ ಈ ಅವಕಾಶಗಳ ಕುರಿತು ಹೂಡಿಕೆದಾರರ ಅಭಿಪ್ರಾಯವನ್ನು ಈ ಕೆಳಗಿನ ಕೋಷ್ಟಕ ನೀಡುತ್ತದೆ.

ಕೋಷ್ಟಕ 15

ವಿವಿಧ ಹೂಡಿಕಾ ಅವಕಾಶಗಳ ಕುರಿತು ಮಾಹಿತಿದಾರರ ಅಭಿಪ್ರಾಯ

ಅವಕಾಶಗಳು	ಆದ್ಯತೆ ಶ್ರೇಯಾಂಕ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧. ಅಂಚೆ ಕಛೇರಿ ಉಳಿತಾಯ ಯೋಜನೆಗಳು	01	54	45.0
೨. ರಾಷ್ಟ್ರೀಕೃತ ಬ್ಯಾಂಕುಗಳು	02	42	35.0
೩. ಇತರ ಖಾಸಗಿ ಬ್ಯಾಂಕುಗಳು	03	11	9.2
೪. ವಿಮಾ ಯೋಜನೆಗಳು	04	04	3.3
೫. ಶೇರು ಮಾರುಕಟ್ಟೆ	05	06	5.0
೬. ಖಾಸಗಿ ಹಣಕಾಸು ಸಂಸ್ಥೆಗಳು	06	03	2.5
ಒಟ್ಟು		**120**	**100.0**

ಆಕರ: ಕ್ಷೇತ್ರ ಸಮೀಕ್ಷೆ

ಮೇಲಿನ ಕೋಷ್ಟಕದಂತೆ, ಮಹಿಳಾ ಹೂಡಿಕೆದಾರರು ಅಂಚೆ ಕಛೇರಿ ಉಳಿತಾಯ ಯೋಜನೆಯಲ್ಲಿ ಹೂಡಿಕೆಗಳಿಗೆ ಪ್ರಥಮ ಆದ್ಯತೆ ನೀಡಿರುತ್ತಾರೆ. 45.5 ಶೇ. ಮಹಿಳಾ ಹೂಡಿಕೆದಾರರು ಅಂಚೆ ಕಛೇರಿಯಲ್ಲಿ ಹಣ ಹೂಡಲು ಬಯಸುತ್ತಾರೆ. ಭದ್ರತೆ, ಸರಕಾರೀ ನಿಯಂತ್ರಣ, ಸ್ಥಳೀಯರೇ ಆದ ಸಿಬ್ಬಂದಿ, ವ್ಯವಹಾರಗಳಲ್ಲಿ ಪಾರದರ್ಶತ್ವ, ಕಡಿಮೆ ವಂಚನೆ ಪ್ರಕರಣಗಳು ಇತ್ಯಾದಿ ಅಂಚೆ ಕಛೇರಿ ಉಳಿತಾಯಕ್ಕೆ ಪ್ರಥಮ ಸ್ಥಾನ ನೀಡಲು ಇವರನ್ನು ಪ್ರೇರೇಪಿಸಿದೆ.

ಕೋಷ್ಟಕ 16


ಅಂಚೆ ಕಛೇರಿ ಯೋಜನೆಗಳಿಗೆ ಆದ್ಯತೆ ನೀಡಲು ಕಾರಣಗಳು

ಕಾರಣ	ಶ್ರೇಯಾಂಕ 1	ಶ್ರೇಯಾಂಕ 2	ಶ್ರೇಯಾಂಕ 3	ಶ್ರೇಯಾಂಕ 4	ಶ್ರೇಯಾಂಕ 5	ಶ್ರೇಯಾಂಕ 6	ಶ್ರೇಯಾಂಕ 7	ಗುರುತ್ವ ನೀಡಿದ ಶ್ರೇಯಾಂಕ ಮೊತ್ತ	ಶ್ರೇಯಾಂಕ ಪ್ರತಿಶತ	ಶ್ರೇಯಾಂಕ
೧.ಠೇವಣಿಗಳ ಭದ್ರದೆ, ಅಂಚೆ ಕಛೇರಿಗಳ ಮೇಲೆ ನಂಬಿಕೆ	15	25	15	31	17	09	08	531	15.8	ಐ
೨.ಹಾಲಿ ಖಾತೆದಾರರು ಹೊಸ ಗ್ರಾಹಕರನ್ನು ಪರಿಚಯಿಸಬೇಕಾಗಿಲ್ಲ	27	12	15	16	17	15	18	499	14.9	ಐಗಿ
೩.ಸಿಬ್ಬಂಧಿಯ ಉತ್ತಮ ಸೇವಾ ಗುಣಮಟ್ಟ	22	15	22	19	21	15	06	529	15.7	ಐಐಐ
೪.ಯೋಜನಾ ವೈವಿಧ್ಯತೆ	12	19	18	21	15	18	17	470	14.0	ಗಿ
೫.ನಿಯಮಗಳಲ್ಲಿ ಹೊಂದಾಣಿಕೆ	18	12	13	13	25	21	18	450	13.4	ಗಿಐ
೬.ದೇಶದಾದ್ಯಂತ ಏಕರೂಪೀ ಯೋಜನೆಗಳು	18	22	25	12	22	12	09	450	13.4	ಐಐ
೭.ತೆರಿಗೆ ಕಡಿತ ಸೌಲಭ್ಯ	08	15	12	08	03	30	44	351	10.4	ಗಿಐಐ
ಒಟ್ಟು	**120**	**120**	**120**	**120**	**120**	**120**		**2888**	**100.0**	

ಆಕರ: ಕ್ಷೇತ್ರ ಸಮೀಕ್ಷೆ

ನಕ್ಷೆ16

ಅಂಚೆ ಕಛೇರಿ ಯೋಜನೆಗಳಿಗೆ ಆದ್ಯತೆ ನೀಡಲು ಕಾರಣಗಳು



ಸಮೀಕ್ಷೆ ಫಲಿತಾಂಶವನ್ನು ಅವಲೋಕಿಸಿದಾಗ ಮಹಿಳಾ ಹೂಡಿಕೆದಾರರು ಭದ್ರತೆ, ಅಂಚೆ ಕಛೇರಿಗಳ ಮೇಲಿನ ನಂಬಿಕೆ ಇವುಗಳು ಅಂಚೆ ಕಛೇರಿ ಯೋಜನೆಗಳಲ್ಲಿ ಹೂಡಿಕೆ ಮಾಡುವುದಕ್ಕೆ ಕಾರಣ ಎಂದು ತಿಳಿಸುತ್ತದೆ. ಪ್ರಥಮ ಸ್ಥಾನ ಈ ಕಾರಣಕ್ಕೆ ನೀಡಿದ ಮಹಿಳೆಯರ ಪಾಲು 5.8 ಗುರುತ್ವ ನೀಡಿದ

ಶ್ರೇಯಾಂಕ ಪ್ರತಿಶತ ದೇಶದಾದ್ಯಂತ ಇರುವ ಏಕರೂಪೀ ಯೋಜನೆಗಳಿಗೆ ದ್ವಿತೀಯ ಸ್ಥಾನ ದೊರೆತಿದೆ. ಕನಿಷ್ಠ ಸ್ಥಾನ ತೆರಿಗೆ ಕಡಿತ ಸೌಲಭ್ಯವಾಗಿದೆ.

ವಿಶ್ಲೇಷಣೆ: ಭದ್ರತೆ, ಅಂಚೆ ಕಛೇರಿಯ ಮೇಲಿನ ನಂಬಿಕೆ ಈ ಕಾರಣಕ್ಕಾಗಿ ಹೂಡಿಕೆದಾರರು ಅಂಚೆ ಕಛೇರಿಯ ಯೋಜನೆಗಳಲ್ಲಿ ಹೂಡಿಕೆ ಮಾಡಲು ಬಯಸುತ್ತಾರೆ.

ಅಂಚೆ ಕಛೇರಿಯ ಯೋಜನೆಗಳ ಕುರಿತು ಅಭಿಪ್ರಾಯ

ಉಳಿತಾಯ ಯೋಜನೆಗಳ ವಿವಿಧ ಸೇವೆಗಳ ನಿರ್ವಹಣೆ ಕುರಿತು ಹೂಡಿಕೆದಾರರು ಅಭಿಪ್ರಾಯ ಹೂಡಿಕೆದಾರರನ್ನು ಆಕರ್ಷಿಸುವ ಪ್ರಕ್ರಿಯೆಯಲ್ಲಿ ಮುಖ್ಯ ಪಾತ್ರ ವಹಿಸುತ್ತದೆ. ಒಂದು ರೀತಿಯಲ್ಲಿ ಇವು ಸಿಬ್ಬಂದಿಯವರ ಸೇವಾಗುಣ ಮಟ್ಟವನ್ನು ಪ್ರತಿಫಲಿಸುತ್ತದೆ.

ಕೋಷ್ಟಕ 17


ಯೋಜನೆಗಳ ಕುರಿತು ಹೂಡಿಕೆದಾರರ ಅಭಿಪ್ರಾಯ

ಅಭಿಪ್ರಾಯ	ಬಲವಾದ ಸಮ್ಮತಿ		ಸಮ್ಮತಿ		ತಟಸ್ಥ		ಅಸಮ್ಮತಿ		ಬಲವಾದ ಅಸಮ್ಮತಿ		ಒಟ್ಟು	
	ಸಂಖ್ಯೆ	ಪ್ರತಿಶತ	ಸಂಖ್ಯೆ	ಪ್ರತಿಶತ	ಸಂಖ್ಯೆ	ಪ್ರತಿಶತ	ಸಂಖ್ಯೆ	ಪ್ರತಿಶತ	ಸಂಖ್ಯೆ	ಪ್ರತಿಶತ	ಸಂಖ್ಯೆ	ಪ್ರತಿಶತ
1. ಉಳಿತಾಯ ಯೋಜನೆಗಳ ಹೂಡಿಕೆ ಅವಧಿ ಪೂರೈಸಿದ ಕೂಡಲೇ ಮೊತ್ತವನ್ನು ಮರುಪಾವತಿ ಮಾಡಿರುತ್ತಾರೆ	20	16.7	16	13.3	32	26.7	36	30.0	16	13.3	120	100.0
2. ಉಳಿತಾಯಕ್ಕೆ ಅಂಚೆ ಕಛೇರಿಯಿಂದ ಪ್ರೋತ್ಸಾಹ ಸಿಕ್ಕಿದೆ	18	15.0	14	11.7	28	23.3	40	33.3	20	16.7	120	100.0
3. ಹೂಡಿಕೆಯು ತೆರಿಗೆ ಉಳಿತಾಯಕ್ಕೆ ಸಹಕಾರಿ ಆಗಿದೆ	16	13.3	14	11.7	28	23.3	38	31.7	24	20.0	120	100.0
4. ಅಂಚೆ ಕಛೇರಿ ಉಳಿತಾಯ ಯೋಜನೆಗಲು ಜೀವನಕ್ಕೆ ಭದ್ರತೆ ಒದಗಿಸಿದೆ	14	11.7	18	15.0	30	25.0	36	30.0	22	18.3	120	100.0

ಆಕರ: ಕ್ಷೇತ್ರ ಸಮೀಕ್ಷೆ

ನಕ್ಷೆ 17

ಯೋಜನೆಗಳ ಕುರಿತು ಹೂಡಿಕೆದಾರರ ಅಭಿಪ್ರಾಯ



ಅವಧಿ ಪೂರ್ಯೆಸಿದ ಠೇವಣಿಯ ತಕ್ಷಣ ಮರುಪಾವತಿ

ಅವಧಿ ಪೂರ್ಯೆಸಿದ ಕೂಡಲೇ ಠೇವಣಿ ಮೊತ್ತವನ್ನು ಮರು ಪಾವತಿ ಮಾಡಿದ್ದಾರೆ ಎನ್ನುವ ಹೇಳಿಕೆಗೆ 30.0 ಶೇ. ಹೂಡಿಕೆದಾರರು ಅಸಮ್ಮತಿ ವ್ಯಕ್ತ ಪಡಿಸಿದ್ದಾರೆ. ಆದರೆ ಹೇಳಿಕೆಗೆ ಬಲವಾದ ಸಮ್ಮತಿಯನ್ನು 16.7 ಶೇ. ಮತ್ತು ಸಮ್ಮತಿಯನ್ನು 13.3 ಶೇ. ಹೂಡಿಕೆದಾರರು ತಿಳಿಸಿದ್ದಾರೆ. ಹೇಳಿಕೆಗೆ ತಟಸ್ಥ ಅಭಿಪ್ರಾಯವನ್ನು 26.7 ಶೇ. ಹೂಡಿಕೆದಾರರು ತಿಳಿಸಿದ್ದಾರೆ.

ವಿಶ್ಲೇಷಣೆ: ಈ ಹೇಳಿಕೆ ಬಗ್ಗೆ ಅಸಮ್ಮತಿ ಮತ್ತು ಬಲವಾದ ಅಸಮ್ಮತಿ ವ್ಯಕ್ತ ಪಡಿಸಿದ ಹೂಡಿಕೆದಾರರು ಒಟ್ಟು ಪಾಲು 43.3 ಶೇ. ಒಟ್ಟಿನಲ್ಲಿ ಠೇವಣಿ ಅವಧಿ ಮುಗಿದ ಕೂಡಲೇ ಮರುಪಾವತಿ ಮಾಡಿದ್ದಾರೆ ಎನ್ನುವುದನ್ನು ಹೆಚ್ಚಿನವರು ವಿರೋಧಿಸಿದ್ದಾರೆ.

ಅಂಚೆ ಕಛೇರಿಯು ಉಳಿತಾಯವನ್ನು ಪ್ರೋತ್ಸಾಹಿಸಿದೆ

ಅಧ್ಯಯನದ ಪ್ರಕಾರ, 'ಉಳಿತಾಯಕ್ಕೆ ಅಂಚೆ ಕಛೇರಿಯ ಪ್ರೋತ್ಸಾಹ ಸಿಕ್ಕಿದೆ' ಎನ್ನುವ ಹೇಳಿಕೆಗೆ 15.0 ಶೇ. ಮಹಿಳೆಯರು ಬಲವಾದ ಸಮ್ಮತಿ ಸೂಚಿಸಿದರೆ 16.7 ಶೇ. ಬಲವಾದ ಅಸಮ್ಮತಿ ಸೂಚಿಸಿದ್ದಾರೆ. ಈ ಹೇಳಿಕೆಯ ವಿರುದ್ಧ, ಅಂದರೆ ಅಸಮ್ಮತಿ ಮತ್ತು ಬಲವಾದ ಅಸಮ್ಮತಿ ಪಾಲು 50.0 ಶೇ. ಇದೆ. ಬಲವಾದ ಸಮ್ಮತಿ ಮತ್ತು ಸಮ್ಮತಿಯ ಪಾಲು 26.7 ಶೇ. ಮಾತ್ರ.

ವಿಶ್ಲೇಷಣೆ: ಉಳಿತಾಯ ಪ್ರಕ್ರಿಯೆಗೆ ಅಂಚೆ ಕಛೇರಿಯು ಹೆಚ್ಚಿನ ಪ್ರೋತ್ಸಾಹ ಸಿಗಲಿಲ್ಲ ಎನ್ನುವುದು ಹೆಚ್ಚಿನ ಮಹಿಳಾ ಹೂಡಿಕೆದಾರರ ಅಭಿಪ್ರಾಯವಾಗಿದೆ.

ತೆರಿಗೆ ಉಳಿತಾಯಕ್ಕೆ ಸಹಕರಿಸಿದೆ

'ತೆರಿಗೆ ಉಳಿತಾಯಕ್ಕೆ ಸಹಕಾರಿ' ಎನ್ನುವ ಹೇಳಿಕೆಗೆ ಬಲವಾದ ಸಮ್ಮತಿ 13.3 ಶೇ. ಇದ್ದರೆ ಸಮ್ಮತಿ ಪ್ರಮಾಣ 11.7 ಶೇ. ಆದರೆ ಬಲವಾದ ಅಸಮ್ಮತಿ 20.0 ಶೇ. ಹಾಗೂ ಅಸಮ್ಮತಿ 31.7 ಆಗಿದೆ. ಅಂದರೆ ಒಟ್ಟು ಅಸಮ್ಮತಿ 51.7 ಶೇ. ಹಾಗೂ ಸಮ್ಮತಿ 25.0 ಶೇ. ಇದೆ.

ವಿಶ್ಲೇಷಣೆ: ತೆರಿಗೆ ಉಳಿತಾಯಕ್ಕೆ ಸಹಕಾರಿ ಎನ್ನುವ ಹೇಳಿಕೆಗೆ ಬಹುಪಾಲು ಹೂಡಿಕೆದಾರರು ಸಮ್ಮತಿಸಲಿಲ್ಲ.

ಜೀವನಕ್ಕೆ ಭದ್ರತೆ

ಜೀವನಕ್ಕೆ ಭದ್ರತೆ ಒದಗಿಸುವುದು ಎನ್ನುವುದು ಅಂಚೆ ಕಛೇರಿಯಲಿ ಹೂಡಿಕೆ ಮಾಡುವ ಉದ್ದೇಶಗಳಲ್ಲಿ ಒಂದು. ಅಂಚೆಯೇ "ಅಂಚೆ ಉಳಿತಾಯ ನಿಮ್ಮ ಜೀವನಕ್ಕೆ ಭದ್ರತೆ ಒದಗಿಸಿದೆ' ಎನ್ನುವ ಹೇಳಿಕೆಯನ್ನು ಒಟ್ಟು 48.3 ಶೇ. ಮಹಿಳಾ ಹೂಡಿಕೆದಾರರು ಒಪ್ಪಿಲ್ಲ. ಇದರಲ್ಲಿ 18.3 ಶೇ. ಬಲವಾದ ಅಸಮ್ಮತಿ ಸೂಚಿಸಿದರೆ, 30.0 ಶೇ. ಅಸಮ್ಮತಿ ವ್ಯಕ್ತಪಡಿಸಿದ್ದಾರೆ. ಬಲವಾದ ಸಮ್ಮತಿ ಹಾಗೂ ಸಮ್ಮತಿ ಪ್ರಮಾಣ ಒಟ್ಟಿಗೆ 26.7 ಶೇ. ದಷ್ಟೇ ಇದೆ.

ವಿಶ್ಲೇಷಣೆ: ಜೀವನಕ್ಕೆ ಭದ್ರತೆ ಒದಗಿಸಿದ ಬಗ್ಗೆ ಹೆಚ್ಚಿನ ಮಹಿಳಾ ಹೂಡಿಕೆದಾರರ ಸಮ್ಮತಿ ಇಲ್ಲ.

ಹೂಡಿಕೆದಾರರು ಅನುಭವಿಸಿದ ತೊಂದರೆ ತೊಡಕುಗಳು

ಯಾವುದೇ ವಿಷಯದಲ್ಲಿ ಪದ ವಿರೋಧ ಅಭಿಪ್ರಾಯಗಲು ಸಾಮಾನ್ಯ. ಅಂತೆಯೇ ಅಂಚೆ ಕಛೇರಿಯ ಹೂಡಿಕೆಗಲು ಹೂಡಿಕೆದಾರರಿಗೆ ಕೆಲವು ಅನುಕೂಲಗಳಿದ್ದರೂ, ವ್ಯವಹಾರದಲ್ಲಿ ಕೆಲವು ಅನಾನುಕೂಲತೆಗಳು, ತೊಂದರೆಗಳ ತೊಡಕುಗಳು ಇವುಗಳನ್ನು ಅನುಭವಿಸಿದ್ದಾರೆ. ಕೆಳಗೆ ಕಾಣಿಸಿದ ಕೋಷ್ಟಕವು ಈ ತೊಂದರೆಗಳ ವಿವರ ನೀಡುತ್ತದೆ.

ಕೋಷ್ಟಕ 18


ಹೂಡಿಕೆದಾರರು ಅನುಭವಿಸಿದ ತೊಂದರೆ, ತೊಡಕುಗಳು

ಅಭಿಪ್ರಾಯ	ಬಲವಾದ ಸಮ್ಮತಿ		ಸಮ್ಮತಿ		ತಟಸ್ಥ		ಅಸಮ್ಮತಿ		ಬಲವಾದ ಅಸಮ್ಮತಿ		ಒಟ್ಟು	
	ಸಂಖ್ಯೆ	ಪ್ರತಿಶತ	ಸಂಖ್ಯೆ	ಪ್ರತಿಶತ	ಸಂಖ್ಯೆ	ಪ್ರತಿಶತ	ಸಂಖ್ಯೆ	ಪ್ರತಿಶತ	ಸಂಖ್ಯೆ	ಪ್ರತಿಶತ	ಸಂಖ್ಯೆ	ಪ್ರತಿಶತ
೧. ಅತಿಯಾದ ನಿಯಮಾವಳಿ	24	20.0	30	25.0	26	21.7	22	18.3	18	15.0	120	100.0
೨. ಪರಿಷ್ಕರಣೆಯಲ್ಲಿ ಕಾಲಹರಣ	18	15.0	38	31.7	24	20.0	16	13.3	24	20.0	120	100.0
೩. ಸಿಬ್ಬಂದಿ ಸಹಕಾರದ ಕೊರತೆ	24	20.0	42	35.0	20	16.7	10	8.3	24	20.0	120	100.0
೪. ಅಂಚೆ ಕಾರ್ಯಕರ್ತರ ಸಹಾಯದ ಕೊರತೆ	28	23.3	38	31.7	18	15.0	18	15.0	18	15.0	120	100.0
೫. ಅಗತ್ಯ ಮಾಹಿತಿ ನೀಡಿಕೆಯ ಕೊರತೆ	18	15.0	20	16.7	44	36.7	14	11.7	24	20.0	120	100.0

ಆಕರ: ಕ್ಷೇತ್ರ ಸಮೀಕ್ಷೆ

ನಕ್ಷೆ 18

ಹೂಡಿಕೆದಾರರು ಅನುಭವಿಸಿದ ತೊಂದರೆ, ತೊಡಕುಗಳು



ಅತಿಯಾದ ನಿಯಮಾವಳಿ

ಮೇಲಿನ ಕೋಷ್ಟಕದಂತೆ 15.0 ಶೇ. ಹೂಡಿಕೆದಾರರು 'ಅತಿಯಾದ ನಿಯಮಾವಳಿ' ಎನ್ನುವ ತೊಂದರೆಯನ್ನು ಬಲವಾಗಿ ಸಮ್ಮತಿಸುತ್ತಾರೆ. ಏನನ್ನೂ ಹೇಳಲು ಇಚ್ಛಿಸದವರು 21.7 ಶೇ. ಸಮ್ಮತಿ ಸೂಚಿಸಿದವರು 18.3 ಶೇ. ತೊಂದರೆಯ ಬಗ್ಗೆ ನಿಯಮಾವಳಿ ಅತಿಯಾಗಿಲ್ಲ ಎನ್ನುವವರು ಅಂದರೆ ಹೇಳಿಕೆಗೆ ಅಸಮ್ಮತಿ ಸೂಚಿಸಿದವರು 45.0 ಶೇ. ಇದರಲ್ಲಿ 20.0 ಶೇ. ಬಲವಾಗಿ ಅಸಮ್ಮತಿಸಿದರೆ 25.0 ಶೇ. ಅಸಮ್ಮತಿಸಿದ್ದಾರೆ.

ವಿಶ್ಲೇಷಣೆ: ಹೆಚ್ಚಿನ ಹೂಡಿಕೆದಾರರು 'ನಿಯಮಾವಳಿ ಅತಿಯಾಯಿತು' ಎಂದು ಭಾವಿಸುವುದಿಲ್ಲ.

ಪರಿಷ್ಕರಣೆಯಲ್ಲಿ ಕಾಲಹರಣ

ಉಳಿತಾಯ ಪ್ರಕ್ರಿಯೆಯಲ್ಲಿ ನವೀಕರಣ ಸಂದರ್ಭದಲ್ಲಿ, ಅಥವಾ ಅವಧಿ ಮುಕ್ತಾಯದಲ್ಲಿ ಠೇವಣಿ ಹಿಂಪಡೆಯುವಾಗ ಅನಗತ್ಯ ಕಾಗದ ಪತ್ರಗಳ ತಪಾಸಣೆ ಹಾಗೂ ಪರಿಷ್ಕರಣೆಯಲ್ಲಿ ಅನಗತ್ಯ ಕಾಲಹರಣ ಮಾಡುತ್ತದೆ ಎನ್ನುವ ಹೇಳಿಕೆಯನ್ನು ಪ್ರಶ್ನಾವಳಿಯಲ್ಲಿ ಸೇರಿಸಲಾಗಿತ್ತು. 'ಅನಗತ್ಯ ಕಾಲಹರಣ ಮಾಡಿಲ್ಲ' ಎಂದು ಒಟ್ಟಿನಲ್ಲಿ 46.7 ಶೇ. ಹೂಡಿಕೆದಾರರು ಹೇಳಿದರೆ 33.3 ಶೇ. ಹೂಡಿಕೆದಾರರು 'ಕಾಲಹರಣ' ಮಾಡಿದ್ದಾರೆ ಎಂದು ಅಭಿಪ್ರಾಯ ಪಟ್ಟಿದ್ದಾರೆ.

ವಿಶ್ಲೇಷಣೆ: ಉಳಿತಾಯ ಪ್ರಕ್ರಿಯೆಯಲ್ಲಿ ನವೀಕರಣ ಇಲ್ಲವೆ ಹಿಂಪಡೆತ ಸಂದರ್ಭದಲ್ಲಿ ಅನಗತ್ಯ ಕಾಲಹರಣವನ್ನು ಸಿಬ್ಬಂದಿ ಮಾಡಿಲ್ಲ ಎನ್ನುವ ಅಭಿಪ್ರಾಯ ವ್ಯಕ್ತವಾಗಿದೆ.

ಅಂಚೆ ಸಿಬ್ಬಂದಿಯ ಸಹಾಯದ ಕೊರತೆ

ಉಳಿತಾಯಕ್ಕೆ ಸಂಬಂಧಿಸಿದಂತೆ ವ್ಯವಹರಿಸುವಾಗ ಹೂಡಿಕೆದಾರರು ಸಿಬ್ಬಂದಿಯ ಸಹಾಯದ ಕೊರತೆ ಅನುಭವಿಸಿದ್ದೀರಾ ಎನ್ನುವ ಪ್ರಶ್ನೆಗೆ 55.0 ಶೇ. ಹೂಡಿಕೆದಾರರು ಸಿಬ್ಬಂದಿ ಸಹಕಾರದ ಕೊರತೆ ಇತ್ತು ಎನ್ನುವ ಹೇಳಿಕೆಯನ್ನು ಒಪ್ಪಿಲ್ಲ. ಇದರಲ್ಲಿ 35.0 ಶೇ. ಹೂಡಿಕೆದಾರರು ಕೊರತೆ ಇತ್ತು ಹೇಳಿಕೆಯನ್ನು ಬಲವಾಗಿ ವಿರೋಧಿಸಿದರೆ 20.0 ಶೇ. ಹೂಡಿಕೆದಾರರು ಅಸಮ್ಮತಿ ಸೂಚಿಸಿದ್ದಾರೆ.

ವಿಶ್ಲೇಷಣೆ: ಹೂಡಿಕೆದಾರರ ಅಭಿಪ್ರಾಯದಂತೆ ಸಿಬ್ಬಂದಿ ಸಹಕಾರದ ಕೊರತೆ ಅನುಭವಿಸಿಲ್ಲ.

ಅಂಚೆ ಕಾರ್ಯಕರ್ತರ ಸಹಾಯದ ಕೊರತೆ

ಅಂಚೆ ಕಾರ್ಯಕರ್ತರು ಅಂಚೆ ಕಛೇರಿಯ ಮತ್ತು ಹೂಡಿಕೆದಾರರ ಮಧ್ಯದ ಕೊಂಡಿ ಕಾರ್ಯಕತ್ರರ ಸೇವೆಯ ಗುಣಮಟ್ಟವು ಹೂಡಿಕೆದಾರರ, ಉಳಿತಾಯದ ನಿರ್ಧಾರದ ಮೇಲೆ ಬಲವಾದ ಪರಿಣಾಮ ಬೀರುತ್ತದೆ. ಸಮೀಕ್ಷೆಯ ಪ್ರಶ್ನಾವಳಿಯಲ್ಲಿ 'ಅಂಚೆ ಕಾರ್ಯಕರ್ತರ ಸಹಕಾರದ ಕೊರತೆ ಇತ್ತು' ಎನ್ನುವ ತೊಂದರೆಗೆ 28 ಜನ ಮಹಿಳೆಯರು (23.3 ಶೇ.) ಬಲವಾದ ಅಸಮ್ಮತಿ ಸೂಚಿಸಿದ್ದಾರೆ ಹಾಗೂ 38 (31.7 ಶೇ.) ಜನ ಮಹಿಳೆಯರು ಅಸಮ್ಮತಿ ಸೂಚಿಸಿದ್ದಾರೆ. ಒಟ್ಟು ಈ ಅಭಿಪ್ರಾಯ ತಿಳಿಸಿದವರ ಪ್ರಮಾಣ 50.0 ಶೇ. ಅಂದರೆ ಹೆಚ್ಚಿನವರಿಗೆ ಈ ತೊಂದರೆ ಇರಲಿಲ್ಲ.

ವಿಶ್ಲೇಷಣೆ: ಬಹುಪಾಲು ಹೂಡಿಕೆದಾರರು ಅಂಚೆ ಕಾರ್ಯಕರ್ತರ ಸಹಾಯದ ಕೊರತೆ ಅನುಭವಿಸಿಲ್ಲ.

ಅಗತ್ಯ ಮಾಹಿತಿ ನೀಡಿಕೆ ಕೊರತೆ

ಹೂಡಿಕೆದಾರರು ಹಣವನ್ನು ವಿವಿಧ ಯೋಜನೆಗಳಲ್ಲಿ ತೊಡಗಿಸುವಾಗ ಸಂಬಂಧಪಟ್ಟ ಅಗತ್ಯ ಮಾಹಿತಿಗಳನ್ನು ನೀಡದಿದ್ದರೆ ಮುಂದೆ ತೊಂದರೆಗಳಾಗುತ್ತದೆ. ಉಳಿತಾಯ ಮಾಡುವ ನಿಯಮದಲ್ಲಿ ನಿಮಗೆ ಸಮಗ್ರ ಮಾಹಿತಿ ನೀಡಲಾಗಿತ್ತೆ ಎನ್ನುವ ಪ್ರಶ್ನೆಗೆ 'ಇತ್ತು' ಎನ್ನುವ ಅಭಿಪ್ರಾಯ 31.7 ಶೇ. ಹೂಡಿಕೆದಾರರದ್ದು ಆಗಿತ್ತು 'ಇರಲಿಲ್ಲ' ಎನ್ನುವುದು 31.7 ಶೇ. ಹೂಡಿಕೆದಾರರ ಅಭಿಪ್ರಾಯ.

ವಿಶ್ಲೇಷಣೆ: ಅಗತ್ಯ ಮಾಹಿತಿ ನೀಡಿದ ಕುರಿತು ಸಮ್ಮತಿಸಿದವರೂ ಅಸಮ್ಮತಿಸಿದವರೂ ಸಮಪಾಲಿನಲ್ಲಿ ಇದ್ದಾರೆ.

ಒಟ್ಟು ಅರ್ಥ

ಮೇಲಿನ ಹೀಳಿಕೆಗಳ ಆಧಾರದಲ್ಲಿ ಹೇಳುವುದಾದರೆ ಐದು ತೊಂದರೆಗಳಲ್ಲಿ ನಾಲ್ಕು ತೊಂದರೆಗಳು ಹೆಚ್ಚಾಗಿ ಇರಲಿಲ್ಲ ಎಂದೂ ಒಂದು ತೊಂದರೆ ಕುರಿತು 'ಇತ್ತು' 'ಇಲ್ಲ' ಎಂದು ಸಮ ಸಮ ಅಭಿಪ್ರಾಯ ವ್ಯಕ್ತವಾಗಿದೆ.

ಅಂಚೆ ಕಛೇರಿಯ ಉಳಿತಾಯ ಯೋಜನೆಯ ಕುರಿತಂತೆ ಹೂಡಿಕೆದಾರರ ಒಟ್ಟು ಅಭಿಪ್ರಾಯ

ಪ್ರತಿಯೊಬ್ಬ ಹೂಡಿಕೆದಾರ ಮಹಿಳೆಯರ ಅಭಿಪ್ರಾಯ ಭಿನ್ನವಾಗಿರುತ್ತದೆ. ಯಾಕೆಂದರೆ, ಇದು ಹೂಡಿಕೆದಾರರ ಸ್ವಭಾವ, ಅವರಿಗೆ ದೊರೆತ ಸೇವೆಗಳ ಮಟ್ಟ, ವಯಸ್ಸು, ಹೂಡಿದ ಯೋಜನೆಗಳು ಇತ್ಯಾದಿ ವಿಷಯಗಳ ಮೇಲೆ ನಿಶ್ಚಯವಾಗುತ್ತದೆ. ಕೆಳಗಿನ ಕೋಷ್ಟಕ ಅಂಚೆ ಕಛೇರಿಯ ಯೋಜನೆಗಳಿಗೆ ಸಂಬಂಧಿಸಿದಂತೆ ಕಛೇರಿಯ ಕಾರ್ಯ ವಿಧಾನಗಳ ಕುರಿತು ಹೂಡಿಕೆದಾರರ ಒಟ್ಟು ಅಭಿಪ್ರಾಯ ತೋರಿಸುತ್ತದೆ.

ಕೋಷ್ಟಕ 19


ಅಂಚೆ ಕಛೇರಿಯ ಕಾರ್ಯ ವಿಧಾನಗಳ ಕುರಿತು ಒಟ್ಟು ಅಭಿಪ್ರಾಯ

ಅಭಿಪ್ರಾಯ	ಮಾಹಿತಿದಾರರ ಸಂಖ್ಯೆ	ಪ್ರತಿಶತ
ಅತೃಪ್ತಿಕರ	16	13.3
ಸಾಮಾನ್ಯ	62	51.7
ಉತ್ತಮ	36	30.0
ಅತ್ಯುತ್ತಮ	04	3.3
ಪರಮೋತ್ತಮ	02	1.7
ಒಟ್ಟು	**120**	**100.0**

ಆಕರ: ಕ್ಷೇತ್ರ ಸಮೀಕ್ಷೆ

ನಕ್ಷೆ19

ಅಂಚೆ ಕಛೇರಿಯ ಕಾರ್ಯ ವಿಧಾನಗಳ ಕುರಿತು ಒಟ್ಟು ಅಭಿಪ್ರಾಯ



ಉಳಿತಾಯ ಯೋಜನೆಗಳ ಹಾಗೂ ಕಾರ್ಯ ವಿಧಾನಗಳ ಕುರಿತು ಒಂದು ಸಮಗ್ರವಾದ, ಒಟ್ಟು ಅಭಿಪ್ರಾಯವನ್ನು ತಿಳಿಸುವಂತೆ ಸಮೀಕ್ಷೆ ಮಾಡಿದ ಮಹಿಳಾ ಹೂಡಿಕೆದಾರರಲ್ಲಿ ಕೇಳಿದಾಗ 51.7 ರೂ. (62 ಮಹಿಳೆಯರು) 'ಸಾಮಾನ್ಯ' ಎಂದು ಪ್ರತಿಕ್ರಿಯೆ ನೀಡಿದರು ಆದರೆ 'ಉತ್ತಮ' ಎನ್ನುವ

ಅಭಿಪ್ರಾಯವನ್ನು 30.0 ಶೇ. ಮಹಿಳೆಯರು ನೀಡಿದರು. 'ಅತೃಪ್ತಿಕರ' ಎನ್ನುವ ಅಭಿಪ್ರಾಯ 13.3 ಶೇ. (16 ಮಹಿಳೆಯರು) ಹೂಡಿಕೆದಾರರದ್ದು ಆಗಿತ್ತು.

ವಿಶ್ಲೇಷಣೆ: ಮೇಲಿನ ಅಭಿಪ್ರಾಯಗಳನ್ನು ಗಮನಿಸಿದರೆ ಹೂಡಿಕೆದಾರರ ಒಟ್ಟು ಅಭಿಪ್ರಾಯ, ಸೇವಾಮಟ್ಟ ಮತ್ತು ಕಾರ್ಯವಿಧಾನ 'ಉತ್ತಮ' ದ ಕಡೆಗೆ ಎಂದು ತಿಳಿಯಬಹುದು.

ಒಂದು ಕೊನೆಯ ಪ್ರಶ್ನೆ – ಕೊನೆಯ ಪ್ರತಿಕ್ರಿಯೆ

ಸಮೀಕ್ಷೆಯ ಪ್ರಶ್ನಾವಳಿಯಲ್ಲಿ ಮೂರು ಕೊನೆಯ ಪ್ರಶ್ನೆಗಳನ್ನು ಹೂಡಿಕೆದಾರರಿಗೆ ಕೇಳಲಾಯಿತು.

1. ಅಂಚೆ ಕಛೇರಿಯ ಸಿಬ್ಬಂದಿಗಳು ಗ್ರಾಹಕರಿಗೆ ಉತ್ತಮ ರೀತಿಯ ಸೇವೆಯನ್ನು ನೀಡುತ್ತಿದ್ದಾರೆ ಎಂದು ಭಾವಿಸುತ್ತೀರಾ?
2. ಅಂಚೆ ಕಛೇರಿಯ ಯೋಜನೆಗಳು ಇತರ ಸಂಸ್ಥೆಗಳ ಯೋಜನೆಗಳಿಗಿಂತ ಉತ್ತಮ ಎಂದು ಭಾವಿಸುತ್ತೀರಾ?
3. ಅಂಚೆ ಕಛೇರಿಯ ಯೋಜನೆಗಳಲ್ಲಿ ಹೂಡಲು ಇತರರಿಗೆ ಶಿಫಾರಸ್ಸು ಮಾಡುತ್ತೀರಾ?

ಈ ಮೂರು ಪ್ರಶ್ನೆಗಳಿಗೆ ಹೂಡಿಕೆದಾರರು ನೀಡಿದ ಪ್ರತಿಕ್ರಿಯೆಯನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

ಕೋಷ್ಟಕ 20


ಕೊನೆಯ ಪ್ರಶ್ನೆಗಳಿಗೆ ಕೊನೆಯ ಪ್ರತಿಕ್ರಿಯೆ

ಪ್ರಶ್ನೆಗಳು	ಹೌದು		ಅಲ್ಲ / ಇಲ್ಲ		ಪ್ರತಿಶತ	
೧. ಅಂಚೆ ಕಛೇರಿಯ ಸಿಬ್ಬಂದಿ ಗ್ರಾಹಕರಿಗೆ ಉತ್ತಮ ಸೇವೆ ನೀಡುತ್ತಿದ್ದಾರಾ?	62	51.7	58	48.3	120	100.00
೨. ಅಂಚೆ ಕಛೇರಿಯ ಯೋಜನೆಗಳು ಬೇರೆ ಸಂಸ್ಥೆಗಳ ಯೋಜನೆಗಳಿಗಿಂತ ಉತ್ತಮ ಎಂದು ಭಾವಿಸುತ್ತೀರಾ?	70	58.3	50	41.7	120	100.0
೩. ಅಂಚೆ ಕಛೇರಿಯ ಯೋಜನೆಗಳಲ್ಲಿ ಹೂಡಲು ಇತರರಿಗೆ ಶಿಫಾರಸು ಮಾಡುತ್ತೀರಾ?	72	60.0	48	40.0	120	100.0

ಆಕರ: ಕ್ಷೇತ್ರ ಸಮೀಕ್ಷೆ

ನಕ್ಷೆ 20

ಕೊನೆಯ ಪ್ರಶ್ನೆಗಳಿಗೆ ಕೊನೆಯ ಪ್ರತಿಕ್ರಿಯೆ



ಈ ಕೋಷ್ಟಕದ ಅಂಕಿ ಸಂಖ್ಯೆಗಳ ಪ್ರಕಾರ, ಹೆಚ್ಚಿನ ಹೂಡಿಕೆದಾರರು ಅಂಚೆ ಕಛೇರಿಗಳಿಗೆ ಬಹಳ ಅನುಕೂಲಕರವಾದ ಅಭಿಪ್ರಾಯ ವ್ಯಕ್ತ ಪಡಿಸಿದ್ದಾರೆ. ಸಮೀಕ್ಷೆಯಲ್ಲಿ ಭಾಗವಹಿಸಿದ ಪುತ್ತೂರು ಪಟ್ಟಣದ ಮಹಿಳಾ ಹೂಡಿಕೆದಾರರಲ್ಲಿ 62 ಮಹಿಳೆಯರು (51.7 ಶೇ. ಸಿಬ್ಬಂದಿಗಳ ಸೇವೆ ಉತ್ತಮವಾಗಿದೆ ಎಂದು ಪ್ರತಿಕ್ರಿಯಿಸಿದ್ದಾರೆ. 58.3 ಶೇ. ಮಹಿಳೆಯರು (70 ಮಹಿಳೆಯರು) ಅಂಚೆ ಕಛೇರಿಯ ಉಳಿತಾಯ ಯೋಜನೆಗಳನ್ನು ಇತರರಿಗೆ ಶಿಫಾರಸು ಮಾಡುವ ಇಚ್ಛೆ ವ್ಯಕ್ತಪಡಿಸಿದ್ದಾರೆ. ಬೇರೆ ಸಂಸ್ಥೆಗಳ ಉಳಿತಾಯ ಯೋಜನೆಗಳಿಗಿಂತ ಅಂಚೆ ಕಛೇರಿಯ ಯೋಜನೆಗಳು ಉತ್ತಮವಾಗಿವೆ ಎಂದು 60.0 ಶೇ. (72 ಮಹಿಳೆಯರು) ಧನಾತ್ಮಕವಾಗಿ ಹೇಳಿಕೆ ನೀಡಿದ್ದಾರೆ.

ವಿಶ್ಲೇಷಣೆ: ಸಮೀಕ್ಷೆಯ ಅಭಿಪ್ರಾಯಗಳನ್ನು ನೋಡಿದರೆ ಪುತ್ತೂರು ಪಟ್ಟಣದ ಮಹಿಳಾ ಹೂಡಿಕೆದಾರರ ಅನಿಸಿಕೆಗಳು ಅಂಚೆ ಕಛೇರಿಯ ಯೋಜನೆಗಳ ಪರವಾಗಿ ಧನಾತ್ಮಕವಾಗಿವೆ ಎಂದು ತಿಳಿಯಬಹುದು.

ಸಂಖ್ಯಾ ಶಾಸ್ತ್ರದ ಮೂಲಕ ವಿಶೇಷ ವಿಶ್ಲೇಷಣೆ

ಈ ಕೆಳಗೆ ಸಂಖ್ಯಾ ಶಾಸ್ತ್ರದ ಉಪಕರಣಗಳನ್ನು ಉಪಯೋಗಿಸಿ ಕೆಲವು ವಿಶೇಷ ವಿಶ್ಲೇಷಣೆಗಳನ್ನು ಮಾಡಲಾಗಿದೆ.

ಹೂಡಿಕೆದಾರರ ವೈವಾಹಿಕ ಸ್ಥಿತಿ ಹಾಗೂ ಅಂಚೆ ಕಛೇರಿಯ ಕಾರ್ಯವಿಧಾನ ಹಾಗೂ ಯೋಜನೆಗಳ ಕುರಿತು ಒಟ್ಟು ಅಭಿಪ್ರಾಯ

ಹೂಡಿಕೆದಾರರ ವೈವಾಹಿಕ ಸ್ಥಿತಿ ಹಾಗೂ ಅಂಚೆ ಕಛೇರಿಯ ಕಾರ್ಯ ವಿಧಾನ ಹಾಗೂ ಯೋಜನೆಗಳ ಕುರಿತು ಅಭಿಪ್ರಾಯ ಇವು ಎರಡರ ಮಧ್ಯೆ ಏನಾದರೂ ಸಂಬಂಧವಿದೆಯೇ ಎಂದು ನೋಡಲು

ಇವೆರಡು ಮಾಪಕಗಳಿಗೆ 'ಕೈ ಸ್ಕ್ವೇರ್' ಅನ್ನುವ ಸಂಖ್ಯಾ ಶಾಸ್ತ್ರ ಉಪಕರಣಗಳನ್ನು ಉಪಯೋಗಿಸಲಾಯಿತು. ಇದರ ಫಲಿತಾಂಶ ಈ ಕೆಳಗೆ ತೋರಿಸಲಾಗಿದೆ.

ಕೋಷ್ಟಕ 21


ಹೂಡಿಕೆದಾರರ ವೈವಾಹಿಕ ಸ್ಥಿತಿ ಹಾಗೂ ಅಂಚೆ ಕಛೇರಿಯ ಕಾರ್ಯವಿಧಾನಗಳ ಕುರಿತು ಅಭಿಪ್ರಾಯ

ಅಭಿಪ್ರಾಯ / ವೈವಾಹಿಕ	ಆಕಸ್ಮಿಕ	ಸಾಮಾನ್ಯ	ಉತ್ತಮ	ಅತ್ಯುತ್ತಮ	ಪರಮೋತ್ತಮ	ಒಟ್ಟು
ವಿವಾಹಿತರು	08	54	27	02	01	92
ಅವಿವಾಹಿತರು	08	08	09	02	01	28
ಒಟ್ಟು	**16**	**62**	**36**	**04**	**02**	**120**

ಆಕರ: ಕ್ಷೇತ್ರ ಸಮೀಕ್ಷೆ

ನಕ್ಷೆ 21

ಹೂಡಿಕೆದಾರರ ವೈವಾಹಿಕ ಸ್ಥಿತಿ ಹಾಗೂ ಅಂಚೆ ಕಛೇರಿಯ ಕಾರ್ಯವಿಧಾನಗಳ ಕುರಿತು ಅಭಿಪ್ರಾಯ



ನಲ್ (ಶೂನ್ಯ) ಊಹೆ (ಹೆಚ್$_0$): ಹೂಡಿಕೆದಾರರ ಅಭಿಪ್ರಾಯಕ್ಕೂ ಅವರ ವೈವಾಹಿಕ ಸ್ಥಿತಿಗೂ ಸಂಬಂಧವಿಲ್ಲ.

ಪರ್ಯಾಯ ಊಹೆ (ಹೆಚ್$_1$): ಹುಡಿಕೆದಾರರ ಅಭಿಪ್ರಾಯಕ್ಕೂ ಅವರ ವೈವಾಹಿಕ ಸ್ಥಿತಿಗೂ ಸಂಬಂಧವಿದೆ.

ವಿ = (2–1) (5–1) = 1 ×4 = 4

χ^2 0.05 = 9.49, χ^2 ನಾವು ಲೆಕ್ಕ ಹಾಕಿದಂತೆ 12.75 ಸಂಖ್ಯಾ ಶಾಸ್ತ್ರದ ಕೋಷ್ಟಕದನ್ವಯ χ^2 ಮೌಲ್ಯ 9.49. ನಾವು ಲೆಕ್ಕ ಹಾಕಿದಂತೆ χ^2 ಮೌಲ್ಯವು ಕೋಷ್ಟಕ ಮೌಲ್ಯಕ್ಕಿಂತ ಹೆಚ್ಚು ಇರುವುದರಿಂದ ಶೂನ್ಯ ಊಹೆಯನ್ನು ತಿರಸ್ಕರಿಸಲಾಗಿದೆ. ಆದುದರಿಂದ ಹೂಡಿಕೆದಾರರು ವ್ಯಕ್ತ ಪಡಿಸಿದ ಅಭಿಪ್ರಾಯಕ್ಕೂ ಅವರ ವೈವಾಹಿಕ ಸ್ಥಿತಿಗೂ ನೇರ ಸಂಬಂಧವಿದೆ ಎಂದು ತಿಳಿಯುತ್ತದೆ. ಲೆಕ್ಕಾಚಾರ ತಿಳಿಸುವಂತೆ ಅಂಚೆ ಕಛೇರಿಗಳ ಕಾರ್ಯ ವಿಧಾನಗಳ ಕುರಿತು ಹೆಚ್ಚಿನ ಅತೃಪ್ತಿಯನ್ನು ಅವಿವಾಹಿತರು $(0-6)^2 = 5.00)$ ವ್ಯಕ್ತಪಡಿಸಿದ್ದಾರೆ.

ಹೂಡಿಕೆದಾರರ ಆದಾಯ ಮತ್ತು ಮಾಸಿಕ ಹೂಡಿಕೆ ಮೊತ್ತ

ಸಾಮಾನ್ಯವಾಗಿ, ಹೆಚ್ಚಿನ ಆದಾಯದ ವ್ಯಕ್ತಿಗಳ ಹೂಡಿಕೆ ಮಾಡುವ ಮೊತ್ತ ಹೆಚ್ಚಿರುತ್ತದೆ ಎಂದು ಅಭಿಪ್ರಾಯ ಆದರೆ ಹೆಚ್ಚಿನ ಆದಾಯಕ್ಕೂ ಪ್ರತಿ ತಿಂಗಳು ಹೂಡುವ ಉಳಿತಾಯದ ಮೊತ್ತಕ್ಕೂ ಏನೂ ಸಂಬಂಧವಿಲ್ಲ. ಹೂಡಿಕೆಯು ಮಿಗತೆ ಹಣದ ಮೇಲೆ ನಿರ್ಧರಿತವಾಗುತ್ತದೆ ಎಂದು ಪ್ರತಿವಾದ ಇದೆ. 'ಕೈ ಸ್ಕ್ವೇರ್' ವಿಶ್ಲೇಷಣೆಗೆ ಈ ಎರಡು ಮಾಪಕವನ್ನು ಒಳಪಡಿಸಿದಾಗ ಕೆಳಗಿನ ಫಲಿತಾಂಶ ಕಂಡುಬಂದಿದೆ.

ಕೋಷ್ಟಕ 22


ಹೂಡಿಕೆದಾರರ ಆದಾಯ ಮತ್ತು ಮಾಸಿಕ ಹೂಡಿಕೆ ಮೊತ್ತ

ಆದಾಯ	ಮಾಸಿಕ ಹೂಡಿಕೆ ಮೊತ್ತ				ಒಟ್ಟು	ಪ್ರತಿಶತ
	ರೂ. 1000ಕ್ಕಿಂತ ಕೆಳಗೆ	ರೂ. 1000–3000	ರೂ. 3000 – 6000	ರೂ. 6000ಕ್ಕಿಂತ ಹೆಚ್ಚು	01	92
ರೂ. 100000ಕ್ಕಿಂತ ಕಡಿಮೆ	44	08	06	00	58	100
ರೂ. 100000 ದಿಂದ ರೂ. 5000	10	22	10	02	44	100
ರೂ. 500000 ದಿಂದ ರೂ. 6000000	03	02	01	04	05	100
ರೂ. 1000000 ಕ್ಕಿಂತ ಹೆಚ್ಚು	00	00	01	04	05	100
ಒಟ್ಟು	**17**	**32**	**22**	**09**	**120**	**100**

ಆಕರ: ಕ್ಷೇತ್ರ ಸಮೀಕ್ಷೆ

ನಕ್ಷೆ 22

ಹೂಡಿಕೆದಾರರ ಆದಾಯ ಮತ್ತು ಮಾಸಿಕ ಹೂಡಿಕೆ ಮೊತ್ತ



ನಲ್ (ಶೂನ್ಯ) ಊಹೆ (ಹೆಚ್$_o$): ಹೂಡಿಕೆದಾರರ ಆದಾಯಕ್ಕೂ ಅವರು ಪ್ರತಿ ತಿಂಗಳೂ ಹೂಡುವ ಮೊತ್ತಕ್ಕೂ ಸಂಬಂಧವಿಲ್ಲ. ಇವೆರಡೂ ಸ್ವತಂತ್ರ ಮಾಪಕಗಳು.

ಪರ್ಯಾಯ ಊಹೆ (ಹೆಚ್$_a$): ಹೂಡಿಕೆದಾರರ ಆದಾಯಕ್ಕೂ ಅವರು ಪ್ರತಿ ತಿಂಗಳು ಹೂಡುವ ಮೊತ್ತಕ್ಕೂ ಸಂಬಂಧವಿದೆ.

ಡಿ.ಎಫ್ – (4–1) (4–1) = (2 × 2) 9. ಪ್ರಾಶಸ್ತ್ಯದ ಮಟ್ಟ = 0.05

9 ಡಿ.ಎಫ್. 5 ಶೇ. ಪ್ರಾಶಸ್ತ್ಯದ ಮಟ್ಟದಲ್ಲಿ χ^2 ಕೋಷ್ಟಕದಲ್ಲಿನ ಮೌಲ್ಯ 16.9.

ಸಂಖ್ಯಾ ಶಾಸ್ತ್ರದ ಉಪಕರಣವನ್ನು ಉಪಯೋಗಿಸಿ ಲೆಕ್ಕ ಹಾಕಿದ χ^2= 87.26 ಲೆಕ್ಕ ಹಾಕಿದ ಮೌಲ್ಯವು ಕೋಷ್ಟಕದ ಮೌಲ್ಯಕ್ಕಿಂತ ಹೆಚ್ಚು ಇರುವುದರಿಂದ ನಲ್ ಊಹೆಯನ್ನು ತಿರಸ್ಕರಿಸಲಾಗುತ್ತದೆ. ಆದುದರಿಂದ ಆದಾಯವನ್ನು ಪ್ರತಿ ತಿಂಗಳೂ ಹೂಡಿಕೆ ಮಾಡುವ ಮೊತ್ತಕ್ಕೂ ಸಂಬಂಧವಿದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಪ್ರತಿ ತಿಂಗಳೂ ಹೂಡಿಕೆ ಮಾಡುವ ಮೊತ್ತ ಹೂಡಿಕೆದಾರರ ಆದಾಯವನ್ನು ಅವಲಂಬಿಸಿದೆ.

ಹೂಡಿಕೆಗಳು ಮತ್ತು ತೊಂದರೆ, ತೊಡಕುಗಳು

ಪ್ರತಿ ತಿಂಗಳ ಮಹಿಳಾ ಹೂಡಿಕೆದಾರರು ಹೂಡುವ ಮೊತ್ತ ಮತ್ತು ಹೂಡಿಕೆದಾರರು ಅನುಭವಿಸುವ ತೊಂದರೆಗಳು ಈ ಎರಡು ಮಾಪಕಗಳಿಗೆ ಪರಸ್ಪರ ಸಂಬಂಧ ಇದೆಯೇ ಎಂದು ನೋಡಲು ಕೈಸ್ಕ್ವೇರ್ ಹಾಕಲಾಯಿತು. ಹೂಡಿಕೆದಾರರು ಅನುಭವಿಸಿದ ತೊಂದರೆಗಳಿಂದ ಹೂಡಿಕೆಗಳ ಮೇಲೆ ಪರಿಣಾಮ ಇದೆಯೋ ಎಂದು ನೋಡಲು ಇದು ಸಹಕಾರಿಯಾಗುತ್ತದೆ.

ಕೋಷ್ಟಕ 23

ಪ್ರತಿ ತಿಂಗಳ ಹೂಡಿಕೆಗಳು ಮತ್ತು ಹೂಡಿಕೆದಾರರು ಅನುಭವಿಸಿದ ತೊಂದರೆಗಳು

ತೊಂದರೆಗಳು	ಹೂಡಿಕೆ ಮಾಡಿದ ಮೊತ್ತ				ಒಟ್ಟು
	ರೂ. 1000 ಕೆಳಗೆ	ರೂ. 1000 ದಿಂದ ರೂ. 3000	ರೂ. 3000 ದಿಂದ ರೂ. 6000	ರೂ. 6000ಕ್ಕಿಂತ ಹೆಚ್ಚು	
ಅತಿಯಾದ ನಿಯಮಾವಳಿ					
ಬಲವಾದ ಅಸಮ್ಮತಿ	11	05	04	04	24
ಅಸಮ್ಮತಿ	10	06	13	01	30
ತಟಸ್ಥ	15	04	02	01	22
ಸಮ್ಮತಿ	11	13	01	01	26
ಬಲವಾದ ಸಮ್ಮತಿ	10	04	02	02	18
ಪರಿಷ್ಕರಣೆಯಲ್ಲಿ ಕಾಲಹರಣ					
ಬಲವಾದ ಅಸಮ್ಮತಿ	10	03	03	02	18
ಅಸಮ್ಮತಿ	20	09	08	01	38
ತಟಸ್ಥ	10	09	04	01	24
ಸಮ್ಮತಿ	06	05	02	03	16
ಬಲವಾದ ಸಮ್ಮತಿ	11	06	05	02	24
ಸಿಬ್ಬಂದಿ ಸಹಕಾರದ ಕೊರತೆ					
ಬಲವಾದ ಅಸಮ್ಮತಿ	09	06	06	03	24
ಅಸಮ್ಮತಿ	18	14	08	02	42
ತಟಸ್ಥ	15	00	03	02	20
ಸಮ್ಮತಿ	13	08	02	01	24
ಬಲವಾದ ಸಮ್ಮತಿ					
ಒಟ್ಟು	**57**	**32**	**22**	**09**	**120**
ಕಾರ್ಯಕರ್ತರ ಸಹಕಾರದ ಕೊರತೆ					
ಬಲವಾದ ಅಸಮ್ಮತಿ	11	07	08	02	28
ಅಸಮ್ಮತಿ	25	09	04	00	38
ತಟಸ್ಥ	08	06	03	01	18
ಸಮ್ಮತಿ	09	05	03	01	18
ಬಲವಾದ ಸಮ್ಮತಿ	04	05	04	05	18
	57	**32**	**22**	**09**	**120**
ಅಗತ್ಯ ಮಾಹಿತಿ ನೀಡಿಕೆ					
ಬಲವಾದ ಅಸಮ್ಮತಿ	09	04	03	02	18
ಅಸಮ್ಮತಿ	08	05	04	03	20
ತಟಸ್ಥ	22	15	05	02	44
ಸಮ್ಮತಿ	05	04	04	01	14
ಬಲವಾದ ಸಮ್ಮತಿ	13	04	06	01	24
ಒಟ್ಟು	**57**	**32**	**22**	**09**	**120**

ಆಕರ: ಕ್ಷೇತ್ರ ಸಮೀಕ್ಷೆ

ವಿವರಣೆಗಳು

(ಅ) ಅತಿಯಾದ ನಿಯಮಾವಳಿ

ನಲ್ ಊಹೆ (ಹೆಚ್೦): ಪ್ರತಿ ತಿಂಗಳು ಹೂಡಿಕೆ ಮಾಡುವ ಹೂಡಿಕೆಗಳಿಗೂ ಎದುರಿಸಿದ ತೊಂದರೆಗಳಿಗೂ ಒಂದಕ್ಕೊಂದು ಸಂಬಂಧವಿಲ್ಲ.

ಪರ್ಯಾಯ ಊಹೆ (ಹೆಚ್೧): ಹೂಡಿಕೆಗಳಿಗೂ ಅತಿಯಾದ ನಿಯಮಾವಳಿ ಸಂಬಂಧವಿದೆ.

ಲೆಕ್ಕ ಹಾಕಿದ χ^2 = 44.68 χ^2 ಕೋಷ್ಟಕದಂತೆ $\chi2$ ಮೌಲ್ಯ = 21.0

ಅರ್ಥ: ಲೆಕ್ಕ ಹಾಕಿದ χ^2 ಬೆಲೆಯು ಕೋಷ್ಟಕದ ಬೆಲೆಗಿಂತ ಹೆಚ್ಚು ಇರುವುದರಿಂದ ನಲ್ ಊಹೆ ತಿರಸ್ಕೃತವಾಗಿದೆ. ಇದರ ಅರ್ಥ ಹೂಡಿಕೆದಾರರು ಅನುಭವಿಸಿದ ಅತಿಯಾದ ನಿಯಮಾವಳಿಗಳಿಗಿಂತ ಹೂಡಿಕೆ ಮಾಡುವ ಮೊತ್ತದ ಮೇಲೆ ಪರಿಣಾಮ ಬೀರಿದೆ. ಅಂದರೆ ಅತಿಯಾದ ನಿಯಮಾವಳಿ ಕಾರಣದಿಂದ ಹೂಡಿಕೆ ಕಡಿಮೆ ಆಗಿರುವ ಸಾಧ್ಯತೆ ಇದೆ.

ಪರಿಷ್ಕರಣೆಯಲ್ಲಿ ಕಾಲ ಹರಣ

ನಲ್ ಊಹೆ (ಹೆಚ್೦): ಪ್ರತಿ ತಿಂಗಳು ಹೂಡಿಕೆ ಮಾಡುವ ಮೊತ್ತಕ್ಕೂ ಕಾಗದ ಪತ್ರಗಳ ಪರಿಷ್ಕರಣೆಯಲ್ಲಿ ಸಿಬ್ಬಂದಿ ಮಾಡುವ ಕಾಲಹರಣ ತೊಂದರೆಗೂ ಒಂದಕ್ಕೊಂದು ಸಂಬಂಧವಿಲ್ಲ.

ಪರ್ಯಾಯ ಊಹೆ (ಹೆಚ್೧): ಪರಿಷ್ಕರಣೆಯಲ್ಲಿ ಸಿಬ್ಬಂದಿ ಕಾಲಹರಣ ಮಾಡುವ ತೊಂದರೆಗೂ ಹೂಡಿಕೆದಾರ ಮಾಡುವ ಮೊತ್ತಕ್ಕೂ ಸಂಬಂಧವಿದೆ. ಲೆಕ್ಕಾಚಾರ ಮಾಡಿದ χ^2 ಕೋಷ್ಟಕದಲ್ಲಿನ ಮೌಲ್ಯ 21.0. ಕೋಷ್ಟಕದ ಮೌಲ್ಯ 21.0. ಲೆಕ್ಕಾಚಾರ ಮಾಡಿ ಕಂಡು ಹಿಡಿದ χ^2 ಮೌಲ್ಯ 8.19. ಕಂಡುಹಿಡಿದ χ^2 ಕೋಷ್ಟಕದ ಮೌಲ್ಯಕ್ಕಿಂತ ಕಡಿಮೆ ಇರುವುದರಿಂದ ನಲ್ ಊಹೆಯನ್ನು ಒಪ್ಪಿಕೊಳ್ಳಲಾಗಿದೆ. ಅಂದರೆ ಹೂಡಿಕೆದಾರ ಹೂಡಿಕೆ ಮಾಡುವ ಮೊತ್ತಕ್ಕೆ ಪರಿಷ್ಕರಣೆ ಕಾಲಹರಣದ ತೊಂದರೆ ಪರಿಣಾಮ ಬೀರಿಲ್ಲ. χ^2 ಲೆಕ್ಕಾಚಾರ ಹೂಡಿಕೆದಾರ ಮಾಡುವ ಮೊತ್ತಕ್ಕೂ ಸಿಬ್ಬಂದಿ ಪರಿಷ್ಕರಣೆಯಿಂದ ಕಾಲಹರಣ ಮಾಡಿದ್ದಕ್ಕೂ ಸಂಬಂಧವಿಲ್ಲ.

ಸಿಬ್ಬಂದಿ ಸಹಕಾರದ ಕೊರತೆ

ನಲ್ ಊಹೆ(ಹೆಚ್೦): ಸಿಬ್ಬಂದಿ ಸಹಕಾರದ ಕೊರತೆಗೂ ಪ್ರತಿ ತಿಂಗಳ ಹೂಡಿಕೆ ಮಾಡುವ ಉಳಿತಾಯದ ಮೊತ್ತಕ್ಕೂ ಸಂಬಂಧವಿಲ್ಲ.

ಪರ್ಯಾಯ ಊಹೆ (ಹೆಚ್$_1$): ಸಿಬ್ಬಂದಿ ಸಹಕಾರ ಕೊರತೆ ಹಾಗೂ ಹೂಡಿಕೆ ಮಾಡುವ ಮೊತ್ತಕ್ಕೂ ಪರಸ್ಪರ ಸಂಬಂಧ ಇದೆ. ಲೆಕ್ಕಾಚಾರ ಮಾಡಿ ಕಂಡು ಹಿಡಿದ χ^2 ಮೊತ್ತ: 20.67. χ^2 ಕೋಷ್ಟಕದ ಮೊತ್ತ 21.0. ಲೆಕ್ಕಾಚಾರ ಮಾಡಿ ಕಂಡುಹಿಡಿದ χ^2(20.67), ಕೋಷ್ಟಕದ χ^2 ಮೊತ್ತಕ್ಕಿಂತ ಕಡಿಮೆ ಇದೆ. ಆದುದರಿಂದ ನಲ್ ಊಹೆ ಒಪ್ಪಿಗೆಯಾಗಿದೆ. ಇದರರ್ಥ ಸಿಬ್ಬಂದಿ ಸಹಕಾರದ ಕೊರತೆ ಮತ್ತು ಹೂಡಿಕೆ ಮಾಡುವ ಮೊತ್ತಕ್ಕೆ ಪರಸ್ಪರ ಸಂಬಂಧ ಇದೆ. ಅಂದರೆ ಸಿಬ್ಬಂದಿ ಸಹಕಾರ ಪರಸ್ಪರ ಸಂಬಂಧ ಇದೆ. ಅಂದರೆ ಸಿಬ್ಬಂದಿ ಸಹಕಾರ ಕೊರತೆಯಿಂದ ಹೂಡಿಕೆ ಮಾಡುವ ಹೂಡಿಕೆ ಕೊರತೆಯಿಂದ ಹೂಡಿಕೆ ಮಾಡುವ ಹೂಡಿಕೆ ಕಡಿಮೆಯಾಗಿರುವ ಸಾಧ್ಯತೆ ಇದೆ.

ಕಾರ್ಯಕರ್ತರ ಸಹಕಾರದ ಕೊರತೆ

ನಲ್ ಊಹೆ (ಹೆಚ್$_0$): ಕಾರ್ಯಕರ್ತರ ಸಹಕಾರ ಕೊರತೆ ಮತ್ತು ಹೂಡಿಕೆದಾರ ಪ್ರತಿ ತಿಂಗಳು ಉಳಿತಾಯದಲ್ಲಿ ಹೂಡುವ ಮೊತ್ತ ಎರಡಕ್ಕೂ ಒಂದಕ್ಕೊಂದು ಸಂಬಂಧವಿಲ್ಲ.

ಪರ್ಯಾಯ ಊಹೆ (ಹೆಚ್$_1$): ಕಾರ್ಯಕರ್ತರ ಸಹಕಾರ ಕೊರತೆ ಹಾಗೂ ಪ್ರತಿ ತಿಂಗಳೂ ಹೂಡುವ ಮೊತ್ತ ಒಂದಕ್ಕೊಂದು ಸಂಬಂಧವಿದೆ. ಅಂದರೆ ಈ ಕೊರತೆ ಹೂಡುವ ಹಣದ ಮೇಲೆ ಪರಿಣಾಮ ಬೀರುತ್ತದೆ. ಲೆಕ್ಕಾಚಾರ ಮಾಡಿದ χ^2= 21.17. χ^2 ಕೊಷ್ಟಕದಲ್ಲಿ ಇರುವಂತೆ χ^2 = 21.0. ಲೆಕ್ಕಾಚಾರ ಮಾಡಿದ χ^2 ಮೊತ್ತವು. ಕೋಷ್ಟಕದ χ^2 ಮೊತ್ತಕ್ಕಿಂತ ಹೆಚ್ಚು ಇರುವುದರಿಂದ ನಲ್ ಊಹೆಯನ್ನು ತಿರಸ್ಕರಿಸಲಾಗುತ್ತದೆ. ಅಂದರೆ ಕಾರ್ಯಕರ್ತರ ಸಹಕಾರದ ಕೊರತೆ, ಹೂಡಿಕೆದಾರನು ಹೂಡುವ ಮೊತ್ತದ ಮೇಲೆ ಪರಿಣಾಮ ಬೀರುತ್ತದೆ. ಆದುದರಿಂದ ಈ ಕೊರತೆಯಿಂದಾಗಿ ಹಣ ಹೂಡಿಕೆ ಕಡಿಮೆಯಾಗುವ ಸಾಧ್ಯತೆ ಇದೆ.

ಅಗತ್ಯ ಮಾಹಿತಿ ಕೊರತೆ

ನಲ್ ಊಹೆ (ಹೆಚ್$_0$): ಅಗತ್ಯ ಮಾಹಿತಿ ಕೊರತೆ ಮತ್ತು ಹೂಡಿಕೆದಾರ ಪ್ರತಿ ತಿಂಗಳು ಹೂಡಿಕೆ ಮಾಡುವ ಮೊತ್ತ ಎರಡು ಸ್ವತಂತ್ರ ಮಾಪಕಗಳು. ಎರಡಕ್ಕೂ ಒಂದಕ್ಕೊಂದು ಸಂಬಂಧವಿಲ್ಲ.

ಪರ್ಯಾಯ ಊಹೆ (ಹೆಚ್$_1$): ಅಗತ್ಯ ಮಾಹಿತಿ ಕೊರತೆ ಮತ್ತು ಹೂಡಿಕೆ ಮಾಡುವ ಹಣ ಎರಡಕ್ಕೂ ಪರಸ್ಪರ ಸಂಬಂಧವಿದೆ. ಲೆಕ್ಕಾಚಾರ ಮಾಡಿದ ಕದ χ^2= 12.49 ಇದ್ದರೆ ಕದ χ^2 ಕೋಷ್ಟಕದಲ್ಲಿನ ಮೊತ್ತ 21.0. ಲೆಕ್ಕಾಚಾರ ಮಾಡಿದ ಕದ χ^2 ಬೆಲೆಯು ಕೋಷ್ಟಕದ ಬೆಲೆಗಿಂತ ಕಡಿಮೆ ಇರುವುದರಿಂದ ನಲ್ ಊಹೆಯನ್ನು ಒಪ್ಪಿಕೊಳ್ಳಲಾಗುವುದು. ಆದುದರಿಂದ ಅಗತ್ಯ ಮಾಹಿತಿ ಕೊರತೆ ಹಾಗೂ ಪ್ರತಿ ತಿಂಗಳು ಹೂಡಿಕೆ ಮಾಡುವ ಹಣ ಒಂದಕ್ಕೊಂದು ಸಂಬಂಧವಿದೆ. ಇದರ ಅರ್ಥ ಅಗತ್ಯ ಮಾಹಿತಿ ಕೊರತೆ ಹೂಡಿಕೆ ಮಾಡುವ ಹಣದ ಮೇಲೆ ಋಣಾತ್ಮಕ ಪರಿಣಾಮ ಬೀರುವ ಸಾಧ್ಯತೆ ಇದೆ.

ಒಟ್ಟಿನಲ್ಲಿ ಹೂಡಿಕೆದಾರ ಅನುಭವಿಸಿದ ತೊಂದರೆ ತೊಡಕುಗಳು ಹೂಡಿಕೆ ಮಾಡುವ ಹಣದ ಮೇಲೆ ಮಿಶ್ರ ಪರಿಣಾಮ ಬೀರುತ್ತದೆ.

ಉದ್ಯೋಗ ಮಾತ್ತು ಹೂಡಿಕೆಗಳು

ಉದ್ಯೋಗ ಮತ್ತು ಪ್ರತಿ ತಿಂಗಳ ಹೂಡಿಕೆ ಮಾಡುವ ಮೊತ್ತ ನೇರ ಸಂಬಂಧ ವಿಮೆ ಎರಡು ಮಾಪಕಗಳಾಗಿವೆ. ಖಾಸಗಿ ಸಂಸ್ಥೆಗಳಲ್ಲಿ ಉದ್ಯೋಗ ಮಾಡುವ ಹೂಡಿಕೆದಾರರ ಆದಾಯ ಕಡಿಮೆ ಇರುವುದರಿಂದ ಅವರು ಕಷ್ಟದ ಪ್ರತಿ ತಿಂಗಳು, ಹೂಡಿಕೆ ಮೊತ್ತ ಕಡಿಮೆ ಇದ್ದರೂ ಹೂಡಿಕೆ ಮಾಡುತ್ತಾರೆ. ಆದುದರಿಂದ ಮಾಡುತ್ತಿರುವ ಉದ್ಯೋಗ ಮತ್ತು ಪ್ರತಿ ತಿಂಗಳು ಹೂಡಿಕೆ ಮಾಡುವ ಹಣ ಇವುಗಳ ಸಂಬಂಧವನ್ನು χ^2 ಪರೀಕ್ಷೆಗೆ ಒಳಪಡಿಸಿದಾಗ ಈ ಕೆಳಗಿನ ಫಲಿತಾಂಶ ದೊರೆಯಿತು.

ಕೋಷ್ಟಕ 24


ಹೂಡಿಕೆದಾರರ ಉದ್ಯೋಗ ಮತ್ತು ಮಾಸಿಕ ಹೂಡಿಕೆ ಮೊತ್ತ

ಮಾಸಿಕ ಹೂಡಿಕೆ	ಉದ್ಯೋಗ							
	ವ್ಯಾಪಾರ	ಮನೆವಾರ್ತೆ	ಸರಕಾರಿ ಉದ್ಯೋಗ	ವ್ಯವಸಾಯ	ಖಾಸಗಿ ಸಂಸ್ಥೆ	ನಿವೃತ್ತ	ಇತರ	ಒಟ್ಟು
ರೂ. 1000ಕ್ಕಿಂತ ಕೆಳಗೆ	05	12	06	04	25	02	03	57
ರೂ. 1000 ದಿಂದ ರೂ. 3000	01	10	05	02	12	01	01	32
ರೂ. 3000 ದಿಂದ ರೂ. 6000	02	10	05	01	03	00	01	22
ರೂ. 6000 ಕ್ಕಿಂತ ಹೆಚ್ಚು	02	02	02	01	01	00	01	09
ಒಟ್ಟು	**10**	**34**	**18**	**08**	**41**	**03**	**06**	**120**

ಆಕರ: ಕ್ಷೇತ್ರ ಸಮೀಕ್ಷೆ

ನಕ್ಷೆ 24

ಹೂಡಿಕೆದಾರರ ಉದ್ಯೋಗ ಮತ್ತು ಮಾಸಿಕ ಹೂಡಿಕೆ ಮೊತ್ತ



ನಲ್ ಊಹೆ (ಹೆಚ್$_0$): ಹೂಡಿಕೆದಾರರ ಉದ್ಯೋಗ ಹಾಗೂ ಪ್ರತಿ ತಿಂಗಳು ಹೂಡಿಕೆ ಮಾಡುವ ಮೊತ್ತ ಎರಡು ಸ್ವತಂತ್ರ ಮಾಪಕಗಳಾಗಿವೆ, ಇವುಗಳಿಗೆ ಪರಸ್ಪರ ಸಂಬಂಧ ಇಲ್ಲ.

ಪರ್ಯಾಯ ಊಹೆ (ಹೆಚ್$_1$): ಹೂಡಿಕೆದಾರರು ಹೂಡಿಕೆ ಮಾಡುವ ಉಳಿತಾಯ ಮೊತ್ತಕ್ಕೂ, ಅವರು ಮಾಡುವ ಉದ್ಯೋಗಕ್ಕೂ ನೇರ ಸಂಬಂಧವಿದೆ.

ಲೆಕ್ಕಾಚಾರ ಮಾಡಿದ χ^2 ಪ್ರಮಾಣ 20.83. χ^2 ಕೋಷ್ಟಕದಂತೆ 28.9. ಲೆಕ್ಕಾಚಾರ ಮಾಡಿದ χ^2 ಬೆಲೆ ಕೋಷ್ಟಕದ ಬೆಲೆಗಿಂತ ಕಡಿಮೆ ಇರುವುದರಿಂದ ನಲ್ ಊಹೆಯನ್ನು ಒಪ್ಪಿಕೊಳ್ಳಲಾಗುತ್ತದೆ. ಅಂದರೆ ಮಾಡುವ ಉದ್ಯೋಗಕ್ಕೂ ಹೂಡಿಕೆ ಮಾಡುವ ಹಣದ ಮೊತ್ತಕ್ಕೂ ಸಂಬಂಧವಿಲ್ಲ. ಇದನ್ನು ಈ ಸಮೀಕ್ಷೆಯಲ್ಲಿ ವೇದ್ಯವಾಗುತ್ತದೆ. ಏಕೆಂದರೆ ಖಾಸಗಿ ಸಂಸ್ಥೆಯ ಉದ್ಯೋಗದಲ್ಲಿ ಸಂಬಳ ಕಡಿಮೆ ಇದ್ದರೂ ಉಳಿತಾಯದಲ್ಲಿ ಅವರ ಪಾಲು ಹೆಚ್ಚು ಇದೆ. ಒಟ್ಟು ಸಮೀಕ್ಷೆಯಲ್ಲಿ ಭಾಗವಹಿಸಿದ 120 ಮಾಹಿತಿದಾರರಲ್ಲಿ 41 ಮಾಹಿತಿದಾರರು ಖಾಸಗಿ ಸಂಸ್ಥೆಯಲ್ಲಿ ಉದ್ಯೋಗಗಳು. ಮೇಲಿನ ಕೋಷ್ಟಕದಿಂದ ಮಾಸಿಕ ರೂ. 1000ಕ್ಕಿಂತ ಕೆಳಗೆ ಉಳಿತಾಯ ಮಾಡುವ 57 ಜನ ಮಹಿಳಾ ಹೂಡಿಕೆದಾರರಲ್ಲಿ 25 ಜನ ಖಾಸಗಿ ಸಂಸ್ಥೆಗಳಲ್ಲಿ ಉದ್ಯೋಗ ನಿರ್ವಹಿಸುತ್ತಿರುವವರಾಗಿದ್ದಾರೆ.

ಅಧ್ಯಾಯ ೫

ಅಧ್ಯಯನ ಫಲಿತಾಂಶದ ಸಾರಾಂಶ, ಸಲಹೆ ಸೂಚನೆಗಳು ಹಾಗೂ ಮುಕ್ತಾಯ

ಅಧ್ಯಾಯ 5

ಅಧ್ಯಯನದ ಫಲಿತಾಂಶದ ಸಾರಾಂಶ, ಸಲಹೆ ಸೂಚನೆಗಳು ಮತ್ತು ಮುಕ್ತಾಯ

ಅಂಚೆ ಕಛೇರಿಯ ಉಳಿತಾಯ ಯೋಜನೆಗಳ ಕುರಿತು ಪುತ್ತೂರು ಪಟ್ಟಣದ ಮಹಿಳಾ ಹೂಡಿಕೆದಾರರ ಅನಿಸಿಕೆಗಳ ಕುರಿತು ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಪುತ್ತೂರು ಪಟ್ಟಣದ 120 ಮಹಿಳಾ ಹೂಡಿಕೆದಾರರನ್ನು ಸಮೀಕ್ಷೆಗೆ ಆಯ್ಕೆ ಮಾಡಲಾಗಿದೆ. ಅಧ್ಯಯನವನ್ನು 2015–16 ಆರ್ಥಿಕ ವರ್ಷದ ಅವಧಿಗೆ ನಿಯಮಿತಗೊಳಿಸಲಾಗಿದೆ. ಪ್ರಾಥಮಿಕ ಹಾಗೂ ಅನುಷಂಗಿಕ ಮೂಲಗಳಿಂದ ಸಂಗ್ರಹಿಸಿದ ಮಾಹಿತಿ, ದತ್ತಾಂಶಗಳನ್ನು ಸಂಖ್ಯಾ ಶಾಸ್ತ್ರದ ಉಪಕರಣಗಳನ್ನು ಉಪಯೋಗಿಸಿ ವಿಮರ್ಶೆ, ವಿಶ್ಲೇಷಣೆ ಮಾಡಲಾಗಿದೆ. ಈ ಅಧ್ಯಯನ ಕ್ಷೇತ್ರಕ್ಕೆ ಸಂಬಂಧಿಸಿದ ಗ್ರಂಥ ಹಾಗೂ ಸಾಹಿತ್ಯ ಪರಾಮರ್ಶೆ ಮಾಡಿದಾಗ ಪ್ರಸಕ್ತ ಕ್ಷೇತ್ರದಲ್ಲಿ ಇಲ್ಲಿಯವರೆಗೆ ಯಾವುದೇ ಅಧ್ಯಯನ ನಡೆಸಿದ್ದು ಕಂಡು ಬರದ ಕಾರಣ 'ಅಂಚೆ ಕಛೇರಿಯ ಉಳಿತಾಯ ಯೋಜನೆಗಳ ಕುರಿತು ಪುತ್ತೂರು ಪಟ್ಟಣದ ಮಹಿಳಾ ಹೂಡಿಕೆದಾರರ ಅನಿಸಿಕೆಗಳು' ಎನ್ನುವ ವಿಷಯದ ಫಲಿತಾಂಶದ ಸಾರಾಂಶವನ್ನು ಈ ಕೆಳಗೆ ನೀಡಲಾಗಿದೆ.

ಹೂಡಿಕೆದಾರನ ವಯಸ್ಸು

ಸಮೀಕ್ಷೆಯಲ್ಲಿ ಭಾಗವಹಿಸಿದ 120 ಮಹಿಳಾ ಹೂಡಿಕೆದಾರರಲ್ಲಿ 52 ಜನ ಮಹಿಳೆಯರು (43.3 ಶೇ.) 25–35 ವರ್ಷಗಳ ಶ್ರೇಣಿಯಲ್ಲಿ ಇದ್ದಾರೆ. ಬಹುಪಾಲು ಶೇ. 75.8 ಶೇ. ಮಹಿಳೆಯರು 25–45 ವರ್ಷಗಳ ಶ್ರೇಣಿಯಲ್ಲಿ ಇದ್ದಾರೆ. ಅಂದರೆ ಹೆಚ್ಚಿನ ಮಹಿಳಾ ಹೂಡಿಕೆದಾರರು 25 ವರ್ಷಕ್ಕಿಂತ ಮೇಲ್ಪಟ್ಟವರು.

ಹೂಡಿಕೆದಾರರ ಆದಾಯ ವಿವರ

ಸಾಮಾನ್ಯವಾಗಿ ಆಯ್ಕೆ ಮಾಡಿದ ಮಹಿಳೆಯರಲ್ಲಿ ಬಹುಪಾಲು (48.3 ಶೇ.) ರೂ. 1,00,000 ಕ್ಕಿಂತ ಕಡಿಮೆ ಆದಾಯವಿರುವವರು ಖಾಸಗಿ ಸಂಸ್ಥೆಯ ಉದ್ಯೋಗದಲ್ಲಿ ಆದಾಯ ಕಡಿಮೆ ಇರುವುದರಿಂದ ಭವಿಷ್ಯದ ಯೋಜನೆಯನ್ನು ಗಮನದಲ್ಲಿಟ್ಟು, ಈ ಉದ್ಯೋಗಗಳು ಹೆಚ್ಚಾಗಿ ಉಳಿತಾಯ ಮಾಡುತ್ತಾರೆ ಎಂದು ತಿಳಿದು ಬಂದಿದೆ.

ವಿದ್ಯಾಭ್ಯಾಸ

ಹೂಡಿಕೆದಾರ ಮಹಿಳೆಯರಲ್ಲಿ ಬಹು ಸಂಖ್ಯಾತರಲು ಪಿ.ಯು.ಸಿ. ವಿದ್ಯಾಭ್ಯಾಸ ಪಡೆದವರು (90.8 ಶೇ.)

ವೈವಾಹಿಕ ವಿವರ

ಸಮೀಕ್ಷೆಯ ಮಹಿಳಾ ಹೂಡಿಕೆದಾರರಲ್ಲಿ 76.7 ಶೇ. ಮಹಿಳೆಯರು ವಿವಾಹಿತರು (92 ಮಹಿಳೆಯರು), ವಿವಾಹಿತ ಮಹಿಳೆಯರಿಗೆ ಕುಟುಂಬದ ಜವಾಬ್ದಾರಿ ಇರುವುದರಿಂದ ಉಳಿತಾಯದಲ್ಲಿ ಹೆಚ್ಚಿನ ಉತ್ಸಾಹ ಹೊಂದಿದ್ದಾರೆ ಎನ್ನಬಹುದು.

ಉದ್ಯೋಗ

ಅಧ್ಯಯನದಲ್ಲಿ ಕಂಡಂತೆ ಹೆಚ್ಚಿನ ಮಹಿಳಾ ಹೂಡಿಕೆದಾರರ ಖಾಸಗಿ ಸಂಸ್ಥೆಯ ಉದ್ಯೋಗಗಳ (34.2 ಶೇ. 41 ಮಹಿಳೆಯರು) ಖಾಸಗಿ ಸಂಸ್ಥೆ ಉದ್ಯೋಗಿಗಳಿಗೆ ಸಂಬಳದ ಆದಾಯ ಕಡಿಮೆ ಇರುವುದರಿಂದ ಅವರಲ್ಲಿ ಉಳಿತಾಯದ ಹವ್ಯಾಸ ಜಾಸ್ತಿ ಎಂದು ತಿಳಿಯಬಹುದು.

ಹೂಡಿಕೆದಾರರ ಆದಾಯ

ಬಹುಪಾಲು ಹೂಡಿಕೆದಾರರು ರೂ. 100000ಕ್ಕಿಂತ ಕಡಿಮೆ ಆದಾಯವಿರುವವರು. ಇವರ ಪ್ರಮಾಣ ಶೇ. 48.3 (58 ಮಹಿಳೆಯರು).

ಹೂಡಿಕೆಗಳ ಅವಧಿ

ಈ ಸಮೀಕ್ಷೆಯಲ್ಲಿ ಕಂಡುಬಂದಂತೆ ಹೂಡಿಕೆದಾರರಲ್ಲಿ ಕಡಿಮೆ ಆದಾಯದವರು ಬಹುಪಾಲು ಇರುವುದರಿಂದ ಅವರಿಗೆ ಹೆಚ್ಚು ಸಮಯದ ಅವಧಿಗೆ ಹೂಡಿಕೆ ಮಾಡಲು ಲಭ್ಯವಿರುವುದಿಲ್ಲ. ಆದುದರಿಂದ 60 ಶೇ. ಹೂಡಿಕೆದಾರರು ಅಲ್ಪಾವಧಿ ಹೂಡಿಕೆಯನ್ನು ಇಷ್ಟಪಟ್ಟಿದ್ದು ಕಾಣುತ್ತದೆ.

ಯೋಜನೆಗಳ ಕುರಿತು ತಿಳುವಳಿಕೆ

ಸಮೀಕ್ಷೆಯ ಫಲಿತಾಂಶದಂತೆ ಹೆಚ್ಚಿನ ಹೂಡಿಕೆದಾರರಿಗೆ ಅಂಚೆ ಕಛೇರಿಯ ಉಳಿತಾಯ ಯೋಜನೆಗಳ ಕುರಿತು ತಿಳುವಳಿಕೆ ಇಲ್ಲ. ಈ ಸಮೀಕ್ಷೆಯಲ್ಲಿ ಕೂಡಾ ಯೋಜನೆಗಳ ಕುರಿತು ತಿಳಿಯದಿರುವ ಸಂಖ್ಯೆ ತಿಳಿದಿರುವವರ ಸಂಖ್ಯೆಗಿಂತ ಜಾಸ್ತಿ ಇದೆ. ಅಂದರೆ ಯೋಜನೆಗಳ ಪ್ರಚಾರ ಕಾರ್ಯದ ಕೊರತೆ ಇದೆ ಎಂದು ಹೇಳಬಹುದು.

ಮಾಹಿತಿ ಮೂಲ

ಹೆಚ್ಚಿನ ಹೂಡಿಕೆದಾರರಿಗೆ ಗೆಳೆಯರು ಮತ್ತು ಸಂಬಂಧಿಕರು ಯೋಜನೆಗಳ ಬಗ್ಗೆ ಮಾಹಿತಿ ನೀಡಿದ್ದಾರೆ. 40 ಮಾಹಿತಿದಾರರು (33.3 ಶೇ.). ಈ ಮೂಲದಿಂದ ಮಾಹಿತಿ ಪಡೆದಿದ್ದಾರೆ. ಮಾಹಿತಿ ಮೂಲಗಳಲ್ಲಿ ಜಾಹೀರಾತು ಪ್ರಮಾಣ ನಿರೀಕ್ಷಿತ ಮಟ್ಟದಲ್ಲಿಲ್ಲ. ಈ ಮೂಲದಿಂದ ಮಾಹಿತಿ ಪಡೆದವರು 26.7 ಶೇ.

ಹೂಡಿಕೆಯ ಉದ್ದೇಶ

ಮಹಿಳೆಯರು ಕುಟುಂಬ ನಿರ್ವಹಣೆಯಲ್ಲಿ ಗಣನೀಯ ಪಾತ್ರ ವಹಿಸುವುದರಿಂದ ಈ ಜವಾಬ್ದಾರಿಗಾಗಿ ಉಳಿತಾಯ ಮಾಡಲು ಬಯಸುತ್ತಾರೆ. ಕುಟುಂಬದ ಭವಿಷ್ಯದ ಆರ್ಥಿಕ ಅವಶ್ಯಕತೆ ಪೂರೈಸಲು ಎಂದು ಸಮೀಕ್ಷೆಯಲ್ಲಿ ಭಾಗವಹಿಸಿದ ಮಹಿಳೆಯರು ಇದಕ್ಕೆ ಪ್ರಥಮ ಪ್ರಾಶಸ್ತ್ಯ ನೀಡಿದ್ದಾರೆ.

ಹೂಡಿಕೆ ಮಾಡಿದ ಯೋಜನೆಗಳು

ಸಮೀಕ್ಷೆಯಲ್ಲಿ ಭಾಗವಹಿಸಿದ ಮಹಿಳೆಯರಲ್ಲಿ 50.0 ಶೇ.ದಷ್ಟು (60 ಮಹಿಳೆಯರು) ಆವರ್ತಕ ಠೇವಣಿಯಲ್ಲಿ ಹೂಡಿಕೆ ಮಾಡಿದ್ದಾರೆ. ಮಾಸಿಕ ಆದಾಯ ಯೋಜನೆಗೆ ನಂತರದ ಸ್ಥಾನ. ಇವರ ಪಾಲು 45.0 ಶೇ.

ಅವಧಿ ತೀರಿದ ಠೇವಣಿಗಳು

ಬಹುಪಾಲು ಹೂಡಿಕೆದಾರರು ಠೇವಣಿಗಳ ಅವಧಿ ಮುಕ್ತಾಯವಾದಾಗ ಅದೇ ಅಂಚೆ ಕಛೇರಿಯ ಇತರ ಯೋಜನೆಗಳಲ್ಲಿ ಹಣ ಹೂಡಲು ಇಷ್ಟಪಟ್ಟಿದ್ದು ಸಮೀಕ್ಷೆಯಲ್ಲಿ ಕಂಡು ಬರುತ್ತದೆ.

ಇದರ ಪ್ರಮಾಣ 45.0 ಶೇ. ಎರಡನೇ ಸ್ಥಾನ (21.7 ಶೇ.) ಠೇವಣಿಯನ್ನು ಅದೇ ಯೋಜನೆಯಲ್ಲಿ ನವೀಕರಣ ಮಾಡುವುದಕ್ಕೆ ಸಿಕ್ಕಿದೆ. ಇದು ಅಂಚೆ ಕಛೇರಿಯ ಯೋಜನೆಯ ಆಕರ್ಷಕ ಗುಣವನ್ನು ತೋರಿಸುತ್ತದೆ. ಅಂದರೆ ಯೋಜನೆಗಳು ಮಹಿಳಾ ಹೂಡಿಕೆದಾರರನ್ನು ಆಕರ್ಷಿಸುತ್ತದೆ ಮತ್ತು ಹೂಡಿಕೆದಾರರಿಗೆ ತೃಪ್ತಿಯನ್ನು ಕೊಟ್ಟಿದೆ ಎನ್ನಬಹುದು.

ಮಾಸಿಕ ಹೂಡಿಕೆಯ ಮೊತ್ತ

ಹೆಚ್ಚಿನ ಮಹಿಳಾ ಹೂಡಿಕೆದಾರರು (47.5 ಶೇ.) ಪ್ರತಿ ತಿಂಗಳು ರೂ. 1000 ಕ್ಕಿಂತ ಕಡಿಮೆ ಹೂಡಿಕೆ ಮಾಡುತ್ತಾರೆ. ಸಮೀಕ್ಷೆಯಲ್ಲಿ ಭಾಗವಹಿಸಿದವರು ಹೆಚ್ಚಿನವರು ಕಡೆಮೆ. ಆದಾಯ ಉಳ್ಳವರು ಎನ್ನುವುದು ಇದಕ್ಕೆ ಕಾರಣವಾಗಿರಬಹುದು.

ವ್ಯವಹಾರ ಸಂಪರ್ಕದ ಅವಧಿ

ಹೂಡಿಕೆದಾರರಲ್ಲಿ ಹೆಚ್ಚಿನ ಮಹಿಳೆಯರು ಅಲ್ಪಾವಧಿಗೆ ಹೂಡಿಕೆ ಮಾಡಿದವರು. ಆದುದರಿಂದ ಹೆಚ್ಚಿನ ಹೂಡಿಕೆದಾರರು ಕಛೇರಿಯೊಡನೆ ಐದು ವರ್ಷಕ್ಕಿಂತ ಕಡಿಮೆ ವ್ಯವಹಾರ ಸಂಪರ್ಕ ಹೊಂದಿದವರು.

ಹೂಡಿಕೆಯ ಪರ್ಯಾಯ ಅವಕಾಶಗಳು

ಅಂಚೆ ಕಛೇರಿ, ಯೋಜನೆಗಳು, ರಾಷ್ಟ್ರೀಕೃತ ಬ್ಯಾಂಕುಗಳು, ಖಾಸಗಿ ಬ್ಯಾಂಕುಗಳು, ವಿಮಾ ಯೋಜನೆಗಳು, ಶೇರು ಮಾರುಕಟ್ಟೆ ಮತ್ತು ಖಾಸಗಿ ಹಣಕಾಸು ಸಂಸ್ಥೆಗಳು ಇತ್ಯಾದಿ ಹೂಡಿಕೆ ಅವಕಾಶಗಳ ಪೈಕಿ, ಈ ಸಮೀಕ್ಷೆಯಲ್ಲಿ ಭಾಗವಹಿಸಿದ ಮಹಿಳಾ ಹೂಡಿಕೆದಾರರು ಅಂಚೆ ಕಛೇರಿಯ

ಯೋಜನೆಗಳಿಗೆ ಪ್ರಥಮ ಪ್ರಾಶಸ್ತ್ಯ ನೀಡಿದ್ದಾರೆ (45.0 ಶೇ.). ಇವರ ಸಂಖ್ಯೆ 54 ಮಹಿಳೆಯರು, ನಂತರದ ಸ್ಥಾನ ರಾಷ್ಟ್ರೀಕೃತ ಬ್ಯಾಂಕುಗಳಿಗೆ ನೀಡಿದ್ದಾರೆ. ಇವರ ಪ್ರಮಾಣ 35.0 ಶೇ. ಠೇವಣಿಗಳಿಗೆ ಭದ್ರತೆ, ವ್ಯವಹಾರಗಳಲ್ಲಿ ಪಾರದರ್ಶಕತೆ, ಸಿಬ್ಬಂದಿಗಳ ಆತ್ಮೀಯತೆ, ಕಡಿಮೆ ವಂಚನೆ ಪ್ರಕರಣಗಳಿಂದ ಅಂಚೆ ಕಛೇರಿಯ ಯೋಜನೆಗಳಿಗೆ ಮಹಿಳಾ ಹೂಡಿಕೆದಾರರು ಪ್ರಥಮಶ್ರೇಣಿಯನ್ನು ನೀಡುವಂತೆ ಮಾಡಿದೆ. ರಾಷ್ಟ್ರೀಕೃತ ಬ್ಯಾಂಕುಗಳು ಇದೇ ಕಾರಣಗಳಿಂದಾಗಿ ನಂತರದ ಪ್ರಾಶಸ್ತ್ಯ ಪಡೆದಿದೆ.

ಅಂಚೆ ಕಛೇರಿಗೆ ಆದ್ಯತೆ ನೀಡಲು ಕಾರಣಗಳು

ಸಮೀಕ್ಷೆಯ ಅಧ್ಯಯನದಂತೆ ಠೇವಣಿಗಳ ಭದ್ರತೆ ಹಾಗೂ ಅಂಚೆ ಕಛೇರಿಗಳ ಮೇಲಿನ ನಂಬಿಕೆ ಇವುಗಳು ಅಂಚೆ ಕಛೇರಿಯ ಉಳಿತಾಯ ಯೋಜನೆಗಳನ್ನು ಆಯ್ಕೆ ಮಾಡಲು ಕಾರಣ ಎಂದು ಹೂಡಿದಾರರು ತಿಳಿಸಿದ್ದಾರೆ. ದೇಶಾದ್ಯಂತ ಏಕರೂಪೀ ಯೋಜನೆಗಳು ಎರಡನೇ ಪ್ರಾಶಸ್ತ್ಯಗಳಿಸಿದೆ.

ಯೋಜನೆಗಳ ಕುರಿತು ಅಭಿಪ್ರಾಯ

ಈ 'ಅವಧಿ ಪೂರೈಸಿದ ಕೂಡಲೇ ಠೇವಣಿ ಹಣ ಮರುಪಾವತಿ ಮಾಡಿದ್ದಾರೆಯೇ ಎನ್ನುವ ಪ್ರಶ್ನೆಗೆ 43.3 ಶೇ. ಹೂಡಿಕೆದಾರರು ಬಲವಾದ ಅಸಮ್ಮತಿ ವ್ಯಕ್ತ ಪಡಿಸಿದ್ದಾರೆ.

ಅಂಚೆ ಕಛೇರಿ ಉಳಿತಾಯವನ್ನು ಪ್ರೋತ್ಸಾಹಿಸಿದ ಎನ್ನುವ ಹೇಳಿಕೆಗೆ 15.0 ಶೇ. ಬಲವಾದ ಸಮ್ಮತಿ ಸೂಚಿಸಿದರೆ 16.7 ಶೇ. ಬಲವಾದ ಅಸಮ್ಮತಿ ಸೂಚಿಸಿದ್ದಾರೆ.

ತೆರಿಗೆ ಉಳಿತಾಯಕ್ಕೆ ಯೋಜನೆಗಳು ಸಹಕಾರಿ ಆಗಿದೆಯೇ ಎನ್ನುವ ಹೇಳಿಕೆಗೆ ಬಹುಪಾಲು (51.7 ಶೇ.) ಹೂಡಿಕೆದಾರರು ಸಮ್ಮತಿ ಸೂಚಿಸಲಿಲ್ಲ.

ಅಂಚೆ ಕಛೇರಿ ಯೋಜನೆಗಳು ಜೀವನಕ್ಕೆ ಭದ್ರತೆ ಒದಗಿಸಿದೆ ಎನ್ನುವ ಹೇಳಿಕೆಗೆ ಕೂಡ 48.3 ಶೇ. ಮಹಿಳಾ ಹೂಡಿಕೆದಾರರು ಋಣಾತ್ಮಕ ಪ್ರತಿಕ್ರಿಯೆ ನೀಡಿದ್ದಾರೆ.

ಒಟ್ಟಿನಲ್ಲಿ, ಯೋಜನೆಗಳ ಕುರಿತು ಹೂಡಿಕೆದಾರರ ಅಭಿಪ್ರಾಯ ಅಂಚೆ ಕಛೇರಿಗಳಿಗೆ ಅನುಕೂಲಕರವಾಗಿ ಇಲ್ಲ.

ಹೂಡಿಕೆದಾರರು ಅನುಭವಿಸಿದ ತೊಂದರೆಗಳು

ಹೆಚ್ಚಿನ ಹೂಡಿಕೆದಾರರು ಹೂಡಿಕೆಗಳ ನಿಯಮಾವಳಿ ಅತಿಯಾಯಿತು ಎಂದು ಭಾವಿಸುವುದಿಲ್ಲ.

ಉಳಿತಾಯ ಪ್ರಕ್ರಿಯೆಯಲ್ಲಿ ನವೀಕರಣ ಅಥವಾ ಠೇವಣಿ ಹಿಂಪಡೆತದ ಸಂದರ್ಭದಲ್ಲಿ ಅನಗತ್ಯ ಕಾಲಹರಣ ಮಾಡುತ್ತದೆ ಎನ್ನುವ ಅಭಿಪ್ರಾಯ ವ್ಯಕ್ತವಾಯಿತು.

ಹೆಚ್ಚಿನ ಹೂಡಿಕೆದಾರರು ಹೂಡಿಕೆಯ ಸಂದರ್ಭದಲ್ಲಿ ಸಿಬಂದಿಯ ಸಹಕಾರದ ಕೊರತೆ ಹಾಗೂ ಅಂಚೆ ಕಾರ್ಯಕರ್ತರ ಸಹಾಯದ ಕೊರತೆ ಅನುಭವಿಸಲಿಲ್ಲ.

ಹೂಡಿಕೆಯ ಸಂದರ್ಭದಲ್ಲಿ ಅಗತ್ಯ ಮಾಹಿತಿಗಳ ನೀಡಿಕೆ ಕೊರತೆ ಅನುಭವಿಸಿದ್ದೀರಾ ಎನ್ನುವ ಹೇಳಿಕೆಗೆ 'ಹೌದು' ಮತ್ತು 'ಇಲ್ಲ' ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದವರು ಸಮ ಪ್ರಮಾಣದಲ್ಲಿ ಇದ್ದಾರೆ.

ಯೋಜನೆಗಳ ಕುರಿತು ಹೂಡಿದಾರರ ಒಟ್ಟು ಅಭಿಪ್ರಾಯ ಯೋಜನೆಗಳ ಹಾಗೂ ಸಿಬ್ಬಂದಿಯ ಸೇವಾ ಮಟ್ಟ ಕುರಿತು 'ಸಾಮಾನ್ಯ' ದಿಂದ 'ಉತ್ತಮ' ಮಟ್ಟ ಎಂದು ಹೆಚ್ಚಿನ ಹೂಡಿಕೆದಾರರು ತಿಳಿಸಿರುತ್ತಾರೆ. 'ಅತೃಪ್ತಿಕರ' ಎಂದು 16 ಜನ ಹೂಡಿಕೆದಾರರು ಹೇಳಿದರೆ 'ಪರಮೋತ್ತಮ' ಎಂದು ಎರಡು ಜನ ಅಭಿಪ್ರಾಯವನ್ನು ತಿಳಿಸಿದ್ದಾರೆ.

ಕೊನೆಯ ಅಭಿಪ್ರಾಯ

ಕೊನೆಯ ಪ್ರಶ್ನೆಗಳಾದ ಅಂಚೆ ಕಛೇರಿಯು ಗ್ರಾಹಕರಿಗೆ ಉತ್ತಮ ಸೇವೆ ನೀಡುತ್ತಿದ್ದರೂ ಅಂಚೆ ಕಛೇರಿಯ ಯೋಜನೆಗಳು ಇತರ ಸಂಸ್ಥೆಗಳ ಯೋಜನೆಗಳಿಗಿಂತ ಉತ್ತಮ ಎಂದು ಭಾವಿಸುತ್ತಾರೆ ಮತ್ತು ಅಂಚೆ ಕಛೇರಿ ಯೋಜನೆಗಳನ್ನು ಇತರರಿಗೆ ಶಿಫಾರಸು ಮಾಡುತ್ತೀರಾ ಪ್ರಶ್ನೆಗಳಿಗೆ ಧನಾತ್ಮಕ ಪ್ರತಿಕ್ರಿಯೆಯನ್ನು ಬಹು ಸಂಖ್ಯಾತ ಹೂಡಿಕೆದಾರರು ವ್ಯಕ್ತಪಡಿಸಿದ್ದಾರೆ.

ಕೊನೆಯದಾಗಿ ಅಂಚೆ ಕಛೇರಿಯ ಯೋಜನೆಗಳು ಈ ಸಮೀಕ್ಷೆಯಲ್ಲಿ ಭಾಗವಹಿಸಿದ ಮಹಿಳಾ ಹೂಡಿಕೆದಾರರಿಗೆ ತೃಪ್ತಿಯನ್ನು ನೀಡಿದೆ ಎನ್ನಬಹುದು.

ಸಂಖ್ಯಾ ಶಾಸ್ತ್ರದ ಉಪಕರಣಗಳ ಮೂಲಕ ವಿಶ್ಲೇಷಣೆ – ಕೈಸ್ಕ್ವೇರ್ ವಿಶ್ಲೇಷಣೆ

೧. ಅಂಚೆ ಕಛೇರಿಯ ಯೋಜನೆಗಳ ಮತ್ತು ಕಾರ್ಯವಿಧಾನಗಳಿಗೂ ಹಾಗೂ ಹೂಡಿಕೆದಾರರ ವೈವಾಹಿಕ ಸ್ಥಿತಿಗೂ ಹತ್ತಿರದ ಸಂಬಂಧವಿದೆ. ಅವಿವಾಹಿತರು ಯೋಜನೆಗಳ ಬಗ್ಗೆ ಅತೃಪ್ತಿಕರ ಎಂದು ತಿಳಿಸುತ್ತಾರೆ.

೨. ಹೂಡಿಕೆದಾರರ ಆದಾಯಕ್ಕೂ ಪ್ರತಿ ತಿಂಗಳು ಹೂಡುವ ಹೂಡಿಕೆಗಳ ಮೊತ್ತಕ್ಕೂ ಸಂಬಂಧವಿದೆ. ಹೂಡಿಕೆಗಳ ಆದಾಯವನ್ನು ಅವಲಂಬಿಸಿದೆ. ಆದುದರಿಂದ ಕಡಿಮೆ ಆದಾಯವಿರುವ ಹೂಡಿಕೆದಾರರು ಭವಿಷ್ಯದ ದೃಷ್ಟಿಯಿಂದ ಹೆಚ್ಚು ಉಳಿತಾಯ ಮಾಡುತ್ತಾರೆ.

೩. ಅತಿಯಾದ ನಿಯಮ ಹಾಗೂ ಹೂಡಿಕೆಯ ಮೊತ್ತಕ್ಕೂ ಸಂಬಂಧವಿದೆ. ಆದುದರಿಂದ ಅತಿಯಾದ ನಿಯಮಾವಳಿ ಯೋಜನೆಗಳಿಗೆ ತೊಡಕಾಗಿದೆ.

೪. ಹೂಡಿಕೆ ಮಾಡುವ ಮೊತ್ತಕ್ಕೂ ಹೂಡಿಕೆದಾರರು ಅನುಭವಿಸುವ ಪರಿಷ್ಕರಣ ಕಾಲಹರಣ ತೊಂದರೆಗಳಿಗೂ ಸಂಬಂಧವಿಲ್ಲ.

೫. ಸಿಬ್ಬಂದಿ ಸಹಕಾರ ಕೊರತೆ, ಕಾರ್ಯಕರ್ತರ ಸಹಕಾರ ಕೊರತೆ ಹಾಗೂ ಅಗತ್ಯ ಮಾಹಿತಿ ಕೊರತೆ ಮತ್ತು ಹೂಡಿಕೆ ಮೊತ್ತ ಈ ನಾಲ್ಕೂ ಒಂದಕ್ಕೆ ಒಂದು ಸಂಬಂಧವಿರುವುದರಿಂದ ಈ ತೊಂದರೆಗಳು ಯೋಜನೆಗಳ ಮೇಲೆ ಋಣಾತ್ಮಕ ಪರಿಣಾಮ ಬೀರುವ ಸಾಧ್ಯತೆಗಳಿವೆ.

೬. ಹೂಡಿಕೆದಾರರ ಉದ್ಯೋಗ ಮತ್ತು ಹೂಡಿಕೆ ಮಾಡುವ ಮೊತ್ತ ಇವಕ್ಕೆ ನೇರ ಸಂಬಂಧವಿದೆ.

ಸಲಹೆ ಸೂಚನೆಗಳು

ಗ್ರಾಹಕರ ತೊಂದರೆಗಳು ಕಡಿಮೆ ಆಗುವಂತೆ, ಯೋಜನೆಗಳ ಜನಪ್ರಿಯತೆ ಹೆಚ್ಚಾಗುವಂತೆ ಮತ್ತು ಇನ್ನೂ ಹೆಚ್ಚು ಗ್ರಾಹಕ ಸ್ನೇಹಿ ಆಗುವಂತೆ ಸೇವಾ ಮಟ್ಟವನ್ನು ಉತ್ತಮಗೊಳಿಸಲು ಈ ಅಧ್ಯಯನದ ಆಧಾರದಲ್ಲಿ ಈ ಕೆಳಗಿನ ಸಲಹೆ ಸೂಚನೆಗಳನ್ನು ನೀಡಲಾಗಿವೆ.

1. **ಯೋಜನೆಗಳ ಕುರಿತು ಮಾಹಿತಿ ಸಂವಹನೆ**

ಪ್ರಪ್ರಥಮವಾಗಿ ಅಂಚೆ ಕಛೇರಿಯಲ್ಲಿ ಎಷ್ಟೋ ಜನೋಪಯೋಗೀ ಕಾರ್ಯಕ್ರಮ ಯೋಜನೆಗಳಿದ್ದರೂ ಅವುಗಳ ಮಾಹಿತಿ ಹೆಚ್ಚಿನ ಜನರಿಗೆ ಇನ್ನೂ ಸಿಕ್ಕಿಲ್ಲ ಎನ್ನುವುದು ಈ ಅಧ್ಯಯನದಲ್ಲಿ ತಿಳಿಯುತ್ತದೆ. ಆದುದರಿಂದ ಅಂಚೆ ಕಛೇರಿಗಳು ಯೋಜನೆಗಳ ಸಮಗ್ರ ಮಾಹಿತಿಯನ್ನು ಜನರಿಗೆ ತಲುಪಿಸುವ ಕೆಲಸಕ್ಕೆ ಸಜ್ಜಾಗಬೇಕು. ಈಗಿನ ತಂತ್ರಜ್ಞಾನದಲ್ಲಿ ಅದು ಕಷ್ಟವೇನೂ ಅಲ್ಲ. ಮಿಚಂಚೆ, ಚರ ದೂರವಾಣಿ ಅಂತರ್ಜಾಲ ಚತುರ ದೂರವಾಣಿ ಇವುಗಳ ಮೂಲಕ ಜನರಿಗೆ ಮಾಹಿತಿಯನ್ನು ಜರೂರಾಗಿ ತಲುಪಿಸಬೇಕು. ಸ್ಥಳೀಯ ದಿನಪತ್ರಿಕೆಗಳು, ಉದ್ಯೋಗ ಮೇಳಗಳು ಇವುಗಳಲ್ಲಿ ಅಂಚೆ ಯೋಜನೆಗಳ ವಿವರ ಇಂದಿನ ದಿನದವರೆಗೆ ಯಾರೂ ಕಂಡಿಲ್ಲ. ಈ ಮಾಧ್ಯಮಗಳನ್ನು ಸಮರ್ಥವಾಗಿ ಉಪಯೋಗಿಸಿ ಜನರತ್ತ ನಡೆಯುವುದು ಇಂದಿನ ಅಗತ್ಯ.

2. **ಠೇವಣಿ ಹಿಂಪಡೆತ ಸೌಲಭ್ಯ**

ಠೇವಣಿ ಹೂಡಿದ ಗ್ರಾಹಕರಿಗೆ ಬೇಕಾದಾಗ ಹಣ ಪಡೆಯುವ ಅನುಕೂಲತೆ ಅಂಚೆ ಕಛೇರಿಗಳಲ್ಲಿ ಸರಿಯಾಗಿ ಇಲ್ಲ. ರಾಷ್ಟ್ರೀಕೃತ ಬ್ಯಾಂಕುಗಳಿಗೆ ತನ್ನದೇ ಆದ ಅಥವಾ ಬೇರೆ ಬ್ಯಾಂಕುಗಳ ಎಟಿಎಂ ಯಂತ್ರ ಉಪಯೋಗಿಸುವ ಸೌಲಭ್ಯವನ್ನು ಗ್ರಾಹಕರಿಗೆ ನೀಡಿದೆ. ಅಂಚೆ ಕಛೇರಿಯ ಎಟಿಎಂಗಳು ಅತ್ಯಂತ ಕಡಿಮೆ ಇದೆ. ಇಡೀ ಮತ್ತು ತಾಲೂಕಿಗೆ, ಪುತ್ತೂರಿನ ಏಕೈಕ ಎಟಿಎಂ ಯಂತ್ರವೇ ಆಧಾರ. ಅಂಚೆ ಕಛೇರಿಯ ಎಟಿಎಂ ಕಾರ್ಡುಗಳು ಇತರ ಬ್ಯಾಂಕುಗಳ ಎಟಿಎಂ ಯಂತ್ರಕ್ಕೆ ಹೊಂದುವುದಿಲ್ಲ. ಆದುದರಿಂದ ಜರೂರಾಗಿ ಎಟಿಎಂ ಯಂತ್ರಗಳನ್ನು ಹೆಚ್ಚಿಸಬೇಕು ಇಲ್ಲವೆ ಇತರ ಬ್ಯಾಂಕುಗಳ ಯಂತ್ರಗಳಿಗೆ ಹೊಂದಿಕೆಯಾಗುವ ಎಟಿಎಂ ಕಾರ್ಡುಗಳನ್ನು ಗ್ರಾಹಕರಿಗೆ ವಿತರಿಸಬೇಕು.

3. **ಬಡ್ಡಿದರ ಆಕರ್ಷಕವಾಗಿರಲಿ**

ರಾಷ್ಟ್ರೀಕೃತ ಬ್ಯಾಂಕುಗಳು ಠೇವಣಿಯ ಮೇಲೆ ನೀಡುವ ಬಡ್ಡಿದರ ಅಂಚೆ ಕಛೇರಿಗಳು ನೀಡುವ ದರಕ್ಕಿಂತ ಹೆಚ್ಚು ಇದೆ. ಅದೇ ಕಾರಣಕ್ಕೆ ಹೂಡಿಕೆದಾರರು ಇತ್ತೀಚೆಗೆ ಹೆಚ್ಚು ಹೆಚ್ಚು ಅಂಚೆ ಕಛೇರಿಗಳಿಂದ ರಾಷ್ಟ್ರೀಕೃತ ಬ್ಯಾಂಕುಗಳತ್ತ ವಲಸೆ ಹೋಗುತ್ತಿದ್ದಾರೆ. ಆದುದರಿಂದ ರಾಷ್ಟ್ರೀಕೃತ ಬ್ಯಾಂಕುಗಳಿಗಿಂತ ಹೆಚ್ಚಿನ ಬಡ್ಡಿದರವನ್ನು ಅಂಚೆ ಕಛೇರಿಗಳು ಗ್ರಾಹಕರಿಗೆ ನೀಡಬೇಕು. ಅಂಚೆ

ಕಛೇರಿಗಳ ಹೆಚ್ಚಿನ ಶಾಖೆಗಳಲ್ಲಿ ಸಿಬ್ಬಂದಿ ಮಿತವಾಗಿದೆ. ಹಳ್ಳಿ ಪ್ರದೇಶದಲ್ಲಿ ಇರುವುದರಿಂದಾಗಿ ಕಛೇರಿ ಕಟ್ಟಡಗಳು ಕಡಿಮೆ ಬಾಡಿಗೆಗೆಸಿಗುತ್ತವೆ. ಈ ಕಾರಣಗಳಿಂದ ಇಲಾಖೆಯ ನಿರ್ವಹಣಾ ವೆಚ್ಚವು ಬ್ಯಾಂಕುಗಳಲ್ಲಿ ಇರುವಷ್ಟು ಇಲ್ಲ. ಈ ವೆಚ್ಚದಲ್ಲಿ ಆಗುವ ಉಳಿತಾಯವನ್ನು ಗ್ರಾಹಕರಿಗೆ ಹೆಚ್ಚಿನ ಬಡ್ಡಿ ನೀಡಲು ಉಪಯೋಗಿಸಿದರೆ ಸಂಸ್ಥೆಗೆ ದೊಡ್ಡ ಹೊರೆಯಾಗದು.

4. **ಆಕರ್ಷಣೀಯ ಕಛೇರಿಗಳ ಒಳವಿನ್ಯಾಸ**

ಹೆಚ್ಚಿನ ಅಂಚೆ ಕಛೇರಿಗಳು ಆಕರ್ಷಕವಾಗಿಲ್ಲ, ಮೂಲಭೂತ ಸೌಲಭ್ಯಗಳನ್ನು ಹೊಂದಿಲ್ಲ. ಈಗಿನ ಜನರನ್ನು ಆಕರ್ಷಿಸಲು ಇದು ಅಗತ್ಯವಾಗಿದೆ. ಆದರೆ ಬ್ಯಾಂಕುಗಳಲ್ಲಿ ಕಾಣುವ ಹವಾ ನಿಯಂತ್ರಿತ ಹಜಾರಗಳು, ಆಕರ್ಷಕ ಪೀಠೋಪಕರಣಗಳು, ಮನಸ್ಸಿಗೆ ಮುದ ನೀಡುವ ಹೂ ಕುಂಡಗಳು, ಸಂಗೀತಗಳು, ಠಾಕುಠೀಕಾಗಿ ಉಡುಪುಗಳನ್ನು ಧರಿಸಿದ ಸಿಬ್ಬಂದಿ ಇವು ಗ್ರಾಹಕರನ್ನು ಬಹಳವಾಗಿ ಆಕರ್ಷಿಸುತ್ತಿವೆ. ಅದೇ ಮಾದರಿಯಲ್ಲಿ ಅಂಚೆ ಕಛೇರಿಗಳು ನವ ನಿರ್ಮಾಣವಾಗಬೇಕಾಗಿದೆ. ಈ ವೆಚ್ಚವು ಅಂಚೆ ಕಛೇರಿಯ ವ್ಯವಹಾರವನ್ನು ಖಂಡಿತವಾಗಿಯೂ ಹೆಚ್ಚಿಸಲಿವೆ.

5. **ಪರಿಣಾಮಕಾರೀ ಸಾರ್ವಜನಿಕ ಸಂಪರ್ಕ ವ್ಯವಸ್ಥೆ**

ಅಂಚೆ ಕಛೇರಿಗಳ ಸಾರ್ವಜನಿಕ ಸಂಪರ್ಕ ಪರಿಣಾಮಕಾರಿಯಾಗಿ ಇಲ್ಲ. ವರ್ಷದ ಆರಂಭದಲ್ಲಿ ಕ್ಯಾಲೆಂಡರುಗಳು, ವರ್ಷಕ್ಕೊಮ್ಮೆ ಗ್ರಾಹಕರ ಸ್ನೇಹಕೂಟ, ದಿನಚರಿ ಪುಸ್ತಕಗಳ ಉಡುಗೊರೆಗಳು, ವಿಶೇಷ ದಿನಗಳಾದ ಕ್ರಿಸ್ಮಸ್, ಯುಗಾದಿ, ನವರಾತ್ರಿ, ಗ್ರಾಹಕರ ಜನುಮದಿನ, ಇತ್ಯಾದಿ ಸಂದರ್ಭಗಳ ಶುಭಾಶಯ ಪತ್ರಗಳು, ಸಾರ್ವಜನಿಕ ಹೊಣೆಯ ಅಂಗವಾಗಿ, ವೈದ್ಯಕೀಯ ಶಿಬಿರಗಳು, ರಸ್ತೆ ವೃತ್ತಿಗಳು, ಬೀದಿ ದೀಪಗಳು, ಹೂದೋಟಗಳು, ಇವುಗಳ ನಿರ್ವಹಣೆ, ಈ ರೀತಿಯ ಸಂಪರ್ಕ ಕೆಲಸಗಳು ಬ್ಯಾಂಕುಗಳಲ್ಲಿ ಸರ್ವೇ ಸಾಮಾನ್ಯ. ಆದರೆ ಇಂತಹ ಯಾವ ಕಾರ್ಯಗಳನ್ನೂ ಅಂಚೆ ಇಲಾಖೆ ಮಾಡುತ್ತಿಲ್ಲ. ಇವುಗಳಲ್ಲಿ ಕೆಲವನ್ನಾದರೂ ಅನುಷ್ಠಾನಗೊಳಿಸಬೇಕಾಗಿದೆ. ಇವು ಅಂಚೆ ಕಚೇರಿಯನ್ನು ಸಾಮಾನ್ಯ ಜನರೂ ಗುರುತಿಸುವಂತೆ ಮಾಡುತ್ತವೆ. ವ್ಯವಹಾರವನ್ನು ಹೆಚ್ಚಿಸುತ್ತದೆ.

6. **ತೆರಿಗೆ ಉಳಿತಾಯ ಸೌಲಭ್ಯ ವಿಸ್ತರಣೆ**

ತೆರಿಗೆ ಉಳಿತಾಯ ಅಂಚೆ ಕಛೇರಿಯ ಯೋಜನೆಗಳಲ್ಲಿ ಹೂಡಿಕೆ ಹೂಡುವ ಉದ್ದೇಶಗಳಲ್ಲಿ ಒಂದು. ಆದರೆ ಈ ಸೌಲಭ್ಯ ಅಂಚೆ ಕಛೇರಿಯ ಕೆಲವೇ ಯೋಜನೆಗಳಾಗಿವೆ. ಆದುದರಿಂದ ಅಂಚೆ ಕಛೇರಿಯಲ್ಲಿ ತೊಡಗಿಸಿದ ಎಲ್ಲಾ ಠೇವಣಿಗಳಿಗೂ ತೆರಿಗೆ ಸೌಲಭ್ಯ ದೊರೆಯುವಂತೆ ಕಾನೂನಿನ ತಿದ್ದುಪಡಿ ಆಗಬೇಕು.

7. **ಸಣ್ಣ ಉಳಿತಾಯ ಸಂಚಯನ ಯೋಜನೆ**

ಅಂಚೆ ಕಛೇರಿಗಳು ಜನರ ಸಣ್ಣ ಉಳಿತಾಯಗಳ ಸಂಚಯನ ಕೇಂದ್ರ. ಹಿಂದೆ ಕೆಲವು ಬ್ಯಾಂಕುಗಳಲ್ಲಿ ಇದ್ದ ಸಣ್ಣ ಮೊತ್ತದ ಉಳಿತಾಯಗಳ ಸಂಚಯನ ವ್ಯವಸ್ಥೆ ಬ್ಯಾಂಕುಗಳಿಂದ ಮಾಯವಾಗಿದೆ. ಅವ್ಯವಸ್ಥೆಯನ್ನು ಅಂಚೆ ಕಛೇರಿಗಳು ಪುನಃ ಪ್ರಾರಂಭಿಸಿದರೆ ಅತೀ ಸಣ್ಣ ಉಳೀತಾಯಗಾರರಿಗೆ ಪರವಾಗಬಹುದು. ಉದಾಹರಣೆಗೆ ಸಿಂಡಿಕೇಟ್ ಬ್ಯಾಂಕಿನ ಪಿಗ್ಮಿ ಯೋಜನೆ. ಅಂತೆಯೇ 'ದಿನಾ ಒಂದು ರೂಪಾಯಿ' ಎನ್ನುವ ವ್ಯವಸ್ಥೆ ಬಹು ಜನೋಪಯೋಗಿ ಠೇವಣಿ ಯೊಜನೆ. ಅತ್ಯಂತ ತಳಮಟ್ಟದ ಜನರಿಗೂ ಉಪಯೋಗವಾಗಬಲ್ಲದು.

8. **ವಿಸ್ತರಣಾ ಗವಾಕ್ಷಿ ವ್ಯವಸ್ಥೆ**

ಶಿಕ್ಷಣ ಸಂಸ್ಥೆಗಳಲ್ಲಿ, ವ್ಯಾಪಾರ ಸಂಕೀರ್ಣ ಮಳಿಗೆಗಳಲ್ಲಿ ನಗರದ ಜನನಿಬಿಡ ಪ್ರದೇಶಗಳಲ್ಲಿ ಅಥವಾ ಕುಗ್ರಾಮಗಳಲ್ಲಿ ಏಕವ್ಯಕ್ತಿ ವಿಸ್ತರಣಾ ಗವಾಕ್ಷಿಯನ್ನು ಯೋಜಿಸಬಹುದು. ಇಲ್ಲಿ ಮಿತ ಸಿಬಂದಿಯೊಡನೆ ಅಂಚೆ ಯೋಜನೆಗಳ ಕುರಿತು ತಿಳುವಳಿಕೆ ಪೂರೈಕೆ ಹಾಗೂ ಕೆಲವು ಆರ್ಥಿಕ ಸೇವೆಗಳನ್ನು ನೀಡುವಂತಹ ವ್ಯವಸ್ಥೆ ಕಲ್ಪಿಸಬಹುದು.

ಮುಂದಿನ ಸಂಶೋಧನೆಗೆ ದಿಕ್ಸೂಚಿ

ಅಂಚೆ ಕಛೇರಿಗಳು ಎಲ್ಲಾ ವರ್ಗಗಳ ಜೀವನವನ್ನು ಮುಟ್ಟುವುದರಿಂದ ಈ ಇಲಾಖೆಯು ಹಲವು ಕ್ಷೇತ್ರಗಳ ಕುರಿತು ಸಂಶೋಧನೆ ಆಗಬೇಕಾಗಿದೆ. ಈ ಕ್ಷೇತ್ರದಲ್ಲಿ ಸಂಶೋಧನೆಗೆ ವಿಪುಲ ಅವಕಾಶಗಳಿವೆ. ಸಿಬ್ಬಂದಿಯ ಉತ್ಪಾದನಾ ಸಾಮರ್ಥ್ಯ, ಸಿಬ್ಬಂದಿ ಉದ್ಯೋಗ ಭಡ್ತಿ, ಲಾಭಾಂಶ ವಿನಿಯೋಗ, ಸಾರ್ವಜನಿಕ ಸೇವಾ ಕಾರ್ಯಗಳು, ಇವುಗಳು ಸಂಶೋಧನೆಗೆ ವಿಷಯಗಳು. ಈ ದಿಕ್ಕಿನತ್ತ ತೀವ್ರ ಚಿಂತನೆ ಅಗತ್ಯ.

ಮುಕ್ತಾಯ

ಅತ್ಯಂತ ವಿಶಾಲವಾದ ಕಾರ್ಯ ಬಾಹುಳ್ಯವುಳ್ಳ ಅಂಚೆ ಕಛೇರಿಯಂತಹ ಸಂಸ್ಥೆ ಇನ್ನೊಂದಿಲ್ಲ. ಆರ್ಥಿಕ ಸೇವೆಗಳು, ಬ್ಯಾಂಕಿಂಗ್ ಸೇವೆಗಳು, ವಿಮಾ ಸೇವೆಗಳು, ಅಂಚೆ ಸೇವೆಗಳು ಇತ್ಯಾದಿಗಳನ್ನು ತನ್ನ ಕಾರ್ಯ ಪರಿಧಿಯೊಳಗೆ ಹೊಂದಿರುವ ಸಂಸ್ಥೆ ಇನ್ನೊಂದಿಲ್ಲ. ಜನರ ದೈನಂದಿನ ಜೀವನಕ್ಕೆ ಹತ್ತಿರವಾಗಿ ಕಾರ್ಯ ನಿರ್ವಹಿಸುವ ಅಂಚೆ ಕಛೇರಿ ನಿಜಕ್ಕೂ ಅತಿ ಅಪೂರ್ವ. ದೇಶದ ಮೂಲೆ ಮೂಲೆಗಳಲ್ಲಿ ಹರಿ ಹಂಚಾಗಿ ಕುಳಿತಿರುವ ಸಂಪತ್ತನ್ನು ಸಮರ್ಥವಾಗಿ ಸಂಗ್ರಹಿಸಿ ಕ್ರೋಢೀಕರಿಸಿ ದೇಶದ ಅಭಿವೃದ್ಧಿಗಾಗಿ ಹರಿಯುವಂತೆ ಮಾಡುವ ಅಂಚೆ ಕಛೇರಿಗಳ ಕಾರ್ಯಸ್ತುತ್ಯಾರ್ಹ. ಆದರೆ ಎಲ್ಲಾ ಮಾನವ ನಿರ್ಮಿತ ಸಂಸ್ಥೆಗಳಲ್ಲಿ ಇರುವಂತೆ ಅಂಚೆ ಕಛೇರಿ ಕಾರ್ಯ ನಿರ್ವಹಣೆಯಲ್ಲಿ ಕುಂದುಕೊರತೆಗಳು ಸಾಮಾನ್ಯ. ಇವುಗಳನ್ನು ನಿವಾರಿಸಿಕೊಂಡರೆ ಅಂಚೆ ಕಛೇರಿಯು ಹಾಗೂ ಅವರ ಉಳಿತಾಯ ಯೋಜನೆಗಳು ಜನರಿಗೆ ಒಂದು ಅದ್ಭುತ ಕೊಡುಗೆಯಾಗುವುದರಲ್ಲಿ ಸಂಶಯವಿಲ್ಲ.

ಅನುಬಂಧಗಳು

ಪರಾಮರ್ಶನ ಗ್ರಂಥಗಳು

ಪುಸ್ತಕಗಳು

- ಅವಧಾನಿ ಬಿ.ಎ. (೨೦೦೩), 'ಇನ್ವೆಸ್ಟ್ ಮೆಂಟ್ಸ್ ಆ್ಯಂಡ್ ಸೆಕ್ಯುರಿಟೀಸ್ ಮಾರ್ಕೆಟ್ ಇನ್ ಇಂಡಿಯಾ', ಹಿಮಾಲಯ ಪಬ್ಲಿಷಿಂಗ್ ಹೌಸ್, ನವದೆಹಲಿ.
- ಅವಧಾನಿ ಬಿ.ಎ. (೨೦೦೧), 'ಇನ್ವೆಸ್ಟ್‌ಮೆಂಟ್ ಮ್ಯಾನೇಜ್‌ಮೆಂಟ್' ಹಿಮಾಲಯ ಪಬ್ಲಿಷಿಂಗ್ ಹೌಸ್, ಮುಂಬಯಿ.
- ಅವಧಾನಿ ಬಿ.ಎ. (೨೦೦೧), ಇನ್ವೆಸ್ಟ್‌ಮೆಂಟ್ ಫಾರ್ ಬಿಗಿನರ್ಸ್, ಹಿಮಾಲಯ ಪಬ್ಲಿಷಿಂಗ್ ಹೌಸ್, ನವದೆಹಲಿ.
- ಆಮ್ಲಿಂಗ್, ಫ್ರೆಡ್ರಿಕ್ಸ್ (೨೦೦೨), ಇನ್ವೆಸ್ಟ್‌ಮೆಂಟ್ಸ್ ಏನ್ ಇಂಟ್ರೊಡಕ್ಷನ್ ಟು ಅನಾಲಿಸಿಸ್ ಅಂಡ್ ಮ್ಯಾನೇಜ್‌ಮೆಂಟ್ ಈನ್‌ಗ್ಲ್ ವುಡ್ ಕ್ಲಿಫ್ ಎನ್.ಜೆ. ಪ್ರಿಂಟಿಸ್‌ಹಾಲ್.
- ಭಲ್ಲಾ ವಿ.ಕೆ. (೨೦೦೯), ಇನ್ವೆಸ್ಟ್‌ಮೆಂಟ್ ಮ್ಯಾನೇಜ್‌ಮೆಂಟ್, ಸುಲ್ತಾನ್‌ಚಾಂದ್ ಆಂಡ್ ಸನ್ಸ್, ನ್ಯೂಡೆಲ್ಲಿ.
- ಬ್ರೌಸ್‌ಲೀ ಓ.ಹೆಚ್. ಆಂಡ್ ಇ.ಡಿ. ಅಲೆನ್ "ಇಕೊನೋಮಿಕ್ಸ್ ಆಫ್ ಪಬ್ಲಿಕ್ ಫೈನಾನ್ಸ್" ಪ್ರಿಂಟಿಸ್ ಹಾಲ್ ನ್ಯೂಯಾರ್ಕ್.
- ಕೋಟ್ಲೆ ಸಿ.ಸಿ. ಎಂಡ್ ವ್ಹಿಟ್‌ಮ್ಯಾನ್ ಡಬ್ಲ್ಯೂ ಟಿ. (೨೦೦೩), "ಇನ್ವೆಸ್ಟ್‌ಮೆಂಟ್ ಟೈಮಿಂಗ್ಸ್" ನ್ಯೂಯಾರ್ಕ್ ಮ್ಯಾಕ್ ಗ್ರಾ ಹಿಲ್.
- ಕ್ಲೆಂಡಿನಿನ್, ಜಾನ್ ಸಿ ಅಂಡ್ ಕ್ರಿಸ್ಟೀ ಜಾರ್ಜ್ ಎ (೨೦೦೯) ಇಂಟ್ರೊಡಕ್ಷನ್ ಟು ಇನ್ವೆಸ್ಟ್‌ಮೆಂಟ್ಸ್ ನ್ಯೂಯಾರ್ಕ್ ಮ್ಯಾಕ್ ಗ್ರಾ ಹಿಲ್.
- ಕಾರ್ ಜೆ.ಎಲ್. (೨೦೦೯), ಇನ್ವೆಸ್ಟ್‌ಮೆಂಟ್ ಇಕೊನೊಮಿಕ್ಸ್ ಕ್ಯಾಲಿಫೋರ್ನಿಯಾ ಸೇಜ್.
- ಚಂದ್ರ ಪೂಜಾರಿ ಎಂ. (೨೦೦೯), ಸಂಶೋಧನೆ ಏನು? ಏಕೆ? ಹೇಗೆ?, ಪ್ರಸಾರಂಗಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಗುಪ್ತಾ ಎಸ್.ಪಿ. (೨೦೦೮), ಸ್ಟ್ಯಾಟಿಸ್ಟಿಕಲ್ ಮೆಥಕ್ಸ್, ಸುಲ್ತಾನ್‌ಚಾಂದ್ ಆಂಡ್ ಸನ್ಸ್, ನ್ಯೂಡೆಲ್ಲಿ.

ನಿಯತಕಾಲಿಕಗಳು

- ದೇಸಾಯಿ ಬಿ.ಎಂ. (೧೯೮೩) "ರೀಸರ್ಚ್ ಆನ್ ರೂರಲ್ ಸೇವಿಂಗ್ಸ್ ಇನ್ ಇಂಡಿಯಾ" ವಿಕಲ್ಪ ವಾಲ್ಯೂಮ್ ೮ ನಂ. ೨ ಏಪ್ರಿಲ್ – ಜೂನ್ ೧೯೮೩ ಪಿಪಿ ೧೩೫-೧೪೩.
- ರಿತಿಕಾ ಅಗ್ರವಾಲ್ "ಐಡೆಂಟಿಫೈಯಿಂಗ್ ಫ್ಯಾಕ್ಟರ್ಸ್ ಇನ್ಫ್ಲುಯೆನ್ಸಿಂಗ್ ಪ್ರಿಫರೆನ್ಸ್ ಟವರ್ಡ್ಸ್ ಪೋಸ್ಟ್ ಆಫೀಸ್ ಸೇವಿಂಗ್ಸ್ ಸ್ಕೀಮ್ಸ್" ಇಂಟರ್ ನ್ಯಾಷನಲ್ ಜರ್ನಲ್ ಆಫ್ ರೀಸರ್ಚ್ ಇನ್ ಮ್ಯಾನೇಜ್‌ಮೆಂಟ್ ಆಂಡ್ ಟೆಕ್ನಾಲಜಿ ವಾಲ್ಯೂಂ ೨ ನಂ. ೬ ಡಿಸೆಂಬರ್ ೨೦೧೨.
- ಶಾಂತಿಲಾಲ್ ಸರೂಪ್ರಿಯ (೧೯೬೩) "ಇಂಡಿವಿಜುವಲ್ ಸೇವಿಂಗ್ಸ್ ಇನ್ ಆನ್ ಅನ್ ಡೆವೆಲಪ್ಡ್ ಇಕೊನೊಮಿ – ಇಂಡಿಯಾ" ಎ ಕೇಸ್ ಸ್ಟಡಿ ದಿ ಇಕಾನಾಮಿಕ್ ವೀಕ್ಲಿ ಜೂನ್ ೨೨ ಪಿಪಿ ೪೯೫-೧೦೦೧
- ಸದರ್ನ್ ಇಕೊನೊಮಿಸ್ಟ್ ವಿವಿಧ ಸಂಚಿಕೆಗಳು

ವರದಿಗಳು

- ದಕ್ಷಿಣ ಕನ್ನಡ ಜಿಲ್ಲೆಯ ಅಂಕಿ ಅಂಶಗಳ ನೋಟ ೨೦೧೪-೧೫ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ, ದಕ್ಷಿಣ ಕನ್ನಡ, ಮಂಗಳೂರು, ಸದರ್ನ್ ಇರಾಸ್‌ಮಿಸ್

ಅಂತರ್ಜಾಲ

- ಇಂಡಿಯಾಪೋಸ್ಟ್.ಗವ್.ಇನ್
- ಇಂಡಿಯಾಪೋಸ್ಟ್.ಆರ್ಗ್

ಪ್ರಶ್ನಾವಳಿ

ಅಂಚೆ ಕಛೇರಿ ಉಳಿತಾಯ ಯೋಜನೆಗಳ ಕುರಿತು ಪುತ್ತೂರು ಪಟ್ಟಣದ ಮಹಿಳಾ ಹೂಡಿಕೆದಾರರ ಅನಿಸಿಕೆಗಳ ಒಂದು ಅಧ್ಯಯನ

೧. ವಯಸ್ಸು

೧. ೧೯ ವರ್ಷಗಳಿಗಿಂತ ಕಡಿಮೆ ☐ ೨. ೧೯–೨೫ ವರ್ಷ ☐

೩. ೨೫–೩೫ ವರ್ಷಗಳು ☐ ೪. ೪೫ ವರ್ಷಗಳಿಗಿಂತ ಅಧಿಕ ವಯಸ್ಸಿನವರು ☐

೨. ವಿದ್ಯಾರ್ಹತೆ

೧. ಪದವಿ ಪೂರ್ವ ☐ ೨. ಪದವಿ ☐

೩. ಸ್ನಾತಕೋತ್ತರ ☐ ೪. ಸ್ನಾತಕೋತ್ತರ ಪದವಿಗಿಂತ ಹೆಚ್ಚು ☐

೩. ವೈವಾಹಿಕ

೧. ವಿವಾಹವಾಗಿದೆ ☐ ೨. ವಿವಾಹವಾಗಿಲ್ಲ ☐

೪. ಉದ್ಯೋಗ

೧. ವ್ಯಾಪಾರ ☐ ೨. ಮನೆವಾರ್ತೆ ☐

೩. ಸರ್ಕಾರಿ ಕೆಲಸ ☐ ೪. ವ್ಯವಸಾಯ ☐

೫. ಖಾಸಗಿ ಸಂಸ್ಥೆಗಳಲ್ಲಿ ಉದ್ಯೋಗ ☐ ೬. ಸೇವಾ ನಿವೃತ್ತಿ ಹೊಂದಿದವರು ☐

೭. ಇತರ (ಆಯಾ, ಕೂಲಿ, ಇತ್ಯಾದಿ) ☐

೫. ವಾರ್ಷಿಕ ಆದಾಯ

೧. ೧ ಲಕ್ಷಕ್ಕಿಂತ ಕೆಳಗೆ ☐ ೨. ೧ ಲಕ್ಷ– ೫ ಲಕ್ಷ ☐

೩. ೫ ಲಕ್ಷ– ೧೦ ಲಕ್ಷ ☐ ೪. ೧೦ ಲಕ್ಷಕ್ಕಿಂತ ಹೆಚ್ಚು ☐

೬. ಯಾವ ಅವಧಿ ಹೂಡಿಕೆಗೆ ನೀವು ಪ್ರಾಶಸ್ತ್ಯ ನೀಡುತ್ತೀರಿ?

೧. ಅಲ್ಪಾವಧಿ (ಎರಡು ವರ್ಷಗಳ ಕೆಳಗೆ) ☐ ೨. ದೀರ್ಘಾವಧಿ (ಎರಡು ವರ್ಷಕ್ಕಿಂತ ಹೆಚ್ಚು ☐

೭. ಹೂಡಿಕೆ ಮಾಡುವ ಮೊದಲು ಈ ಕೆಳಗಿನ ಯಾವ ವಿಷಯಕ್ಕೆ ಹೆಚ್ಚಿನ ಗಮನ ನೀಡುತ್ತೀರಿ?

೧. ಪ್ರತಿಫಲ ☐ ೨. ತೆರಿಗೆ ಉಳಿತಾಯ ☐

೩. ನಷ್ಟ ಭಯ ☐ ೪. ಕನಿಷ್ಟ ಹೂಡಿಕೆ ☐

೫. ಇತರೆ ☐

೮. **ಅಂಚೆ ಕಛೇರಿಯ ಈ ಕೆಳಗಿನ ಯಾವ ಉಳಿತಾಯ ಯೋಜನೆಗಳ ಕುರಿತು ನಿಮಗೆ ತಿಳುವಳಿಕೆ ಇದೆ?**

೧. ಉಳಿತಾಯ ಠೇವಣಿ
೨. ಅವಧಿ ಠೇವಣಿ ☐
೩. ಆವರ್ತ ಠೇವಣಿ
೪. ಕಿಸಾನನ ವಿಕಾಸ ಪತ್ರ ☐
೫. ರಾಷ್ಟ್ರೀಯ ಉಳಿತಾಯ ಪತ್ರ
೬. ಸಾರ್ವಜನಿಕ ಭವಿಷ್ಯ ನಿಧಿ ☐
೭. ಮಾಸಿಕ ಆದಾಯ ಯೋಜನೆ
೮. ಜೀವ ವಿಮೆ ☐
೯. ಸರ್ಕಾರಿ ಪಿಂಚಣಿದಾರರ ಠೇವಣಿ
೧೦. ಸುಕನ್ಯ ಯೋಜನೆ ☐

೯. ಈ ಕೆಳಗಿನ ಯಾವ ಮೂಲದಿಂದ ಅಂಚೆ ಕಛೇರಿ ಉಳಿತಾಯ ಯೋಜನೆ ಕುರಿತು ನಿಮಗೆ ಪ್ರಪ್ರಥಮವಾಗಿ ಮಾಹಿತಿ ಸಿಕ್ಕಿದೆ.

೧. ಜಾಹಿರಾತು ☐
೨. ಸಂಬಂಧಿಕರು/ಗೆಳೆಯರು ☐
೩. ಅಂಚೆ ಕಛೇರಿಯ ಉದ್ಯೋಗಿಗಳು ☐
೪. ಕಾರ್ಯಕರ್ತ ☐
೫. ಸಹೋದ್ಯೋಗಿಗಳು ☐

೧೦. ಅಂಚೆ ಕಛೇರಿಯ ಉಳಿತಾಯ ಯೋಜನೆಗಳಲ್ಲಿ ಹೂಡಿಕೆಯನ್ನು ಯಾವ ಉದ್ದೇಶಕ್ಕಾಗಿ ಮಾಡಿರುತ್ತೀರಿ? ನಿಮ್ಮ ಆದ್ಯತೆಯಂತೆ ಅಂಕ ನೀಡಿರಿ. (ಅತ್ಯಂತ ಮುಖ್ಯ ೧ ಅಂಕ ಹೀಗೆ)

ಅನುಕ್ರಮ ಸಂಖ್ಯೆ	**ಉದ್ದೇಶ**	**ನೀವು ಕೊಡುವ ಅಂಕ**
೧.	ತುರ್ತು ಅಗತ್ಯವನ್ನು ನಿಭಾಯಿಸಲು	
೨.	ಕುಟುಂಬದ ಭವಿಷ್ಯದ ಅವಶ್ಯಕತೆ ಪೂರೈಸಲು	
೩.	ವೈವಾಹಿಕ ಖರ್ಚುಗಳ ನಿಭಾವಣೆ	
೪.	ನಿರಂತರ ಆದಾಯ	
೫.	ನಿವೃತ್ತಿ ಜೀವನದ ಭದ್ರತೆಗಾಗಿ	
೬.	ತೆರಿಗೆ ಹೊರೆಯನ್ನು ಕಡಿಮೆ ಮಾಡಲು	

೧೧. ಈ ಕೆಳಗಿನ ಯಾವ ಯೋಜನೆಯಲ್ಲಿ ನೀವು ಹಣ ತೊಡಗಿಸಿದ್ದೀರಿ?

೧. ಉಳಿತಾಯ ಠೇವಣಿ ☐
೨. ಅವಧಿ ಠೇವಣಿ ☐
೩. ಆವರ್ತಠೇವಣಿ ☐
೪. ಕಿಸಾನನ ವಿಕಾಸ ಪತ್ರ ☐
೫. ರಾಷ್ಟ್ರೀಯ ಉಳಿತಾಯ ಪತ್ರ ☐
೬. ಸಾರ್ವಜನಿಕ ಭವಿಷ್ಯ ನಿಧಿ ☐
೭. ಮಾಸಿಕ ಆದಾಯ ಯೋಜನೆ ☐
೮. ಜೀವ ವಿಮೆ ☐
೯. ಸರ್ಕಾರಿ ಪಿಂಚಣಿದಾರರ ಠೇವಣಿ ☐
೧೦. ಸುಕನ್ಯ ಯೋಜನೆ ☐

೧೨. ನಿಮ್ಮ ಹೂಡಿಕೆಯ ಯೋಜನೆಗಳ ಅವಧಿ ಮುಕ್ತಾಯದಲ್ಲಿ ಠೇವಣಿ ಹಣವನ್ನು ಯಾವ ರೀತಿಯಾಗಿ ವಿನಿಯೋಗಿಸುತ್ತೀರಿ?

೧. ನವೀಕರಣ ☐

೨. ಅಂಚೆ ಕಛೇರಿಯ ಇತರ ಯೋಜನೆಗಳಲ್ಲಿ ಹೂಡಿಕೆ ☐

೩. ಅಂಚೆ ಕಛೇರಿ ಹೊರತು ಪಡಿಸಿ ಇತರ ಯೋಜನೆಗಳಲ್ಲಿ ಹೂಡಿಕೆ ☐

೪. ಹೂಡಿಕೆಯ ಹಿಂಪಡೆತ ☐

೧೩. ಪ್ರತಿ ತಿಂಗಳು ನಿಮ್ಮ ಹೂಡಿಕೆಯ ಮೊತ್ತ

೧. ರೂ. ೧೦೦೦ಕ್ಕಿಂತ ಕಡಿಮೆ ☐ ೨. ರೂ. ೧೦೦೦-೩೦೦೦ ☐

೩. ರೂ. ೩೦೦೦ – ೬೦೦೦ ☐ ೪. ೬೦೦೦ಕ್ಕಿಂತ ಹೆಚ್ಚು ☐

೧೪. ಎಷ್ಟು ವರ್ಷಗಳಿಂದ ನೀವು ಅಂಚೆ ಕಛೇರಿ ಉಳಿತಾಯ ಯೋಜನೆಗಳಲ್ಲಿ ಹೂಡಿಕೆಯನ್ನು ಮಾಡುತ್ತಿದ್ದೀರಿ?

೧. ೨ ವರ್ಷಕ್ಕಿಂತ ಕಡಿಮೆ ☐ ೨. ೨-೫ ವರ್ಷಗಳು ☐

೩. ೬-೧೦ ವರ್ಷಗಳು ☐ ೪. ೧೦ ವರ್ಷಕ್ಕೂ ಮೀರಿ ☐

೧೫. ಈ ಕೆಳಗಿನ ಹೂಡಿಕೆ ಅವಕಾಶಗಳಲ್ಲಿ ನಿಮ್ಮ ಅದ್ಯತೆಯಂತೆ ಶ್ರೇಯಾಂಕ ನೀಡಿರಿ. (ನಿಮ್ಮ ಅತ್ಯಂತ ಮೆಚ್ಚುಗೆಯ ಅವಕಾಶ ೧ ಅಂಕ – ೬ ರ ತನಕ)

೧. ಅಂಚೆ ಕಛೇರಿಯ ಉಳಿತಾಯ ಯೋಜನೆಗಳು	
೨. ಸಾರ್ವಜನಿಕ ಕ್ಷೇತ್ರದ ರಾಷ್ಟ್ರೀಕೃತ ಬ್ಯಾಂಕುಗಳು	
೩. ಇತರ ಖಾಸಗೀ ಬ್ಯಾಂಕುಗಳು	
೪. ವಿಮಾ ಕಂಪೆನಿಗಳ ಯೋಜನೆಗಳು	
೫. ಶೇರು ಮಾರುಕಟ್ಟೆ	
೬. ಖಾಸಗಿ ಹಣಕಾಸು ಸಂಸ್ಥೆಗಳು	

೧೬. ಅಂಚೆ ಕಛೇರಿಯಲ್ಲಿಯೇ ಉಳಿತಾಯ ಮಾಡುವಂತೆ ನಿಮ್ಮನ್ನು ಅತೀ ಹೆಚ್ಚು ಪ್ರೇರೇಪಿಸಿದ ಕಾರಣಗಳು ಯಾವುವು? (ನಿಮ್ಮ ಆದ್ಯತೆಯಂತೆ ೧ ರಿಂದ ೭ ರ ತನಕ ಶ್ರೇಯಾಂಕ ನೀಡಿರಿ)

೧. ಠೇವಣಿಗಳ ಭದ್ರತೆ / ನಂಬಿಕೆ	
೨. ಇನ್ನೊಬ್ಬ ಖಾತೆದಾರನು ನಿಮ್ಮನ್ನು ಪರಿಚಯಿಸುವ ಅಗತ್ಯ ಇಲ್ಲ	
೩. ಸಿಬ್ಬಂದಿಯ ಆತ್ಮೀಯತೆ ಹಾಗೂ ಉತ್ತಮ ಸೇವಾ ಗುಣಮಟ್ಟ	
೪. ಯೋಜನೆಗಳ ವೈವಿಧ್ಯತೆ	
೫. ನಿಯಮಗಳಲ್ಲಿ ಸಡಿಲಿಕೆ ಹಾಗೂ ಹೊಂದಾಣಿಕೆ	
೬. ದೇಶಾದ್ಯಂತ ಏಕರೂಪದ ಯೋಜನಾ ಸೌಲಭ್ಯ	
೭. ತೆರಿಗೆ ಕಡಿತ ಸೌಲಭ್ಯ	

೧೭. ಅಂಚೆ ಕಛೇರಿಯ ಉಳಿತಾಯ ಯೋಜನೆಗಳಿಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳ ಬಗ್ಗೆ ನಿಮ್ಮ ಅಭಿಪ್ರಾಯವೇನು? (ನಿಮ್ಮ ಆಯ್ಕೆಯಂತೆ ಗುರುತು ಹಾಕಿ).

ಅನುಕ್ರಮ ಸಂಖ್ಯೆ	ಅಭಿಪ್ರಾಯ	ಬಲವಾದ ಸಮ್ಮತಿ	ಸಮ್ಮತಿ	ಸಮ್ಮತಿಯು ಇಲ್ಲ/ಅಸಮ್ಮತಿಯು ಇಲ್ಲ	ಅಸಮ್ಮತಿ	ಬಲವಾದ ಅಸಮ್ಮತಿ
೧.	ಉಳಿತಾಯ ಯೋಜನೆಗಳಲ್ಲಿ ಹೂಡಿಕೆ ಅವಧಿ ಪೂರೈಸಿದ ಹೂಡಿಕೆಯ ಮೊತ್ತವನ್ನು ಕೂಡಲೇ ಮರುಪಾವತಿ ಮಾಡಿರುತ್ತಾರೆ.					
೨.	ಉಳಿತಾಯಕ್ಕೆ ಅಂಚೆ ಕಛೇರಿಯಿಂದ ಪ್ರೋತ್ಸಾಹ ಸಿಕ್ಕಿದೆ.					
೩.	ಅಂಚೆ ಕಛೇರಿ ಹೂಡಿಕೆಯು ತೆರಿಗೆ ಉಳಿತಾಯಕ್ಕೆ ಸಹಕಾರಿಯಾಗಿದೆ.					
೪.	ಅಂಚೆ ಕಛೇರಿ ಉಳಿತಾಯ ಯೋಜನೆಯು ಜೀವನಕ್ಕೆ ಭದ್ರತೆ ಒದಗಿಸಿದೆ.					

೧೮. ಅಂಚೆ ಕಛೇರಿಯಲ್ಲಿ ಹೂಡಿಕೆ ಮಾಡುವಾಗ ನೀವು ಅನುಭವಿಸಿದ ತೊಂದರೆಗಳು/ತೊಡಕುಗಳ ಬಗ್ಗೆ ನಿಮ್ಮ ಅಭಿಪ್ರಾಯ (ನಿಮ್ಮ ಆಯ್ಕೆಯಂತೆ ಗುರುತು ಹಾಕಿ).

ಅನುಕ್ರಮ ಸಂಖ್ಯೆ	ತೊಡಕು	ಬಲವಾದ ಅಸಮ್ಮತಿ	ವಿರೋಧ	ಸಮ್ಮತಿಯು ಇಲ್ಲ, ವಿರೋಧವೂ ಇಲ್ಲ	ಸಮ್ಮತಿ	ಬಲವಾದ ಸಮ್ಮತಿ
೧.	ಅತಿಯಾದ ನಿಯಮಾವಳಿ					
೨.	ಪರಿಷ್ಕರಣೆಯಲ್ಲಿ ಕಾಲಹರಣ ಮಾಡಿರುತ್ತಾರೆ					
೩.	ಸಿಬ್ಬಂದಿಯ ಸಹಾಯದ ಕೊರತೆ ಇತ್ತು					
೪.	ಕಾರ್ಯಕರ್ತರ ಸಹಾಯದ ಕೊರತೆ ಇತ್ತು					
೫.	ಅಗತ್ಯ ಮಾಹಿತಿ ನೀಡಿಲ್ಲ					

೧೯. ಅಂಚೆ ಕಛೇರಿ ಉಳಿತಾಯ ಯೋಜನೆಗಳಲ್ಲಿ ಹೂಡಿಕೆಯ ಕುರಿತು ನಿಮ್ಮ ಒಟ್ಟು ಅಭಿಪ್ರಾಯವೇನು?

೧. ಅತೃಪ್ತಿಕರ ☐ ೨. ಸಾಮಾನ್ಯ ☐ ೩. ಉತ್ತಮ ☐ ೪. ಅತ್ಯುತ್ತಮ ☐ ೫. ಪರಮೋತ್ತಮ ☐

೨೦. ಅಂಚೆ ಕಛೇರಿ ಸಿಬ್ಬಂದಿಗಳು ಗ್ರಾಹಕರಿಗೆ ಉತ್ತಮ ರೀತಿಯ ಸೇವೆ ನೀಡುತ್ತಿದ್ದಾರೆ ಎಂದು ನೀವು ಭಾವಿಸುತ್ತೀರಾ?

೧. ಹೌದು ☐ ೨. ಇಲ್ಲ ☐

೨೧. ಅಂಚೆ ಕಛೇರಿಯ ಯೋಜನೆಗಳಲ್ಲಿ ಹೂಡಲು ಇತರರಿಗೆ ಶಿಫಾರಸ್ಸು ಮಾಡುತ್ತೀರಾ?

೧. ಹೌದು ☐ ೨. ಇಲ್ಲ ☐

೨೨. ಅಂಚೆ ಕಛೇರಿಯ ಉಳಿತಾಯ ಯೋಜನೆಗಳು ಬೇರೆ ಸಂಸ್ಥೆಗಳ ಯೋಜನೆಗಳಿಗಿಂತ ಉತ್ತಮವೆಂದು ಭಾವಿಸುತ್ತೀರಾ?

೧. ಹೌದು ☐ ೨. ಇಲ್ಲ ☐

೨೩. ಅಂಚೆ ಕಛೇರಿ ಉಳಿತಾಯ ಯೋಜನೆಗಳ ಕಾರ್ಯ ವಿಧಾನಗಳ ಬಗ್ಗೆ ಯಾವ ಸಲಹೆ ಸೂಚನೆಗಳನ್ನು ಕೊಡಲು ಬಯಸುತ್ತೀರಿ?

****

KARNATAKA MAP





DAKSHINA KANNADA
DISTRICT
N
UDUPI
CHIKMAGALUR
HASSAN
KODAGU
KERALA
ARABIAN SEA
NH-17
NH-48
To Hassan
To Kannur
Bangarabaliger
Naravi
Navuru
Shiradi
Kedal
Kinnigoli
Kanapadi
Mundaje
Katipalla
Nananjimale
Neriya
Siddakatte
NELTHANGADY
Punjalkatte
Thokur
Herike
Kannur
BANTWAL
Kokkada
MANGALOORU
Mani
Uppinangadi
Gundia
Peramunnur
Kurnadu
Yera
PUTTUR
Kudmuru
Kadaba
Anekal
Valamegru
Kumaradhara
Muchil
Padnuru
Kallaja
Hiriadke
SULLIA
Bedrapane
Kolucheru
LEGEND
National Highway
Major Road
Railway
District Boundary
State Boundary
River
District HQ
Other Town
Major Town
Map not to Scale
Copyright © 2013 www.mapsofindia.com
(Updated on 20th February 2013)



abaka
Mura
Kodippadi Rd
Puttur Uppinangadi Rd
Puttur
275
275
100
100